TIGHT BINDING BOOK

TEXT FLY
WITHIN THE
BOOK ONLY

THE BOOK WAS
DRENCHED

UNIVERSAL LIBRARY

OU_198204
UNIVERSAL LIBRARY

ಶಾರದಾ ಸಾಹಿತ್ಯ ಮಾಲೆಯ ೫ನೇ ಕಿರಣ
ಶಾರದಾ ಸಾಹಿತ್ಯಮಾಲೆಯ ೫ನೇ ಕಿರಣ

---

# ಮುಗುಳು ನಗೆ

ಮು ಗು ಳು ನ ಗೆ

ನಗೆಬರಹಗಳು

ಲೇಖಕರು :

ಶ್ರೀ. ‘ಜಿಬಿಜ್’

ಪ್ರಕಾಶಕರು ;

**ಶಾರದಾ ಪ್ರಕಟನಾಲಯ**

ಅರಳೇಪೇಟೆ, ಬೆಂಗಳೂರು ನಗರ.

ವಾರ್ಷಿಕ ಚಂದಾ :

ಐದು ರೂಪಾಯಿಗಳು

(ಅಂಚೆ ವೆಚ್ಚ ಸೇರಿ)

ಪ್ರಥಮ ಮುದ್ರಣ

ಆಗಸ್ಟ್ ೧೯೪೭

(ಎಲ್ಲಾ ಹಕ್ಕುಗಳೂ ಲೇಖಕರ ವಶ)

ಬೆಲೆ

೧-೪-೦

ಮುದ್ರಕರು :

**ಶ್ರೀ ಲಲಿತಾ ಪ್ರಿಂಟಿಂಗ್ ವರ್ಕ್ಸ್**

ಶೇಷಾದ್ರಿಪುರಂ,

ಬೆಂಗಳೂರು ನಗರ.

# 'ಮುಗುಳ್ನಗೆ' ನಗುವಾಗ—

ನಮ್ಮ ಮಾಲೆಯು ಎರಡನೇ ವರ್ಷವು **'ಮುಗುಳುನಗೆ'**ಯೊಂದಿಗೆ ಆರಂಭವಾಗುತ್ತಿದೆ. ನಮ್ಮ ಚಂದಾದಾರರಲ್ಲಿ ಅನೇಕರು ಎರಡನೆಯ ವರ್ಷದ ಚಂದಾ ಹಣವನ್ನು ಈಗಾಗಲೆ ಕಳುಹಿಸಿದ್ದಾರೆ. ಇನ್ನೂ ಕೆಲವರಿಂದ ಚಂದಾ ಹಣವು ತಲಪಿಲ್ಲ. ಹೊಸವರ್ಷದ ಚಂದಾ ಹಣವನ್ನು ಇನ್ನೂ ಕಳುಹಿಸದಿದ್ದವರು ಕೂಡಲೆ ಕಳುಹಿಸಿಕೊಟ್ಟು ಮಾಲೆಯೊಂದಿಗೆ ಸಹಕರಿಸಬೇಕಾಗಿ ಪ್ರಾರ್ಥನೆ.

**'ಮುಗುಳುನಗೆ'**ಯು ನಗೆಬರಹಗಳ ಸಂಗ್ರಹ. ಹೊಸ ಬರಹಗಾರರು ಬೆಳಕಿಗೆ ಬರುತ್ತಿರುವ ಈ ಸಂದರ್ಭದಲ್ಲಿ, ಲಘುಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಪಡೆಯುತ್ತಿರುವ ಶ್ರೀಮಾನ್ ಜಿ. ಬಿ. ರಾಜ್‌ರವರ ಪ್ರಥಮ ಕೃತಿಯಿದು. ಈ ಸಂಕಲನದಲ್ಲಿ ಕತೆಗಳಿವೆ, ಲಘು ಪ್ರಬಂಧವಿದೆ, ಹರಟೆಗಳಿವೆ—ಮೇಲಾಗಿ ಹೊಸರೀತಿಯ ಬರವಣಿಗೆಯಿದೆ. ವೈವಿಧ್ಯತೆಯಿಂದ ಕೂಡಿದ ಈ ಸಂಕಲನವು ಓದುಗರಿಗೆ ರುಚಿಸೀತೆಂದು ನಾವು ಆಶಿಸಿದ್ದೇವೆ.

ಮಾಲೆಗಾಗಿ **'ಮುಗುಳುನಗೆ'**ಯನ್ನು ಬರೆದುಕೊಟ್ಟ ಶ್ರೀಮಾನ್ ಜಿ. ಬಿ. ರಾಜ್‌ರವರಿಗೂ, ಪುಸ್ತಕದ ಮುದ್ದಾದ ಮುದ್ರಣಕ್ಕೆ ಕಾರಣರಾದ ಶ್ರೀ. ಮುನಿರಾಮಯ್ಯನವರಿಗೂ, ರಕ್ಷಾಪತ್ರದ ಚಿತ್ರದ ರಚನೆಯಲ್ಲಿ ನೆರವು ನೀಡಿದ ಗೆಳೆಯರಾದ ರೇಣು ಮತ್ತು ವೆಂಕಟ್ಟೇಶ್‌ರವರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು. ಪ್ರಕಟನಾ ಕಾರ್ಯದಲ್ಲಿ ಸಹಕಾರವಿತ್ತ ಶ್ರೀ. ಬಸವರಾಜ ಕಟ್ಟೀಮನಿಯವರ ನೆರವನ್ನೂ ನಾವು ಮರೆಯುವಂತಿಲ್ಲ.

**ಸಂಪಾದಕ.**

ನನ್ನ ಕೈಹಿಡಿದು

ನನ್ನೊಡನೆ ಹನಿಗೆ ಕೂಡುವ

ಆ ನನ್ನ ಹೆಣ್ಣಿಗೆ.

ಅಡ್ವಾನ್ಸ್ ಅರ್ಪಣೆ

"ನಕ್ಕುಬಿಡು ಚಿಕ್ಕಮುತ್ತು
ಸುರಿದುಹೋಗಲಿ;
ಪಕ್ಕನೊಮ್ಮೆ ನಕ್ಕುಬಿಡು
ಚಿಂತೆ ತೊಲಗಲಿ."

## ನಮ್ಮ ಮುಂದಿನ ಪ್ರಕಟನೆಗಳು

# ಸ್ವಪ್ನಸುಂದರಿ

(ಕಥಾಸಂಗ್ರಹ)

**ಲೇಖಕರು : ಶ್ರೀ. ಚದುರಂಗ**

◆

# ಬೃಹಸ್ಪತಿ

(ನವೀನ ರೀತಿಯ ಕಾದಂಬರಿ)

ಲೇಖಕರು : ಶ್ರೀ. 'ಜಿಬಿಜ್'

**ಬಿಡಿ ಪ್ರಕಟನೆ**

# • ನನ್ನ ರಸಿಕ

(ಗದ್ಯಗೀತೆಗಳು)

**ಲೇಖಕರು : ಶ್ರೀ. 'ಚದುರಂಗ'**

# "ಮುಗುಳುನಗೆ"ಯನ್ನು ಕುರಿತು ಅಭಿಪ್ರಾಯ

ಯುದ್ಧಾನಂತರದ ಈ ಮುಜುಗರದ ಕಾಲದಲ್ಲಿ ಹೀಚಾಗಲಿ ಹಸು ರಾಗಲಿ ಹದವಾಗಲಿ ಹಣ್ಣಾಗಲಿ ಯಾವುದನ್ನೂ ಕಳೆಯುವುದು ಆಗದ ಕೆಲಸ. ಅದರಲ್ಲೂ ಮಾತು ಮೈಗಳಿಗೆ ಸರ್ವಮೂಲವಾದ ಮನಸ್ಸನ್ನು ಅರಳಿಸುವ ನಗೆಯೆಂಬುದಂತೂ—ಮುಗುಳಾಗಲಿ ಮಲರಾಗಲಿ—ಅಗತ್ಯ ವಾಗಿ ಪರಿಗ್ರಹಿಸಬೇಕಾದ್ದೇ.

ಈ ಪ್ರಕೃತದ ಮಾತಿಗೆ ಗುರಿಯಾಗಿರುವ "ಮುಗುಳುನಗೆ"—ಅದರ ಹೆಸರೇ ಸೂಚಿಸುವಂತೆ—ಇನ್ನೂ ಮೊಗ್ಗಿನಂತಿರುವ ಬರಹಗಳ ಸಾಲು ; ಅರಳುವುದಕ್ಕೆ ಇನ್ನೂ ಅವಕಾಶವಿರುವ ಚಿತ್ರಗಳ, ಹರಟೆಗಳ, ಕಥನಪ್ರ ಯತ್ನಗಳ ಪಂಕ್ತಿ.

ಘನವಾದ ತರ್ಕಬದ್ಧವಾದ ಜ್ಞಾನವಿಜ್ಞಾನದಾಯಕವಾದ ಗಂಭೀರ ಲೇಖನಗಳಿಗೆ ವಿಷಯವನ್ನು ಕುರಿತು ಎಷ್ಟು ಆಳವಾದ ಆಯತವಾದ ಅನ್ವೇಷಣೆ ಅಭ್ಯಾಸಗಳು ಅಗತ್ಯವೋ ಅಷ್ಟೇ ತೀವ್ರವಾದ ಸಂತತವಾದ ವಿಷಯವೀಕ್ಷಣವೂ ನಿರೂಪಣೆಯ ಅಭ್ಯಾಸವೂ ಲಘುಬರಹಗಳು ಕೃತ ಕೃತ್ಯವಾಗಬೇಕಾದರೂ ಅತ್ಯಗತ್ಯ. ಮೊದಲಿನ ಜಾತಿಯ ಬರಹಕ್ಕೆ ವಸ್ತುವೇ ಜೀವ, ಎರಡನೆಯ ಗುಂಪಿಗೆ ರೀತಿಯೇ ಜೀವ. ಹಗುರವಾದ ಬರಹಗಳು ಹಗುರವಾದರೂ ಚಿರಕಾಲ ಹಾರುತ್ತಿರಬೇಕಾದರೆ, ಹತ್ತಾರು ಕಡೆಯವರು ಹತ್ತಾರು ಕಾಲ ದಿಂದ ನೂರಾರು ವಸ್ತುಗಳನ್ನು ನೂರಾರು ವಿಧಗಳಲ್ಲಿ ಹೇಗೆ ಹಾರಿಸುತ್ತಿ ರುವರೆಂಬುದನ್ನು ಕಂಡಷ್ಟೂ, ಕಂಡು ತಿಳಿದಷ್ಟೂ, ಮನಸ್ಸು ತಾನೇ

ತಾನಾಗಿ, ಪ್ರಯತ್ನವಿಷ್ಟಿಷ್ಟೂ ಇಲ್ಲದೆ ವಿಲಾಸದಿಂದ ಭೃಂಗಾನುಸಾರಿಯಾಗಿ ಹೂವಿನಿಂದ ಹೂವಿಗೆ ಹಾರುವ ಪ್ರವೃತ್ತಿಯನ್ನು ಪಡೆಯುತ್ತದೆ. ಕಾವ್ಯಾಭ್ಯಾಸಜನ್ಯವಾದ ಈ ಸಂಸ್ಕಾರ ಸಂಪಾದನೆಯಾಗುವವರೆಗೂ ಮೊಗ್ಗನ್ನೇ ಹೂವೆಂದುಕೊಳ್ಳುವ ಪ್ರಮಾದ ಸಂಭವಿಸಬಹುದು.

ಆದರೂ, ಇನ್ನೂ ಹೂವಲ್ಲದೆ ಮೊಗ್ಗೇ ಆದರೂ, ಕೇವಲ ತನ್ನ ಸಣ್ಣ ಆಕಾರದಿಂದಲೇ, ನಸುವಾಸಿದ ತನ್ನ ತೆಳುಬಣ್ಣದಿಂದಲೇ, ಇನ್ನೂ ಅಪೂರ್ಣವಾದ ತನ್ನ ತುಸುಕಂಪಿನಿಂದಲೇ ಮೊಗ್ಗುಗಳು ಕೂಡ ಮುಗ್ಧವಾದ ಮನಸ್ಸುಗಳಿಗೆ ಒಂದು ಸಂತೋಷ ಕೊಡುತ್ತವೆ. ಈ ತೆರನಾದ ಹತ್ತಾರ ಮೊಗ್ಗುಗಳನ್ನು ಪೋಣಿಸಿ, ಈ "ಮುಗುಳುನಗೆ"ಯನ್ನು ಸಿದ್ಧಪಡಿಸಿರುವ ಶ್ರೀ. 'ಜಿಬಿಜ್' ಅವರು, ಇನ್ನೂ ವಿದ್ಯಾರ್ಥಿದಶೆಯಲ್ಲಿರುವ ಚಿರಂಜೀವಿಗಳು, ಇಲ್ಲಿ ಉದ್ದಕ್ಕೂ ಸಭ್ಯತೆ ತಪ್ಪದ ರೀತಿಯಲ್ಲಿ ನಕ್ಕು, ನಗಿಸುತ್ತಾ ನಡೆದಿದ್ದಾರೆ. ಇದೇ ರುಚಿಯನ್ನು ಉಳಿಸಿಕೊಂಡು, ಅವರು ಇನ್ನೂ ಇತರವಾದ ಕಾವ್ಯಾಭ್ಯಾಸದಿಂದ ತಮ್ಮ ಮನಸ್ಸನ್ನು ಬೆಳೆಸಿಕೊಂಡು, ಇಂದು ತಂದಿರುವ ಮುಗುಳುಗಳನ್ನು ಮೀರಿಸುವ ಮಲರುಗಳನ್ನು ತಂದು ಸರಸ್ವತಿಗೆ ಸಮರ್ಪಿಸಲಿ ಎಂದು ಹಾರೈಸುತ್ತೇನೆ.

—ಜಿ. ಪಿ. ರಾಜರತ್ನಂ

# ಅರಿಕೆ

'ಮುಗುಳುನಗೆ'ಯೇ ನನ್ನ ಪ್ರಥಮ ಪುಸ್ತಕ. ಓದುಗರಿಗೆ ಸಂಪೂರ್ಣ ರಂಜನೆಯನ್ನು ಒದಗಿಸುವ ಏಕಮಾತ್ರ ಉದ್ದೇಶದಿಂದ ನಾನು ಈ ಸಂಕಲನವನ್ನು ಕೂಡಿಸಿದ್ದೇನೆ. ಇದು ಶ್ರೇಷ್ಠ ಕೃತಿಯಾಗಿ ಮೆರೆಯಲೆಂದು ನಾನು ಆಸೆಪಟ್ಟಿಲ್ಲ. ನನ್ನ ಓದುಗರನ್ನು ರಂಜಿಸುವುದ ರಲ್ಲಿ ಇದು ಸಫಲವಾಯಿತೆಂದರೆ ಸಾಕು; ಅಷ್ಟೇ ನನ್ನ ತೃಪ್ತಿ. ಇದನ್ನು ಓದಿದವರು ಬೇಸರವನ್ನು ನೀಗಿಕೊಂಡು, ನಕ್ಕು ನಲಿದರೆ ಸಾಕು. ಚಿಂತೆಯ ಹೊರೆಯನ್ನು— ಕ್ಷಣಕಾಲವಾದರೂ—ಮರೆತರೆ ಸಾಕು, 'ಮುಗುಳುನಗೆ'ಯನ್ನು ಬರೆದ ಉದ್ದೇಶ ನೆರವೇರಿದಂತೆಯೇ.

ನಿತ್ಯಜೀವನದಲ್ಲಿ ಗಮನಿಸಿದ ನನ್ನ ಸುತ್ತುಮುತ್ತಿನ ಜನದ ಹತ್ತಾರು ರೀತಿನೀತಿಗಳನ್ನು, ಹೊಳಪು-ಹುಳುಕುಗಳನ್ನು, ಕೆಲವಾರು ವಿಧಾನಗಳಲ್ಲಿ 'ಮುಗುಳುನಗೆ'ಯ ಬರಹಗಳಲ್ಲಿ ಚಿತ್ರಿಸಲು ಯತ್ನಿಸಿದ್ದೇನೆ. 'ಕಿರ್‌ಚೂರ್ ಕಾಲೇಜಿನಲ್ಲಿ ಮುಷ್ಕರ'ವು ಮೊದಲು 'ಸ್ವತಂತ್ರ'ದಲ್ಲಿ ಪ್ರಕಟವಾಗಿತ್ತು. ಇದನ್ನು ಓದಿದ ಹಲವರ ಸಲಹೆಯ ಮೇರೆಗೆ ಅಲ್ಲಲ್ಲಿ ಮಾರ್ಪಡಿಸಿ ಮತ್ತೆ ಬರೆದಿದ್ದೇನೆ. ಎಂಟು ತಿಂಗಳ ಹಿಂದೆ ಇಲ್ಲಿ ನಡೆದ ಒಂದು ಅವ್ಯವಸ್ಥಿತ ವಿದ್ಯಾರ್ಥಿ ಮುಷ್ಕರವನ್ನು ಈ ಲೇಖನದಲ್ಲಿ ನಗೆಗೀಡು ಮಾಡಿದ್ದೇನೆ. ಆದರೆ, ಇದನ್ನೇ ವಿದ್ಯಾರ್ಥಿಗಳ ಸಂಘಟನೆಯ ಬಗ್ಗೆ ಉತ್ತಮ ಧ್ಯೇಯ ಗಳಿಗಾಗಿ ಕೈಗೊಳ್ಳುವ ಮುಷ್ಕರಗಳ ಬಗ್ಗೆ, ನನ್ನ ಅಭಿಪ್ರಾಯವೆಂದು ಯಾರೂ ಭಾವಿಸಬಾರದು. ಸಂಭಾಷಣೆಗಳಲ್ಲಿ, ಮತ್ತು ಬರವಣಿಗೆಯಲ್ಲಿ, ಸ್ವೈಜತೆಯನ್ನು ತರುವುದಕ್ಕಾಗಿ, ಅಲ್ಲಲ್ಲಿ ಅನಿವಾರ್ಯವಾಗಿ 'ಆಂಗ್ಲ' ಪದ ಗಳನ್ನು ಸ್ವಲ್ಪ ಹೆಚ್ಚಾಗಿಯೇ ಉಪಯೋಗಿಸಿದ್ದೇನೆ.

ನನ್ನ ಪ್ರಕಟವಾದ ಹಲವಾರು ಬರಹಗಳನ್ನು ಓದಿ, ಮೆಚ್ಚಿಗೆಯನ್ನು ಪತ್ರಮುಖೇನ ಸೂಚಿಸಿದ ಓದುಗರಿಗೆ ನನ್ನ ಕೃತಜ್ಞತೆಗಳು. ಮೊದಲಿನಿಂದಲೂ ನನ್ನ ಬರಹಗಳನ್ನು ಓದಿ, ಸಲಹೆಗಳನ್ನು ಇತ್ತು, ಪ್ರಕಟಿಸಿ, ಪ್ರೋತ್ಸಾಹಿಸಿದ ಶ್ರೀ. ಬಸವರಾಜ ಕಟ್ಟೀಮನಿಯವರಿಗೂ, ಈ ಪುಸ್ತಕವನ್ನು ಸಿದ್ಧಪಡಿಸುವುದರಲ್ಲಿ ಬಹಳಮಟ್ಟಿಗೆ ನೆರವು ನೀಡಿದ ಗೆ॥ ಆರ್. ಬಸವರಾಜರಿಗೂ ನನ್ನ ವಂದನೆಗಳು. ನನ್ನ ಪ್ರಾರ್ಥನೆಯನ್ನು ಮನ್ನಿಸಿ **'ಮುಗುಳುನಗೆ'ಯನ್ನು ಕುರಿತು** ಅಭಿಪ್ರಾಯವನ್ನು ಬರೆದುಕೊಟ್ಟ ಶ್ರೀ. ಜಿ. ಪಿ. ರಾಜರತ್ನಂರವರಿಗೂ ನಾನು ಋಣಿ.

—**'ಜಿಬಿಜ್'**

# ಮುಗುಳುನಗೆ

# ಹೊತ್ತಿಗೆ ಸರಿಯಾಗಿ

'ಬಾರಯ್ಯ.'

'ಇನ್ನೇನು ಆಯ್ತು ಸಾಮಿ. ವಂಕ ಒಂದೇ ಬಾಕಿ. ಅಷ್ಟೆ.'

'ನಿನ್ನೆ ರಾತ್ರೀನೆ ಅಡ್ವಾನ್ಸ್ ಕೊಟ್ಟಿದ್ದು ತಪ್ಪಾಯಿತು ನೋಡು.... ಇನ್ನೊಬ್ಬನನ್ನು ಕರ್‍ಕೊಂಡು ಹೋಗಬಹುದಾಗಿತ್ತು.' ಎಂದ ರಂಗಣ್ಣ.

'ನಿಮ್ಗೇ ಬರ್ಬೇಕೂ ಅಂತ ತರ್‌ದೂದ್ ಮಾಡ್ದೆ ಸಾಮಿ. ಈ ಚಿನ್ನ ಸಾಮಿ ಜಲ್ದಿ ಬರ್‍ತೀನಿ ಅಂತ ಹೇಳಿ ನಿದಾನ ಮಾಡ್ದ' ಎಂದ ಗಫೂರ್.

'ನೀನೋ.... ಈಗಲೇ ಕುದುರೆಯು ಕ್ಷೌರಕ್ಕೆ ಕುಳಿತಿದ್ದಿ!' ಎಂದು ಗೊಣಗಿ, ರಂಗಣ್ಣ ಮನಸ್ಸಿನಲ್ಲಿಯೇ ಶಪಿಸಿದ.

ಚಿನ್ನಸಾಮಿ ಮಾತನಾಡದೆ, ಒಂದೇಸಮನೆ ಮಿಷನ್ನಿನಿಂದ ಕುದುರೆಯ ಬೆನ್ನಿನ ಮೇಲೆ 'ಚಟ್ ಚಟ್' ಎನ್ನಿಸುತ್ತಿದ್ದ. ಎಂಟು ವರ್ಷದ ಒಬ್ಬ ಹುಡುಗ ಒಂದು ಕಾಲಿನಲ್ಲಿ 'ಸ್ಟಾಂಡ್' ಅದುಮಿಕೊಂಡು, ಆಗ್ಗಾಗ್ಗೆ ಕೈ ಬದಲಾಯಿಸುತ್ತ 'ಜುರ್ ಜುರ್' ಎಂದು 'ಹ್ಯಾಂಡಲ್' ಸುತ್ತುತ್ತಿದ್ದ. ಮಧ್ಯೆ ಮಧ್ಯೆ ತನ್ನ ಕೊಳಕು ಅಂಗಿಯ ಮುಂಭಾಗದಿಂದ ತನ್ನ ಮುಖವನ್ನು ಸಾರಿಸುತ್ತಿದ್ದ.

ಚಿನ್ನಸಾಮಿ 'ಮಿಷನ್' ನನ್ನು ಕಂಕುಳಲ್ಲಿ ಸಿಕ್ಕಿಸಿಕೊಂಡು, ಜೇಬಿನಿಂದ ಆರುಕಾಸಿನ ಚೂರೊಂದನ್ನು ತೆಗೆದು,

'ಲೇರೆ, ಛಕ್ಮಾಸ್‌ಕು ಬೀಡಿ ಲಾವ್' ಎಂದು ಆ ಹುಡುಗನಿಗೆ ಆಜ್ಞಾಪಿಸಿದ. ಹುಡುಗ 'ಸೊರ್'ಎಂಬು ಉಸಿರೆಳೆದು ಮೂಗಿನ ಹೊಳ್ಳೆಯಲ್ಲಿ ರೂಪಿಸಿದ್ದ ಬಲ್ಬನ್ನು ಹೊಡೆಮುಹಾಕಿ, ಆಮೆಯಂತೆ ನಡೆಯುತ್ತಾ ಹೊರಟ.

'ಏನಯ್ಯಾ, ನೀನೇನೋ ಈ ದಿನ ಬರೋಲ್ಲ ಅಂತ ಕಾಣುತ್ತೆ. ಮನೆಯವರೆಲ್ಲ ಕಾದಿದಾರೆ, ನಿನ್ನ ಗಾಡಿಗಾಗಿ. ರೈಲಿಗೆ ಟೈಮಾಗ್ತಾ ಬಂತು. ಎಷ್ಟು ಜಾಗ್ರತೆ ಹೋದರೂ, ರೈಲಿನಲ್ಲಿ ನಿಂತು ಕೊಳ್ಳಲು ಜಾಗ ಸಿಕ್ಕೋದು ಕಷ್ಟ.... ಹೋಗಲಿ. ಅಡ್ವಾನ್ಸ್ ಆದರೂ ವಾಪಸ್ಸು ಕೊಡಯ್ಯ.

'ಇಲ್ಲೇ ಟಿಕೇಟು ಕೊಂಡ್ಕೊಂಡ್‌ಬುಡು ಸಾಮಿ. ಇಸ್ಟೇಸನ್‌ನಲ್ಲಿ ಗಲಾಟೆ ಜಾಸ್ತಿ. ನೀನು ಟಿಕೀಟ್ ತರೋದ್ರೊಳಗಾಗಿ ಗಾಡಿ ಕಂಪ್ಲೀಟ್ ರಡಿಮಾಡ್ತೀನಿ' ಎಂದು ಸಮಾಧಾನಿಸಿದ, ಗಫೂರ್.

'ಆಗಲಿ....ಆದೂ ಮುಗಿಯಲಿ. ಜಾಗ್ರತೆ ಗಾಡಿಕಟ್ಟು' ಎಂದು ರಂಗಣ್ಣ ಅನ್ಯಮನಸ್ಕನಾಗಿ ನಡೆಯುತ್ತ ಹೋದ. ತುಟಿಗಳು 'ಥೂ! ಥೂ!' ಎಂದು ಬೇಸರದ ಶಬ್ದಗಳನ್ನು ಹೊರಹಾಕಿದವು.

* *

'ಜಾರೇ ಮಾದರ್-ದ್' ಎಂದು ಗುದ್ದಿ ಚಿನ್ನಸಾಮಿ 'ಇಸ್ಲೇಚ್ ಲೇಕರ್ ಆವ್' ಎಂದು ಆ ಹುಡುಗನನ್ನು ತಳ್ಳಿ ಓಡಿಸಿದ.

'ಆಯ್ತೇನಪ್ಪಾ ?'

'ಇಗೋ.. ಆಗ್ಬಿಡ್ತು. ಈ ಹುಡುಗನಿಂದ ಸ್ವಲ್ಪ ತಡ ಆಯ್ತು ಅಷ್ಟೆ. ಆರುಕಾಸಿನ ಬೀಡಿ ತರೋಕೆ ಎಲ್ಡು ಗಂಟೆ ಮಾಡ್ದ' ಎಂದ ಚಿನ್ನಸಾಮಿ.

'ನಾನು ಟಿಕೆಟ್ ತರುವಾಗ ನಿನ್ನ ಹುಡುಗ ಕೋತಿಯಾಟ ನೋಡ್ತಾ ನಿಂತಿದ್ದನಯ್ಯ. ಬೈದು ಓಡಿಸಿದೆ'

'ಅರೆ.... ಬಗ್ಲಿ ಅವನು, ಮಾಡ್ತೀನಿ' ಎಂದು ಚಿನ್ನಸಾಮಿ ಕೆದರಿದ ತನ್ನ ಮೀಸೆಯಲ್ಲಿ ಕೈಯಾಡಿಸಿದ.

ಕುದುರೆ ಒಂದು ಬಾರಿ ಕುಪ್ಪಳಿಸಿ ಮೈ ಒದರಿ ಕೆನೆಯಿತು. ರಂಗಣ್ಣನ ಮೇಲೆ ನುಗ್ಗದಂತೆ ಅದನ್ನು ಪ್ರಯಾಸದಿಂದ ಹಿಡಿಯುತ್ತ 'ಬಯ ಪಡ್ಬೇಡ ಸಾಮಿ' ಎಂದು ಧೈರ್ಯಹೇಳಿದ ಗಫೂರ್.

'ಏನಯ್ಯ. ಅಂತು ಕೈ ಕೊಟ್ಟೆ. ಅಡ್ವಾನ್ಸ್ ತೆಗಿಯಯ್ಯ'

'ಇನ್ನೇನ್ ಆಯ್ತು ಸಾಮಿ'

ಏನಾಯ್ತು ?....ಮುಖ ಮೂರ್ಕಡೆಗೆ.' ರಂಗಣ್ಣನ ತಾಳ್ಮೆಯೆಲ್ಲ ಕರಗಿ ಹೋಗಿತ್ತು. ಕೋಪದಿಂದ ಬಿರುಸಾಗಿತ್ತು ಅವನ ಧ್ವನಿ.

'ನಾವೇನ್ ಕುಂತಿದ್ದೀವಾಸಾಮಿ.... ಸುತ್ತ್ರೋಹುಡುಗ ಬರ್ಲಿಲ್ಲವಲ್ಲ. ಏನ್ಮಾಡೋಣ. ಹೋಗ್ಲಿ ನೀವು ಕುದ್ರೆ ಇಡ್ಕೋಳಿ, ನಾನು ಸುತ್ತುತೀನಿ' ಎಂದು ರಂಗಣ್ಣನಷ್ಟೆ ಬಿರುಸಿನಿಂದ ಹೇಳಿದ ಗಫೂರ್.

'ಕುದುರೆ ಹಿಡಿಯೋಕೆ ನನಗೆ ಸಾಧ್ಯವಿಲ್ಲ.' ಎಂದು ಬಾಯ್ಬಿಡಬೇಕಾಯಿತು, ರಂಗಣ್ಣ. ಆಗತಾನೆ ಕುದುರೆ ಅವನೆಡೆಗೆ ನುಗ್ಗಿದ್ದನ್ನು ಅವನು ಮರೆತಿರಲಿಲ್ಲ.

'ಓಗ್ಲಿ.... ನಮ್ಮ ಹುಡ್ಗಾ ಬರೋವರ್ಗು ಸುತ್ತುತೀರಾ ಸಾಮಿ.... ಸ್ವಲ್ಪ ?" ಎಂದು ಹಿಂದು ಮುಂದು ನೋಡದೆ ಕೇಳಿಯೇ ಬಿಟ್ಟ ಗಫೂರ್.

ರಂಗಣ್ಣ ಉಕ್ಕುತ್ತಿದ್ದ ಕೋಪವನ್ನು ತಡೆದ. 'ಸಗಣಿಯವನ ಕೂಡ ಸರಸವಾಡುವುದು' ಪ್ರಯೋಜನವಿಲ್ಲವೆಂದು ತಿಳಿದ. ಹೊತ್ತಿಗೆ ಸರಿಯಾಗಿ ರೈಲು ತಲುಪಲು ವಿಧಿಯಿಲ್ಲದೆ 'ಚೌರದ ಮಿಷನ್' ಸುತ್ತಬೇಕಾಗಿದೆ. ತಿಂಗಳಿಗೆ ಕೇವಲ ಇಪ್ಪತ್ತೈದು ರೂಪಾಯಿಯನ್ನು ಸಂಪಾದಿಸುವ ರಂಗಣ್ಣ ಅಡ್ವಾನ್ಸ್ ಹಣವಾದ ಒಂದು ರೂಪಾಯಿಯನ್ನು ನೀರಿನಲ್ಲಿ ಹಾಕಲು ಸಾಧ್ಯವಿದೆಯೆ ? 'ಕಾರ್ಯಸಾಧನೆಗೆ ಕತ್ತೆಕಾಲು ಹಿಡಿ' ಎಂದು ಹಿರಿಯರೇ ಹೇಳಿರುವಲ್ಲಿ, 'ಚೌರದ ಮಿಷನ್' ಸುತ್ತುವುದೂ ಒಂದು ದೊಡ್ಡ ವಿಚಾರವೇ ! ಎಂದು ಆಲೋಚಿಸಿ 'ಹ್ಯಾಂಡಲ್' ಹಿಡಿಯುತ್ತಾನೆ, ರಂಗಣ್ಣ. 'ಹ್ಯಾಂಡಲ್'ನಲ್ಲಿ ಶೇಖರವಾಗಿದ್ದ ಕೊಳೆ ತನ್ನ ಕೈಗಳಿಗೂ

ಮೆತ್ತಿಕೊಂಡಾಗ, ಆತನಿಗೆ ಕೋಪ ಮತ್ತೆ ಏರಿ ಅಸಹ್ಯವೂ ಆಯಿತು. ಆದರೇನು ? ವಿಧಿಯಿಲ್ಲ.

ಇದುವರೆಗೂ ನಿಶ್ಯಬ್ದವಾಗಿದ್ದ ವಾತಾವರಣ 'ಚಟ್ ಚಟ್' ಮತ್ತು 'ಜರ್ ಜರ್'ಗಳ ಮಿಶ್ರಣದಿಂದ ತುಂಬಿಕೊಂಡಿತು.

'ಅಂತು, ಈ ದಿನ ರೈಲು ಸಿಗೋಹಾಗಿಲ್ಲ; ತಲೆಯನ್ನು ವಾಲಿಸುತ್ತ ರಂಗಣ್ಣ ಹೇಳಿದ.

'ನಿಮಗೇಕೆ ಸಾಮಿ. ರೈಲು ಸಿಕ್ಕಿದರೆ ದುಡ್ಕೊಡಿ. ಇಲ್ಲದಿದ್ದರೆ ಬೇಡಿ !

'ಏನು ?....ಏನೆಂದೆ ? ಒಂದುರೂಪಾಯಿ ಪೂರ್ತಿ ಅಡ್ವಾನ್ಸ್ ಕೊಟ್ಟಿದ್ದೇನೆ. ಮತ್ತೆ ದುಡ್ಡೇ ? ....ಅವೆಲ್ಲ ನಡಿಯೋಲ್ಲ....' ರಂಗಣ್ಣ ಅಪ್ರತಿಭನಾಗಿದ್ದ.

'ನಿನ್ನೆ ಸಾಯಂತ್ರ ಹೇಳ್ದಿನೆಲ್ಲ ಸಾಮಿ .... ಒಂದು ರೂಪಾಯಿಗೆ ಆಗೋಲ್ಲ ಅಂತ'

'ಛೇ,' ಛೇ ! ನೀನೇ ಒಪ್ಕೊಂಡೆ.... ಆಮೇಲೆತಾನೆ ಅಡ್ವಾನ್ಸ್ ಕೊಟ್ಟಿದ್ದು."

'ನಾನು ಒಪ್ಕೊಂಡಿದ್ದು ಒಂದುವರೆ ರೂಪಾಯಿಗೆ ಸಾಮಿ. ಬಹು ಗಂಭೀರವಾಗಿ ಹೇಳಿದ.

'ಇಲ್ಲಯ್ಯ....ಇನ್ನೇನ್ ಹೇಳ್ಲಿ....ನಿನ್ಹತ್ರ ಬಡ್ಕೋಬೇಕು.'

'ಚೆನ್ನಾಗಿ ಗ್ನ್ಯಾಪಿಸಿಕೊಳ್ಳಿ ಸಾಮಿ'

'ಬುದ್ಧಿ ಇಲ್ಲದೆ, ಅಡ್ವಾನ್ಸ್ ಕೊಟ್ಟಿದ್ದಾಗಿದೆ. ಇನ್ನೂ ಏನೇನು ನಡೆಯುತ್ತೊ ? ನಡೆಯಲಿ ! ಎಂದು ರಂಗಣ್ಣ ಸುಮ್ಮನಾದ.

* *

ಯಾರೋ ಸ್ನೇಹಿತ ಬರುತ್ತಿದ್ದಂತೆ ತೋರಿತು, ರಂಗಣ್ಣನಿಗೆ. ತಲೆ ತಗ್ಗಿಸಿದ. ನೋಡಿದರೂ ನೋಡದವನಂತೆ ಸುಮ್ಮನಿದ್ದ. ಆದರೆ ?

'ಏನಮ್ಮಾ !'

ಕೂಡಲೆ ರಂಗಣ್ಣ ವಿವರಣೆ ಕೊಟ್ಟ.

'ನಮ್ಮ ಮನೆಯವರೆಲ್ಲ ಅಜ್ಜಿ ತಿಥಿಗೆ ತುಮಕೂರಿಗೆ ಹೊರಟಿದ್ದಾರೆ ಕಣೋ. ಗಾಡಿ ಅರ್ಜೆಂಟಾಗಿ ಬೇಕಾಗಿದೆ. ಬಹಳ ಬುದ್ಧಿ ಉಪಯೋಗಿಸಿ, ಈ 'ಸ್ಕ್ಯಾಂಡಲ್'ಗೆ ನಿನ್ನೇನೇ ಅಡ್ವಾನ್ಸ್ ಕೊಟ್ಟೆ. ನೋಡು. ಅದರ ಪ್ರಭಾವ. ನನಗೆ ಮಿಷನ್ ಸುತ್ತೊ ಕೆಲಸ....

ಈ ವಿವರಣೆ ಪೂರ್ತಿ ಯಾಗುವ ಮೊದಲೇ -..

'ಅಡ್ವಾನ್ಸ್....ಅಡ್ವಾನ್ಸ್ ಅಂತ ಒಂದೇ ಸಮನೆ ಬಡ್ಕೋತಿದ್ದೀಯಲ್ಲ ಸಾಮಿ. ನೀನೊಬ್ನೇನೆ ಅಡ್ವಾನ್ಸ್ ಮುಕಾ ನೋಡಿರೋನು. ಇನ್ನೊಂದ್ ಸಾರಿ ಅಡ್ವಾನ್ಸ್ ಮಾತು ತೆಗಿದ್ರೆ, ನೀನ್ ಕೊಟ್ಟೇ ಇಲ್ಲ ಅಂದ್ಬಿಡ್ತೀನಿ'

ಬೀದಿಯೊಂದಿಗೆ ಹುಡುಗ ಓಡಿ ಓಡಿ ಬಂದ. 'ಕೆತ್ತಾದೇರ್....' ಎಂದು ಆ ಹುಡುಗನನ್ನು ಇಬ್ಬರೂ ಸಮನಾಗಿ ಒದ್ದು, ಅವನ ಬೋಡುತಲೆಗೆ ನಾಲ್ಕೇಟು ಜಡಿದರು.

* *

ಬೇಗ ಬೇಗ ಬನ್ನಿ. ಎಂಟು ಸಾಮಾನು....ಜ್ಞಾಪಕ ಇರ್ಲಿ. ಕಿಟ್ಟಿ ಬಾರೋ. ನಿನ್ನ ಕೂಡಿಸುತ್ತೇನೆ. ....ಎಳೆ ಮಗ ನನ್ನ ಕೈಗೆ ಕೊಟ್ಟು ನೀನು ಮೊದಲು ಕೂತುಕೋ. ಮೆಲ್ಲಗೆ....ಮೆಲ್ಲಗೆ....ಸೀರೆ ಅಂಚು ಸಿಕ್ಕಿದೆಯಲ್ಲೇ....ಬಿಡಿಸ್ತೀನಿ ತಡಿಯೇ....ಕರ್ಕೊಳ್ಳಿ ಎಳೆಮಗೂನ-ಹೂಂ. ಹೊಡೆಯಪ್ಪ ಗಾಡಿ....'

ಹಿಂಭಾರ, ಮುಂಭಾರಗಳ ತುಲನೆಗಾಗಿ ಸಾಕಷ್ಟು ಗೋಳಾಡಿಸಿ, ಗಾಡಿ ಮುಂದುವರೆಯಿತು. ದಾರಿಯಲ್ಲಿ 'ಎಲ್ಲಿಗೆ ಸಾಮಿ?....ಸ್ಟೇಷನ್! ಕುಂತ್ಕೊಳಿ' ಎಂದು ಕೂಗಿ ಮತ್ತೂ ನಾಲ್ಕು ಮಂದಿಯನ್ನು ತುಂಬಿಕೊಂಡು ಹೊರಟ.

ಅರಳೇಪೇಟೆಯ ದಿಣ್ಣೆಯ ಬುಡದಲ್ಲಿ, ಹಠಾತ್ತಾಗಿ ಕುದುರೆ ನಿಂತಿತು. ಚಾವಟಿಯಿಂದ ಒಂದೇಟು ಬಾರಿಸಿದ ಸಾಹೇಬ. ಕುದುರೆ ಮುಂಗಾಲುಗಳನ್ನು ಊರ್ಧ್ವಮುಖ ಮಾಡಿ ಹಿಂಗಾಲುಗಳಲ್ಲೇ ನಿಂತು, ಗಾಡಿಸಮೇತ, ಕಾಂಗಾರೂ ನಡಿಗೆ ಹಾಕಿತು. ಮತ್ತೊಂದು ಏಟು ಬಿಗಿದ ಕೂಡ

ಲೆ, ಹಿಂದುಹಿಂದಕ್ಕೆ ಹೆಜ್ಜೆಹಾಕಿ, ಗಾಡಿಯ ಹಿಂಭಾಗ ಲೈಟುಕಂಭಕ್ಕೆ ಹೊಡೆಯಿತು.

'ಎಲ್ಲರು ಇಳಿದು ಬಿಡಿ.'

ಸಾಬಿಯ ಆಜ್ಞೆಯ ಮೇರೆಗೆ ಎಲ್ಲರೂ ನಡೆದುಕೊಂಡರು. ತಾನು ಕುದುರೆ ಹಿಡಿದುಕೊಂಡು ನಿಂತು 'ಗಂಡಸರೆಲ್ಲ ಒಂದು ಕೈಹಾಕಿ ನೋಡೋಣ. ಎಂದು ವಿಧಿಸಿದ. ಸದ್ಯಕ್ಕೆ ರೈಲು ಸಿಕ್ಕಿದರೆ ಸಾಕು ಎಂದು ಕಳವಳಿಸುತ್ತಿದ್ದ 'ಬಾಡಿಗೆ ಭಾಗಿ'ಗಳೆಲ್ಲರೂ ಅಭಿಮಾನ್ಯಶೂನ್ಯರಾಗಿ ಚಕ್ರಗಳಿಗೆ ಕೈಹಾಕಿ, ದಿಣ್ಣೆ ಹತ್ತಿಸಿ, ಕೈ ಕೊಡವಿಕೊಂಡು ಪುನಃ ಗಾಡಿಯಲ್ಲಿ ಕುಳಿತು ಯಾವ ಅಪಾಯುವೂ ಇಲ್ಲದೆ ಸ್ಟೇಷನ್ ತಲಪಿದರು.

* *

'ಶುಶ್ಶ್ಯಾಃ'

'ಅರೆ! ರೈಲು ಹೋಗಿಬಿಡ್ತೆಲ್ಲೇ....ಓಡೇ ಸ್ವಲ್ಪ ಕಿಟ್ಟ ಓಡಪ್ಪಾ-ಇಲ್ಲಿ ಬಾ. ನಾನೆತ್ಕೊಂಡು, ಓಡ್ತೇನೆ.... ?

................

'ಇನ್ನು ಸಿಕ್ಕೋಹಾಗಿಲ್ಲ ಬಿಡು. ಮೊದಲೇ ಬರಬೇಕಾಗಿತ್ತು. ಆ ಹಾಳು ಮುಂ.... ಮಗಸಿಗೆ ಅಡ್ವಾನ್ಸ್ ಕೊಟ್ಟು ತಡವಾಯಿತು' ಎಂದು ತನ್ನನ್ನು ತಾನೆ ಶಪಿಸಿಕೊಂಡ ರಂಗಣ್ಣ.

ತುಮುಕೂರಿಗೆ ಹೊರಡುವ, ಆ 'ಮಾರುತಿ ಕೋಲ್ ಗ್ಯಾಸ್ ಬಸ್ಸೆ' ಗತಿ ಎಂದು ಬಸ್ ನಿಲ್ದಾಣಕ್ಕೆ ಹೊರಡಲು ಸಿದ್ಧನಾದ. ಹೆಂಡತಿಯ ಕೈಗೆ ಎಳೆ ಕೂಸಿನ ಜೊತೆಗೆ ಒಂದು ಬುಟ್ಟಿ ಕೊಟ್ಟ. ಕಿಟ್ಟುವಿಗೆ ಒಂದು ಬ್ಯಾಗ್ ತಗುಲಿಸಿ, ಮಿಕ್ಕುದೆಲ್ಲವನ್ನು ತಾನೇ ಹೊತ್ತುಕೊಂಡ.

'ನಡೀರಿ, ನಿಧಾನವಾಗಿ ಬಸ್ ಸ್ಟ್ಯಾಂಡಿಗೆ?

ಜನಸಂದಣಿಯಿಂದ ಕುಟುಂಬ ಪರಿವಾರವನ್ನು ಸಾಮಾನಿನೊಡನೆ ಹೊರತರಬೇಕಾದರೆ ಅವನಿಗೆ ಸಾಕಾಗಿಹೋಗಿತ್ತು.

'ಬಿಡಿಸಾಮಿ.... ಎಲ್ಲಿ ಹೋಗೋದು ? 'ಎಂದು ಇವನ ಹಾಸಿಗೆ

ಸುರಳಿಗೆ ಯಾರೋ ಕೈಹಾಕಿ ಎಳೆದರು.

'ಬಸ್ ಸ್ಟಾಂಡಿಗೆ ಏನು ಕೊಡಬೇಕಯ್ಯ ?' ಎಂದ ರಂಗಣ್ಣ.

'ಕೂಲಿಯಲ್ಲ ಸಾಮಿ, ಜಟ್ಕಾ. ಎಲ್ಲಿಗೆ ಹೋಗಬೇಕು ? ಬಾ ಸಾಮಿ' ಎಂದು ಆ ಸಾಬಿ ಅವಸರಿಸಿದ.

ಈ ಧ್ವನಿಯು ರಂಗಣ್ಣನಿಗೆ ಪರಿಚಿತವಾದಂತೆ ಕಂಡಿತು. ಹಾಸಿಗೆಯನ್ನು ಓರೆಗೊಳಿಸಿ ನೋಡಿದ ರಂಗಣ್ಣ.

ಯಾರಿಗೆ ಅಡ್ವಾನ್ಸ್ ಕೊಟ್ಟು, ಮೇಲೆ ಎಂಟಾಣೆ ತೆತ್ತು, ರೈಲು ತಪ್ಪಿಸಿಕೊಂಡನೋ, ಅದೇ ಮನುಷ್ಯ ಗಫೂರ್ ಈಗ, ಹೊತ್ತಿಗೆಸರಿಯಾಗಿ, ವಿನಯಾತಿವಿನಯದಿಂದ ಬಗ್ಗಿ ಬಾರುಚಾವಟಿಯಿಂದ ಎಡ ಅಂಗೈಯನ್ನು ಹೊಡೆದುಕೊಳ್ಳುತ್ತ ಮುಂದೆ ನಿಂತಿದ್ದಾನೆ.

ಕೋಪವನ್ನು ನುಂಗಿಕೊಂಡು 'ಗಾಡಿ ಬೇಕಾಗಿಲ್ಲ' ಎಂದು ಗುಡುಗಿ ಜನಸಂದಣಿಯನ್ನು ಟ್ರಂಕಿನ ತುದಿ, ಹೋಲ್ಡಾಲಿನ ಕೊಕ್ಕೆಗಳಿಂದ ಭೇದಿಸಿಕೊಂಡು ಹೊರಟ.

ಅಂದಿನಿಂದ ರಂಗಣ್ಣ ಯಾರಿಗೂ ಅಡ್ವಾನ್ಸ್ ಕೊಡುತ್ತಿಲ್ಲ.

# ಲೋಲಾಕು

ನಿಶ್ಶಬ್ದವಾಗಿದ್ದ ವಾಚನಾಲಯದಲ್ಲಿ ಒಮ್ಮೆಲೆ ಪತ್ರಿಕೆಯೊಂದನ್ನು ಮುದುಡಿ, ಉಂಡೆಗಟ್ಟಿದಂತೆ ಶಬ್ದವಾಯಿತು.

ಸಾಪಿವೆಕಾಳಿನ ಅಕ್ಷರಗಳನ್ನು ಏಕಾಗ್ರತೆಯಿಂದ ಓದುತ್ತಿದ್ದವರು; ಅರ್ಜಿ ಕಳುಹಿಸುವ ವಿಳಾಸಗಳನ್ನು ನೋಟುಬುಕ್ಕಿಗೆ ಭರ್ತಿ ಮಾಡುತ್ತಿದ್ದವರು; ಪತ್ರಿಕೆಯನ್ನು ಮುಖಕ್ಕೆ ಅಡ್ಡವಾಗಿ ಹಿಡಿದುಕೊಂಡು 'ಪಿಸ ಪಿಸ' ಮಾತಾಡುತ್ತಿದ್ದವರು;— ಎಲ್ಲರೂ ಆ ಶಬ್ದ ಬಂದ ಕಡೆ ಕೊರಳೆತ್ತಿ ನೋಡಿದರು. ಕುತೂಹಲ ಒಂದು ಕಡೆ; ಕಾರ್ಯಭಂಗದ ಕೋಪ ಒಂದು ಕಡೆ; ಇದರಿಂದಾಗಿ ಮೂಲೆಯಲ್ಲಿ ಕುಳಿತಿದ್ದ ನಮ್ಮೂರಿನ ಗುಮಾಸ್ತರು. ಎಲ್ಲರ ಗಮನವನ್ನೂ ಸೆಳೆದರು.

ಸುತ್ತಲಿನ ವಾಚಕರು ಅವರಿಗೆ ಪ್ರಶ್ನೆ ಹಾಕಿದರು.

'ಅರರೇ! ಅದೇಕೆ ಸ್ವಾಮಿ, ಆ ಚಿತ್ರವನ್ನು ಮುದುಡಿಬಿಟ್ಟಿರಿ?

'ಆಕೆಯ ವಿಷಯ ನಿಮಗೇನಾದರೂ ಗೊತ್ತೆ?

'ನಿಮಗೇನಾದರೂ ಮೋಸವಾಗಿತ್ತೆ, ಆಕೆಯಿಂದ?

'ವಾಚನಾಲಯದ ಪತ್ರಿಕೆಯನ್ನು ಹಾಳು ಮಾಡಬಹುದೇನ್ರೀ?

ಈ ಪ್ರಶ್ನೆಗಳ ಧಾಂಧಲೆ! ಅಬ್ಬಾ— ಆಳಿಗೊಂದು ಪ್ರಶ್ನೆ. ನಮ್ಮ

ಗುಮಾಸ್ತರು ನಶ್ಯದಿಂದ ಹಿಗ್ಗಿಹೋಗಿದ್ದ ತಮ್ಮ ಮೂಗನ್ನು ಒಮ್ಮೆ ಕೂಗಿಸಿ ವಿವರಣೆಗೆ ತೊಡಗಿದರು.

"ಆ ಚಿತ್ರಕ್ಕೂ, ಆ ಹೆಂಗಸಿಗೂ, ನನ್ನ ಕೋಪಕ್ಕೂ ಯಾವ ಸಂಬಂಧವೂ ಇಲ್ಲ."

"ಮತ್ತೇಕೆ ?"

"ಕೇವಲ ಆ ಕಿವಿಗಳಲ್ಲಿ ನೇತಾಡುತ್ತಿರುವ ಲೋಲಾಕುಗಳನ್ನು ನೋಡಿ ನನಗೆ ಸಿಟ್ಟು ಬಂದದ್ದು. ನಮ್ಮ ಕುಟುಂಬವೇನಾದ್ರೂ ಇದನ್ನು ನೋಡಿ ಬಿಟ್ಟರೆ, ನನಗೆ ಬೇಕೇ ಬೇಕು ಅಂತ, ಕುಣೀತಾರ್ರಿ! ಪ್ರಾಣ ಹಿಂಡ್ತಾರ್ರಿ ... ಸೇಣುಬೀಳ್ತಾರ್ರಿ....ನಿಮಗೇನು ಗೊತ್ತು ?" ಎಂದು ನೋಣಿನ ಅನುಭವ ಪಡೆದವರಂತೆ ನಮ್ಮ ಗುಮಾಸ್ತರು ನುಡಿದರು.

ಗುಮಾಸ್ತರು ಎಲ್ಲರ ಸಹಾನುಭೂತಿಯನ್ನೂ ಪಡೆದರು.

* *

'ಈ ನಾಲ್ಕರಲ್ಲಿ ನೀವು ಯಾವುದು ಆರಿಸ್ತೀರಿ ?' ಎಂದು ಬಹು ಮಧುರ ಬೆಡಗಿನಿಂದ ಕೇಳುತ್ತಾಳೆ ಆಕೆ.

'ನಿನ್ನನ್ನೇ ಆರಿಸಿದ್ದಾಗಿದೆಯಲ್ಲ ?' ಎಂದು ಆನಳ ಕಡೆ ನೋಡಿ, ನಗುತ್ತಾನೆ. ಮರುಕ್ಷಣವೆ ಆಕೆ ಹಿಡಿದಿದ್ದ ಮಾಸಿಕ, ತೆರೆದಿದ್ದ ಪುಟವನ್ನು ನೋಡಿ, ಜಂಘಾಬಲ ಉಡುಗಿ ಹೋಗುತ್ತದೆ ಅವನಿಗೆ.

'ಶಾರೀ, ಪಕ್ಕದ ಮನೆಗೆ ಬಂದಿದಾರಲ್ಲ ನೆಂಟರು, ಯಾವೂರಂತೆ ಅವರದು ?' ಎನ್ನುತ್ತಾನೆ.

'ಅಹಹ ? ನಂಗೆಲ್ಲ ಗೊತ್ತು ! ಮಾತು ಮರೆಯಿಸಬೇಡಿ. ಎಷ್ಟು ದಿವಸ ಸತಾಯಿಸ್ತೀರಿ?' ಎಂದು ಮುನಿಸಿನಿಂದ ಕೇಳುತ್ತಾಳೆ.

'ಹಾಗಲ್ಲ, ಚಿನ್ನಾ' ಎಂದು ಕೈ ಹಿಡಿದುಕೊಂಡು

'ನಾನೆಲ್ಲಿಂದ ತರಲಿ ಹೇಳು ? ನೀನು ಕಂಡ ಹಾಗೆ, ಹಾಲಿನವಳಿಗೆ ಮೂರು ತಿಂಗಳಿನಿಂದ ದುಡ್ಡು ಕೊಟ್ಟಿಲ್ಲ. ಅಗಸನಿಗೆ ಕೊಟ್ಟ ಬಟ್ಟೆ ಬಿಡಿಸಿಕೊಂಡು ಬರಬೇಕು. ಅವನೋ ಬಿಲ್ಲಿನೊಳಗೆ ನಮೂದಿಸಿದ್ದಾನೆ

—ಎರಡು ವಾರದನಂತರ ನಾವು ಬಟ್ಟೆಗಳಿಗೆ ಜವಾಬ್ದಾರರಲ್ಲ ಎಂದು. ನಿನ್ನ ತೌರುಮನೆ ದಯಪಾಲಿಸಿದ್ದ ಆ ಬೆಳ್ಳಿಚೊಂಬನ್ನು ಚುರುಕ್‌ಚಂದ್‌ನಿಂದ ಬಿಡಿಸಿಕೋಬೇಕು. ಹೀಗಿರೋವಾಗ, ಲೋಲಾಕಿಗಾಗಿ ಯಾವ ಹೊಸ ಸಾಲಕ್ಕೆ ತಲೆ ಕೊಡಲಿ, ಹೇಳು ?'

ಇವನ್ನು ಕೇಳಿದ ಕೂಡಲೆ ತಿಳಿಯಾಗಿದ್ದ ಆ ನೀಲ ಕಣ್ಣುಗಳಲ್ಲಿ ದುಃಖದ ಪರೆ ಕವಿಯುತ್ತದೆ.

*    *

ಈ 'ಲೋಲಾಕು' ಶಬ್ದ ಲಲಿತ ಕನ್ನಡಕ್ಕೆ ಹೇಗೆ ನುಸುಳಿತು ? ಇದನ್ನು ಕಂಡುಹಿಡಿದ 'ಕೊಲಂಬಸ್' ಯಾರು ? ಇದನ್ನು ಮೊಟ್ಟ ಮೊದಲು ತಯಾರಿಸಿದ ಆಚಾರಿ ಯಾರು ? (ಅವನೇನಾದರೂ ಈಗ ಕೈಗೆ ಸಿಕ್ಕಿಬಿಟ್ಟರೆ ಕುರುಕ್ಷೇತ್ರವಾಗುವುದು ಖಂಡಿತ)— ಎಂಬುದು ಇಂದಿನ ಉಜ್ವಲ ಸಮಸ್ಯೆಗಳಲ್ಲಿ ಒಂದಾಗಿವೆ. ಇದು ನನಗೆ ತಿಳಿದಿದ್ದು ನನ್ನ ಅರ್ಧಾಂಗಿ ಒಂದು ಜೊತೆ ಲೋಲಾಕಿಗಾಗಿ ನನ್ನನ್ನು ಅರ್ಧ ಜೀವ ಮಾಡಿದಾಗಲೇ !

ಲೋಲಾಕು ಹೆಂಗಸರಿಗೆ ಸಂಜೀವಿನಿಯಂತೆ ! ಅವರೆ ಗಂಡಸರಿಗೆ ಜಾಪಾಳದಂತೆ. ವಜ್ರಸಮ ಕಠಿಣವಾದ ಮನಸ್ಸೂ ಲೋಲಾಕು ಬಂದೊಡನೆ ಸುಮ ಕೋಮಲವಾಗುವುದು. ಅದರಿಂದಾಗುವ ಲಾಭ ನಮ್ಮ ರಸಿಕರಿಗೆ ಹೊಸವೇನಲ್ಲ. ಲೋಲಾಕಿಗಾಗಿ ಹೂಡುವ ಮಾಯೆ ಹೆಂಗಸರಿಗೆ ಕೋಲಾಹಲವಾದರೂ, ಗಂಡಸರ ಪಾಲಿಗೆ ಅದು ಹಾಲಾಹಲ !

ಸ್ತ್ರೀಯೆನಿಸಿದ ಮೇಲೆ ಕಿವಿಗೊಂದು ಜೊತೆ ಲೋಲಾಕು ಬೇಡವೇ? ಛೀ ! ಲೋಲಾಕು ನೇತಾಡಲೇ ಬೇಕು! ಇದು ನಾಗರಿಕತೆಯು, ಸಂಸ್ಕೃತಿಯು—ಒಂದೇಮಾತಿನಲ್ಲಿ ಹೇಳುವುದಾದರೆ—ಸ್ತ್ರೀತ್ವದ ಹೆಗ್ಗುರುತೆಂದು ಎಲ್ಲ ಹೆಂಗಸರ ಅಂತರಾಳದಲ್ಲಿಯೂ ಬೇರೂರಿಬಿಟ್ಟಿದೆ ಈ ವಿಚಾರ. ಈ ಜಾಡ್ಯದ ಸೋಂಕು ಹುಡುಗಿಯರಿಗೆ ಹೋಗಲಿ, ಮುದುಕಿಯರಿಗೂ ಬಡಿದಿರುವುದು ಆಶ್ಚರ್ಯವೇ ಸರಿ ! ಆಫೀಸರ್ಸ್‌ರವರ ಅಮ್ಮಾವರಿಂದ ಮೊದಲಾಗಿ........ಮೊಸರು ಮಾರುವ, ಊದು ಬತ್ತಿ ಹೊಸೆಯುವ ಕೆಂಪಿ, ನೀಲಿಯ

ರವರೆಗೂ ಎಲ್ಲರಿಗೂ ಲೋಲಾಕು ನೇತಾಡಿಸಬೇಕೆನ್ನುವುದು ಒಂದು ಮಹತ್ವಾಕಾಂಕ್ಷೆಯಾಗಿದೆ.

ಬಿಳಿಯ ಮುಖಕ್ಕೆ ಕೆಂಪು ಕಲ್ಲಿನ ಲೋಲಾಕು; ಕರಿಯ ಮುಖಕ್ಕೆ ಬಿಳಿಯ ಕಲ್ಲಿನ ಲೋಲಾಕು; ಎಣ್ಣೆಗೆಂಪು ಮುಖಕ್ಕೆ ಮಿಸುನಿಯ ಸಾದಾ ಲೋಲಾಕು; ವಗೈರೆ ವಗೈರೆ ಮುಖಗಳಿಗೆ ಇತ್ಯಾದಿ ಇತ್ಯಾದಿ ಲೋಲಾಕುಗಳು ! ಅಂತೆಯೇ ಲೋಲಾಕಿನಲ್ಲಿ ತಲೆಗೂದಲಿನಷ್ಟು ಪ್ರಭೇದಗಳಿವೆ. ಇದರ ವ್ಯಾಪ್ತಿ ಮಹತ್ತರವಾದಂತೆಲ್ಲಾ ಹೊಸ ಹೊಸ ನಮೂನೆಗಳೂ ಬರತೊಡಗಿವೆ. ಪ್ರತಿಯೊಬ್ಬ ಮಾನಿನಿಯೂ ಇಂದು ಮಂಗಳಸೂತ್ರಕ್ಕಿಂತ ಹೆಚ್ಚು ಗಮನಕೊಡುತ್ತಿರುವುದೆಂದರೆ ಲೋಲಾಕಿಗೆ. ಕಾಲೇಜಿನಲ್ಲಿ ಲೋಲಾಕಿಲ್ಲದ ಹೆಣ್ಣಿವಿಗಳನ್ನು ಕಾಣಲಸಾಧ್ಯ. ಚಲನ ಚಿತ್ರಗಳಲ್ಲಂತೂ ಲೋಲಾಕಿಲ್ಲದ ಸ್ತ್ರೀಮುಖವನ್ನು ಕಾಣುವುದು ಶ್ರೀಮುಖನಿಗೂ ದುರ್ಲಭ.

ಈ ಲೋಲಾಕಿನ ಉಪಟಳದಿಂದಾಗಿ ಸಂಪೂರ್ಣವಾಗಿ ಕುಗ್ಗಿಹೋದವರೆಂದರೆ, ಮಾಸ್ತರು ಮತ್ತು ಗುಮಾಸ್ತರು. ಹಗಲು ರಾತ್ರಿ ಅವರ ಅರ್ಧಾಂಗಿಯರು (ಕೆಲವರು ಪೂರ್ಣಾಂಗಿಯರು) ತಮ್ಮ ಪತಿಯರ ಕಿವಿಯಲ್ಲಿ ತಿರುಗಿಸುವ ಅಲುಗು, ಈ ಲೋಲಾಕು ! ಅವರು ಪ್ರಕಟಿಸುವ ದ್ವಾದಶಾವತಾರಗಳೂ ಈ ಲೋಲಾಕಿಗಾಗಿಯೇ !! ಲೋಲಾಕಿನ ಮಹತ್ವದಿಂದಾಗಿ ಸಿಗರೇಟು, ಬ್ಲೇಡು, ಕಾಫಿ.... ಇತ್ಯಾದಿಗಳಿಗೆ ಮಿತ್ರರ ಜೇಬನ್ನು ತಡಕಾಡಬೇಕಾಗುತ್ತದೆ, ಪರತಂತ್ರಜೀವಿಗಳಾಗಬೇಕಾಗಿದೆ. ಅವರ ಜೀವನದಲ್ಲಿ ಲೋಲಾಕೆಂದರೆ ರಾಹು-ಕೇತುಗಳು !

* *

ಲೋಲಾಕು !

ಈ ಶಬ್ದವು ಇಂಗ್ಲೀಷ್ ಭಾಷೆಗೆ ಸೇರಿದೆಯೇ ? ಇಲ್ಲವೆ ಕನ್ನಡ ಪದವೆ ? ಎಂಬ ಪ್ರಶ್ನೆಯನ್ನು ಈಗ ಉತ್ತರಿಸಬೇಕಾಗಿದೆ-

ಇದು 'ಲೌವ್—ಲಕ್' ಎಂಬ ಶಬ್ದದ ತಿದ್ದಿತತೀಡಿತವೇ ? ಕೆಲವರು 'ಲೋಲಾಕ್ಕು' ಎನ್ನುತ್ತಾರೆ. ಎಂದರೆ, ಲೌವ್—ಲಕ್, ಇಲ್ಲವೆ 'ಲೋ—ಲಕ್' ಎಂಬ ಶಬ್ದಗಳಿಂದ ಲೋಲಾಕು ಉದ್ಭವಿಸಿದೆಯೆ ? ಇರಬಹುದು. 'ಪ್ರೇಮ ಬೀಗ', 'ಹೃದಯ ಕೊಂಡಿ', 'ತೂಗು ದೀಪ', 'ನವೀನ ಕುಂಡಲ', 'ಕರ್ಣ ಭೃಂಗ'—ಇವು ಲೋಲಾಕನ್ನು ವರ್ಣಿಸಲು ನನಗೆ ಕನ್ನಡದಲ್ಲಿ ದೊರೆತಿರುವ ಶಬ್ದಗಳು. ಹೊಸಗನ್ನಡದಲ್ಲಿ ಲೋಲಾಕಿಗಾಗಿ ಹೊಸಪದಗಳು ಇನ್ನೂ ಎಷ್ಟು ಪ್ರಸವಿತವಾಗುವವೋ, ಯಾರು ಬಲ್ಲರು ?

ಲೋಲಾಕಿನ ಮೂಲ ಸಂಸ್ಕೃತವೆಂದು ಭಾವಿಸುವುದಾದರೆ, ಇದು ಲೋಲಕ ( ಪೆಂಡಮ್ ) ಶಬ್ದದಿಂದ ಬಂದಿರಬಹುದು. ಅನಾಗರಿಕ ಸಂಸ್ಕೃತಿರಹಿತರ ಬಾಯಿಂದ ಗೀರ್ವಾಣದ ಲೋಲಕ ಈಗ ಲೋಲಾಕಾಗಿರಬಹುದೆ ?

ಇಲ್ಲ—ಲೋಲಾಕು ಕನ್ನಡಶಬ್ದವೆಂದು ಹಟ ಹಿಡಿಯುವುದಾದರೆ, ಅನ್ಯರು ಇದನ್ನು ಅಪಹರಿಸಿದ್ದಾರೆ ಎಂದು ಆರೋಪಿಸುವುದಾದರೆ, ಈ ವಾದಕ್ಕೂ ಸಹ ಪುಷ್ಟಿ ದೊರೆಯುತ್ತದೆ. ಈ ರೀತಿಯ ಆಭರಣಗಳು ಬಹಳ ದಿನಗಳಿಂದಲೂ ನಮ್ಮಲ್ಲಿ ಇತ್ತು. ಇದು 'ಕೆನ್ನೆ ಚೈನು' ಎಂಬುದರ ನಾಗರಿಕ ರೂಪ. ಹೊರಗಿವಿಗೆ ಅಡ್ಡಲಾಗಿ ಹಾಕಿಕೊಳ್ಳುವ ಚಿನ್ನದ ಸರಪಳಿಗೆ 'ಕೆನ್ನೆ ಚೈನು' ಎನ್ನುತ್ತಾರೆ. (ಈ ಕೆನ್ನೆಚೈನನ್ನು ನೋಡಬೇಕಾದವರು ಬೆಂಗಳೂರಿನ ಕರಗ, ತಿರುಪತಿ ಜಾತ್ರೆ, ಮೈಸೂರಿನ ದಸರಾಗಳನ್ನು ನೋಡಬೇಕೆಂದು ವಿನಂತಿ.) ಈ ಕೆನ್ನೆಚೈನಿನ ಮೇಲಿನ ತುದಿ ಕಳಚಿಬಿದ್ದುದೇ, ಲೋಲಾಕಿನ ಉದ್ಭವದ ಮೂಲ. ಈಗಲೂ ಅನೇಕ ಗ್ರಾಮವಧುಗಳು ತಲೆಗೆ ಸೀರು ಹಾಕಿಕೊಂಡಾಗ, ಕೆನ್ನೆಚೈನನ್ನು ಈ ರೀತಿ ನೇತಾಡಬಿಡುತ್ತಾರೆ ಇದಲ್ಲದೆ, ಕರ್ನಾಟಕದಲ್ಲಿ ಬಳಕೆಯಲ್ಲಿದ್ದ 'ಜುಮುಕಿ' ( ಸಣ್ಣ ಸಣ್ಣ ಮುತ್ತುಗಳನ್ನು ಜೋಡಿಸಿದ ತಳಿ ಕೆಳಗಾದ ತೆರದ

ಕೊಡೆಯಂತಿರುವ ಒಂದು ಕಿವಿಯ ಆಭರಣ) ಯ ಪಾಶ್ಚಾತ್ಯ ರೂಪಾಂತರವೆ?-ಚರ್ಚೆಯನ್ನು ಹೀಗೆಯೇ ನೀವು ಮುಂದುವರೆಸಬಹುದು.

* *

ಹೆಂಗಸರು ಲೋಲಾಕನ್ನು ಧರಿಸಿರುವಾಗ ಅದರ ಚಲನೆಯನ್ನು ನೀವು ಗಮನಿಸಬೇಕು. ದೊಡ್ಡ ಆವೃತ್ತದಲ್ಲಿ ಓಡಾಡುತ್ತ ಆಗಾಗ್ಗೆ ಲಾಗ ಹಾಕುತ್ತದೆ; ಹೊಳೆಯುತ್ತ ಅತ್ತಿತ್ತ ತೂಗಾಡುತ್ತದೆ. ಒಂದು ಸಾರಿ ಬಿರುಸಾಗಿ, ಮತ್ತೆ ಮೃದುವಾಗಿ ಕೆನ್ನೆಗೆ ತಟ್ಟುತ್ತದೆ. ಆಗಾಗ್ಗೆ ಇದ್ದ ಸ್ಥಳದಲ್ಲಿಯೇ ಬಳುಕುತ್ತದೆ. ಒಂದಲ್ಲ, ಎರಡಲ್ಲ ಅದರ ಚೇಷ್ಟೆ. ತಾನು ಅವಲಂಬಿಸಿರುವ ಹೆಣ್ಣಿಗಿಂತಲೂ ಚಂಚಲ.

ಲೋಲಾಕು ಸ್ತ್ರೀಗುಣದ ಪ್ರತೀಕ. ಅದು ತೂಗಾಡಿದಂತೆ ಸ್ತ್ರೀಯರ ಮನಸ್ಸೂ ತೂಗುವುದು. ಯೌವನವೂ ಓಡಾಡುವುದು. ಪ್ರೇಮವೂ ಮೂಡುವುದು. ಅದನ್ನು ತಂದುಕೊಟ್ಟ ಪ್ರಿಯನಲ್ಲಿ ಮನಸ್ಸೂ ನೆಡುವುದು.

# ಆ ದಿನದ ಕ್ಷೌರ

ಬಿನ್ನಿ ಮಿಲ್ಲಿನ ಮೊದಲನೆಯ ಸಿಗ್ನಲ್ 'ಭೊ' ಎಂದು ಕಿರಚಿ ರಂಗಣ್ಣನಿಗೆ ಬೆಳಕು ಹರಿಸಿತ್ತು. ಇನ್ನೂ ಮಲಗಿ ಗೊರಕೆ ಹೊಡೆಯುತ್ತಿದ್ದ ತನ್ನ ಮಗ ಶಂಕ್ರೂನ ಕಿವಿ ಹಿಡಿದು ಎತ್ತಿ "ಏಳೋ ಜೋಭದ್ರ, ಹೆಣ ಮಲಗಿದ ಹಾಗೆ ಮಲಗುತ್ತೀಯಲ್ಲೋ ?" ಎಂದ. ಅಪ್ಪನ ಈ ಘರ್ಜನೆಯನ್ನು ಕೇಳಿದೊಡನೆ ಕಪ್ಪೆಯನ್ನು ಮೇಲೊಗೆದ ಎಳೆಯ ಮಗುವಿನಂತೆ ಹೌಹಾರಿ ಕುಳಿತ ಶಂಕ್ರು. ಈ ರಭಸಕ್ಕೆ ಹಾಸಿಗೆ ಮುದುರಿ ಹಿಡಿಯಾಯಿತು.

"ಏಳೋ....ಏಳೋ, ಬಳೇಪೇಟೆ ಚೌಕದಲ್ಲಿ ಯಾರನ್ನಾದರೂ ಕರಕೊಂಡು ಬಾ, ಜಾಗ್ರತೆ ಚೆನ್ನಾಗಿರೋರ್ನ ಕರಕೊಂಡು ಬಾ. ಇಲ್ಲಾ! ಹೋದಸಾರಿ ಕರ್ಕೊಂಡು ಬಂದಿದ್ದೆಯಲ್ಲಾ ಆ ಎಡಬಿಡಂಗಿಯನ್ನೇ ಕರಕೊಂಡು ಬಂದ್ಬಿಡು, ಮಾಂಕುಮುಂಡೇದೆ. ಹದಿನಾಲ್ಕು ವರ್ಷ....ಅಡಿಗೆ ಹಾಕಿಕೊಂಡು ರವಷ್ಟಾದರೂ ಬುದ್ಧಿ ಬೇಡವೇ? ಕಂಡೋರ ಮಕ್ಕಳನ್ನ ನೋಡಿದರೆ ಸಂತೋಷವಾಗುತ್ತೆ." ಎಂದು ಛೀಮಾರಿ ಮಾಡಿದ.

ನಿದ್ದೆಯಿಂದ ಬಾಡುವ ಕಣ್ಣುಗಳನ್ನು ಉಜ್ಜುತ್ತಾ ಉಟ್ಟಿದ್ದ ಹಳೇ ಪಂಚೆಯನ್ನೇ ಬಿಚ್ಚಿ ಕಿವಿಗೆ ಸುತ್ತಿಕೊಂಡು ಚಳಿಯಿಂದಾಗಿ ಕಟಕಟಿಸುತ್ತಿದ್ದ ಹಲ್ಲುಗಳನ್ನು ಹತೋಟಿಗೆ ತೆಗೆದುಕೊಂಡ. ಬಾಯ ಮೂಲೆಯಲ್ಲಿ

ಸೋರಿ ಒಣಗಿದ್ದ ಜೊಲ್ಲನ್ನು ಅಂಗೈಯಿಂದ ಒರಸಿಕೊಳ್ಳುತ್ತ ಹೊರಟ ಶಂಕ್ರು.

'ಲೋ' ಎಂದ ರಂಗಣ್ಣ.

'ಓ' ಎಂದು ತಿರುಗಿ ನೋಡಿದ ಶಂಕ್ರು.

''ದುಡ್ಡಿನ ವಿಚಾರ ನಾನೇ ಮಾತಾಡ್ತೀನಿ. ನೀನು ಹೋಗಿ ನಾನು ಕರೆದಾ ಅಂತ ಕರ್ಸ್ಕೊಂಡು ಬಾ....ಜಲ್ದಿ ಬಾ....ನಮ್ಮಪ್ಪೋವ ದಾರಿಗೇ ಹೋಗಿಬಿಡಬೇಡಾ!'' ಎಂದ.

ಮೂತಿ ಊದಿಸಿಕೊಂಡು 'ಊ' ಗುಟ್ಟಿದ ಶಂಕ್ರು.

* *

''ಈ ಹಾಳು ಮನೆಯೂ ಸಾಕು, ಈ ಗೋಳೂ ಸಾಕು. ಕೊಂಚ ನಿದ್ದೆಗೂ ವ್ಯವಧಾನವಿಲ್ಲ. ಇದಕ್ಕಿಂತ ಬೀದಿಯ ಭಿಕಾರಿಯಾಗಿರಬಹುದಪ್ಪಾ. ಅವರಿವರ ಮನೆ ಜಗುಲಿಯ ಮೇಲೆ ಒಂಭತ್ತು ಗಂಟೆವರೆಗೂ ನಿಶ್ಚಿಂತನಾಗಿ ಮಲಗಿರಬಹುದು. ಯಾರೂ ಎಚ್ಚರಿಸುವುದಿಲ್ಲ.'' ಇನ್ನೂ ಏನೇನೋ ಗೊಣಗಬೇಕೆಂದಿದ್ದ ಶಂಕ್ರು. ದಾರಿಯಲ್ಲಿನ ಜಲ್ಲಿಕಲ್ಲು ಅವನ ಅಂಗಾಲಿಗೆ ಚುಚ್ಚಿ ಮನಸ್ಸನ್ನು ನೋವಿನ ಕಡೆ ಎಳೆಯಿತು.

ಇನ್ನೂ ಆರು ಗಂಟೆಯಾದ್ದರಿಂದ ಚಳಿಯಾದ ಗಾಳಿ ಹೋಟೆಲುಗಳ ಗವಾಕ್ಷಿಯಿಂದ ತೂರಿ ಒಗ್ಗರಣೆಯ ವಾಸನೆಯನ್ನು ಹೊತ್ತು ತಂದು ಮೂಗಿಗೆ ತಿನ್ನಿಸುತ್ತಿತ್ತು. ಹೊತ್ತಾಯಿತೆಂದು ಓಡುತ್ತಿದ್ದ ಮಿಲ್ ಕೆಲಸಗಾರರು, ಹ್ಯಾಂಡಲ್ ಮೇಲೆ ನ್ಯೂಸ್ ಪೇಪರ್ ಕಟ್ಟಿಕೊಂಡು ಓಡುವ ಏಜೆಂಟರು, ತರ್ಕಾರಿ ಮುಕ್ಕರಿ, ಮೊಸರಿನ ಗಡಿಗೆ, ಇವು ಆಗಾಗ ಎದುರು ಬರುತ್ತಿದ್ದವು.

ಕೂಲಿಗಾರನೊಬ್ಬ 'ನೆರವು* ಕುಡುಂಗೋ' ಎಂದ. 'ಇಲ್ಲೇ' ಎಂದು ತುಟಿಯಲ್ಲೆ ಅಣಗಿಸಿದ ಶಂಕ್ರು. 'ಗಾಡಿ ಹೋನಾ ಸಾಬ್....ಏನ್ ಸಾವಿ ಗಾಡಿ' ಎನ್ನುತ್ತಾ ಕುದುರೆಗಳನ್ನು ಯಾರೋ ಶಂಕ್ರೂನ ಮೇಲೆ ತಿರುಗಿಸಿ

*ನೆರವು : ಬೆಂಕಿ

ಬಿಟ್ಟರು. 'ನಕೋ....ಬೇಡ' ಎನ್ನುತ್ತ ಪಕ್ಕಕ್ಕೆ ನೆಗೆದು ಗಾಡಿಯ ಚಕ್ರದ ಗುರಿ ತಪ್ಪಿಸಿಕೊಂಡು ಮುಂತೆರಳಿದ. 'ಕೂಲಿ ಐತಾ ಸಾಮಿ....' ಇತ್ಯಾದಿ ಸಂಪ್ರದಾಯದ ಕೂಗುಗಳನ್ನು ಕೇಳಿಯೂ ಕೇಳದಂತೆ ನಟಿಸಿದ. ಎತ್ತಲೋ ನೋಡುತ್ತ ದೇವಸ್ಥಾನದ ಮುಂದೆ ಬಾಳೇಹಣ್ಣಿನ ಸಿಪ್ಪೆಯಮೇಲೆ ಸರ್ಕಸ್ ಮಾಡಿ ಅಂಗ್ಯೆಲಿ ಗೆದ್ದು, ಮಣ್ಣಾದ ಕೈಗಳನ್ನು ಉಜ್ಜಿ ಕೊಡವಿಕೊಂಡ.

ಶಂಕ್ರು ಬಳೇಪೇಟೆ ಚೌಕವನ್ನು ತಲುಪಿದಾಗ "ಹಾಳಾದವರು ಒಬ್ರೂ ಇಲ್ವಲ್ಲಾ; ಬೇಡವಾದಾಗ ಸಾಲಾಗಿಕೂತುಕೊಂಡಿರ್ತಾರೆ 'ಬರ್ಲೆ. ಬರ್ಲೆ' ಎಂದು ಬಡ್ಕೋತಿದ್ದವರಿಗೆ ಏನು ಬಂತು ಇವತ್ತು?" ಎಂದು ಅಚ್ಚರಿಪಟ್ಟ. ದೃಷ್ಟಿ ಚೂಪು ಮಾಡಿ ಹುಡುಕಿದ.

ದೂರದಲ್ಲಿ ಒಬ್ಬ ನಿಂತಿದ್ದ. ಮೊದಲೇ ಮುದುಕನಾದ್ದರಿಂದ ಚಳಿಯನ್ನು ತಡೆಯಲಾರದೆ ಸುತ್ತಿದ್ದ ಪೇಟದ ಮೇಲಿಂದಲೇ ದುಪ್ಪಟಿಯನ್ನು ಹೊದ್ದುಕೊಂಡು ನಡುಗುತ್ತಿದ್ದ. ಹುಲ್ಲು ಗಾಡಿಯ ಪಕ್ಕದಲ್ಲಿ ಗಾಳಿಗೆ ಮರೆಯಾಗಿ ನಿಂತು ರಸ್ತೆಯಲ್ಲಿ ಹೋಗಿ ಬರುವವರು ಯಾರಾದರೂ ತನ್ನ ಕಡೆಗೆ ನೋಡಿದರೆ ಅವನೂ ಅವರ ಕಡೆ ವಾಲಿ ಅವರು 'ಗಿರಾಕಿಗಳೋ ಏನು?' ಎಂದು ನೋಡುತ್ತಿದ್ದ. ಕಂಕುಳ ಸಂದಿಯಲ್ಲಿ ಅಡಗಿಸಿರುವ ಸಾಮಾನು ದುಪ್ಪಟಿಯನ್ನು ಮುಂದಕ್ಕೊತ್ತಿದೆ.

'ಬಾಪ್ಪ, ನಮ್ಮಪ್ಪಾ ಕರೀತಾರೆ' ಎಂದ ಶಂಕ್ರು, ಹುಲ್ಲುಗಾಡಿಯ ಕಡೆ ನೋಡುತ್ತ.

ಆತ ಏನೋ ಮಾತಾಡಬೇಕೆಂದಿದ್ದ. ಆದರೆ ಶಂಕ್ರು ಅವನು ಷುರು ಮಾಡುವ ಮೊದಲೆ,

"ದುಡ್ಡಿನ ವಿಚಾರ ಅವರೇ ಮಾತ್ನಾಡುತ್ತಾರಪ್ಪಾ" ಎಂದ.

"ಎಲ್ಲಿ ಸ್ವಾಮಿ ಮನೆ?"

"ಇಲ್ಲೇನಯ್ಯ, ಇದೇ ರಸ್ತೇಲಿ ನೆಟ್ಟಗೆ ಹೋಗಿ, ಬಲಕ್ಕೆ ತಿರುಗಿ, ಎಡಕ್ಕೆ ಹೊರಳಿ ಕೊನೇ ಗಲ್ಲಿಯಲ್ಲಿ ನಡೆದರೆ ಎರಡನೆಯ ಮನೆ. ಮನೆ

ಮುಂದೆ ಮೋರಿ, ಲೈಟುಕಂಭ ಎರಡೂ ಇವೆ.'' ಎಂದು ಬೆರಳು ಮಾಡಿ ತೋರಿಸಿದ ಶಂಕ್ರ್ರ.

ಆತ ಹುಬ್ಬುಗಳೆರಡನ್ನೂ ಕೂಡಿಸಿ ಶಂಕ್ರ್ರ ತೋರಿಸಿದ ಕಡೆಗೆ ನೋಡಿ ''ನಡೀರಿ ಸಾಮಿ, ಇಲ್ಲಿ ಯಾರೂ ಇಲ್ಲ, ಜಾಗ್ರತೆ ಬಂದ್ಬಿಡೋಣ'' ಎಂದು ಹೊರಟ. ಸದ್ಯ ಸಿಕ್ಕಿದನಲ್ಲಾ ಎಂದು ಶಂಕ್ರ್ರ ಬಿಡುಗಡೆಯ ನಗುನಕ್ಕ.

ಶಂಕ್ರ್ರ ಮನೆಗೆ ಹೋಗುವುದರೊಳಗಾಗಿ ರಂಗಣ್ಣ ಅಳುತ್ತಿದ್ದ ಎಳೆಯ ಮಗುವಿನ ಕಪಾಳಕ್ಕೆ ತಟ್ಟಿ, ಅಕ್ಕನಿಗೆ ಬೈದು, ಅಮ್ಮನೊಂದಿಗೆ ವಾದಿಸಿ ಮುನಿಸಿಕೊಂಡಿದ್ದ. ಅಂಗಿ ಬಿಚ್ಚಿ 'ನಾನು ದೇಶಾಂತರ ಹೋಗು ತ್ತೇನೆ' ಎಂದು ಮನೆಯಲ್ಲೆಲ್ಲಾ ಹಾರಾಡುತ್ತಿದ್ದ.

ಶಂಕ್ರ್ರನ ಮುಖ ಕಾಣುತ್ತಲೆ ಕೋಪದ ಕೆಂಗಣ್ಣುಗಳನ್ನು ಶಂಕ್ರ್ರನ ಮೇಲೆ 'ಥೂ' ಬಿಟ್ಟು ''ನೀವೆಲ್ಲ ಹೆಣ ಹೊರೋಕೆ ಲಾಯಖ್ಖು ಕಣ್ರೋ. ಹೋದ ಹೋದ....'' ಅನ್ನುತ್ತಿದ್ದಂತೆ ಶಂಕ್ರ್ರುವನ್ನು ಹಿಂಬಾಲಿ ಸಿದ ಮನುಷ್ಯನನ್ನು ನೋಡಿ ಮಾತು ನಿಲ್ಲಿಸಿದ.

''ಬಾರಪ್ಪ....ಇಲ್ಲೇ ಕೂತುಕೋ'' ಎಂದು ಹೇಳಿ ಕೂಡಿಸಿದ.

''ಹೋಗೋ, ನಿಂತ್ಕೋಡೇನು ನೋಡ್ತಾ ಇದ್ದೀ. ಬಿಸಿನೀರು ತಗೊಂಡು ಬಾ ಲೋಟದಲ್ಲಿ.'' ಎಂದು ಶಂಕ್ರ್ರನ ಕಡೆ ತಿರುಗಿ ಗದರಿದ. ಹೊಸಬ ನನ್ನುದ್ದೇಶಿಸಿ 'ಇನ್ನು ಮೇಲೆ ಹೇಳ್ಲಿ....ಹೇಳದೆ ಇರಲಿ, ಎಂಟು ದಿನ ಕ್ಕೊಮ್ಮೆ ಬಂದ್ಬಿಡಪ್ಪಾ'' ಎಂದು ಹೇಳಿ ನಡುಮನೆಗೆ ಹೋದ.

''ಲೇ ಶಾರದೆ, ಹಳೇ ಪಂಚೆ ಎಲ್ಲಿಟ್ಟಿದ್ದೀಯೇ?''—ಎಂದು ಕೂಗಿ ಹಾಸಿಗೆ ಸಂದು, ಕದದ ಮೇಲೆ, ಮೈಲಿಗೆ ಬುಟ್ಟಿ ಇತ್ಯಾದಿ ಸ್ಥಳಗಳನ್ನು ಹುಡುಕಾಡಿದ.

''ಅತ್ರೇ, ನಿಮಗೆಷ್ಟು ಸಾರಿ ಹೇಳೋದು ಪಂಚೆಗಳನ್ನು ತೊಟ್ಟಿ ಲೊಳಗೆ ಹಾಕಬೇಡಿ ಅಂತ. ನೋಡೀಗ 'ಪಪ್ಪಿ'* ನೆನಸಿಬಿಟ್ಟಿದ್ದಾಳೆ.'' ಎಂದು ಆ ಒದ್ದೆಯನ್ನೇ ಹೊದ್ದುಕೊಂಡು ಈಚೆಗೆ ಬಂದ.

---

*ನಾಯಿ ಮರಿಯಲ್ಲ, ಎಳೇ ಮಗುವಿನ ಮುದ್ದಿನ ಹೆಸರು

ಆತನ ಮುಂದೆ ಕೂತುಕೊಂಡು "ಹೊತ್ತಾಗಿ ಹೋಯ್ತಲ್ಲಯ್ಯಾ, ಕತ್ತೀನಾದ್ರೂ ಮಸ್ಕೊಂಡಿರಬಾರದಾಗಿತ್ತೆ ಇಷ್ಟು ಹೊತ್ತಿಗೆ. ಕಂಕುಳಿಂದ ಹಡಪಾನೇ ಇಳಸಿಲ್ಲ ಮಹಾರಾಯ." ಎಂದು ತನ್ನ ಸಹಜರೀತಿಯಲ್ಲಿ ಹೇಳಿದ.

"ಏನ್ ಅಯ್ಯನೋರೆ, ಹಡಪ ಗಿಡಪ ಅಂತ ಹೇಳ್ತೀರಾ?" ಆತ ದನಿ ಎತ್ತರಿಸಿ ಕೇಳಿದ.

'ತೆಗಿಯಪ್ಪಾ ಕಂಕುಳಲ್ಲಿರೋ ಹಡಪಾನ' ಎಂದು ಅವಸರಿಸಿದ ರಂಗಣ್ಣ.

''ಯಾರ್ರಿ ಹಡಪದೋರು. ನೀವುಕಣ್ರೀ'' ಎಂದು ಕಂಕುಳಿನಲ್ಲಿದ್ದ ಬಟ್ಟೆಯ ಗಂಟನ್ನು ಸರ ಸರ ಬಿಚ್ಚತೊಡಗಿದ. ದುಗುಡದ ಮುಖವನ್ನು ಅತ್ತಿತ್ತ ವಾಲಾಡಿಸುತ್ತಿದ್ದ.

''ಲೋ, ನಮ್ಮ ಲೋಟದಲ್ಲೇ ನೀರು ತಗೊಂಡು ಬಾ, ಈತ ಕಪ್ಪು ತಂದಿಲ್ಲ ಅಂತ ಕಾಣುತ್ತೆ'' ಎಂದು ಶಂಕ್ರನನ್ನು ಕೂಗಿ ಹೇಳಿದ ರಂಗಣ್ಣ.

''ಏಳಪ್ಪಾ ಸರ್ ನಾ....ಟೂರ್ ಹೋಗಬೇಕು ಸಾಹೇಬ್ರ ಜೊತೆಗೆ.. ಸೋಪು ಗೀಪು ಇದೆಯೋ ಇಲ್ಲವೋ? ನಯವಾಗಿ ಮಾಡಬೇಕು. ಉರಿ ಸಬಾರದು. ನನಗೆ ಮುಖದಲ್ಲಿನ ಕೂದಲು ಒರಟು. ಕತ್ತಿ ಚೆನ್ನಾಗಿ ಮಸಿ ದಿದ್ದೀ ತಾನೇ? ಇಲ್ಲದಿದ್ರೆ 'ಚುಳ್' ಎನ್ನುತ್ತೆ. ಕತ್ತಿ ಒಂದೇ ತಂದಿದೀ ಯೋ, ಎರಡು ತಂದಿದೀಯೋ? ಹೋದ ವಾರ ಯಾರೋ ಒಬ್ಬ ಬಂದಿದ್ದ. ಮುಖವೆಲ್ಲಾ ಕೆತ್ತು ಹಾಕಿ ಬಿಟ್ಟ. ಮೂರು ದಿನ ಮುಖ ಸವರಿಕೊಳ್ಳೋ ದಕ್ಕಾಗಲಿಲ್ಲ. ಆಫೀಸಿನಲ್ಲೆಲ್ಲಾ 'ಏನ್ ರಂಗಣ್ಣ, ಮುಖದಲ್ಲಿ ಪ್ಲಸ್, ಮೈನಸ್‌ಗಳು' ಎಂದು ಹಾಸ್ಯ ಮಾಡಿದರು'' ಎಂದು ಒಂದೇ ಸಮನೆ ಒದರಿದ. ಮಧ್ಯೆ ಹೊಸಬ ಏನೋ ಮಾತನಾಡಬೇಕೆಂದಿದ್ದ. ಆದರೆ ರಂಗಣ್ಣ ಆಸ್ಪದ ಕೊಡಲಿಲ್ಲ.

'ಏನ್ ಸ್ವಾಮಿ ತಿಳಿದೋರಾಗಿ ಈ ರೀತಿ ಮಾತಾಡ್ತೀರಾ? ಯಾಪಾ ರಿಕರ ಲಕ್ಷಣವೇ ಇದು? ಬೆಳಗಿನ ಹೊತ್ತು..' ಎನ್ನುವಷ್ಟರಲ್ಲಿ ರಂಗಣ್ಣ

“ನಾನು ವ್ಯಾಪಾರಿಯಲ್ಲ, ಹೆಡ್ ಕ್ಲಾರ್ಕ್. ಹೂ, ಆಗಲಿ ಮಾಡಯ್ಯ ಹೊತ್ತಾಯ್ತು” ಎಂದ.

“ಏನ್ ಸ್ವಾಮಿ ಮಾಡೋದು?....ಯಾರ್ರಿ ಹಜಾಮ ಅಂತ”ಎನ್ನುವಲ್ಲಿ ರಂಗಣ್ಣ “ಹೌದಪ್ಪಾ, ಇನ್ನು ಮೇಲೆ ಹಜಾಮ ಅನ್ನೋಲ್ಲ. ಶೆಟ್ಟರನ್ನು ಶೆಟ್ಟರೆ ಎಂದರೆ ರೇಗುವಾಗ ನಿಮ್ಗೆ ಹಜಾಮ ಅಂದ್ರೆ ರೇಗೋಲ್ವೆ! ಏಳು ಏಳು” ಎಂದ.

“ಪೇಟೆಗೆ ಹುಲ್ಲಿನಗಾಡಿ ಹೊಡೆದು ತಂದಿದ್ದೇನೆ.... ನೀವು ಚೌರ ಮಾಡು ಅಂತೀರೆಲ್ಲಾ,” ಎಂದು ರೇಗಿ ಬಟ್ಟೆಯಲ್ಲಿ ಸುತ್ತಿದ ಗಂಟನ್ನು ಬಿಚ್ಚತೊಡಗಿದ.

“ಹುಲ್ಗಾಡಿ ವ್ಯಾಪಾರಾನೂ ಮಾಡ್ತೀಯಾ! ನಮ್ಮ ಹಸು ಮಾನಿಸಿಕೊಂಡದ್ದರಿಂದ ಹಳ್ಳಿಗೆ ಹೊಡೆದಿದೆ. ಅದು ಬಂದನಂತರ ಹುಲ್ಗಾಡಿ ನಮಗೂ ಬೇಕು. ಆಗ ಹೇಳ್ತೇನೆ. ಹೇಗಿದ್ರೂ ಬರ್ತ್ತಿರ್ತಿಯಲ್ಲಾ ಎಂಟು ದಿನಕ್ಕೊಂದಾವರ್ತಿ ಕ್ಷೌರಕ್ಕೆ” ಎಂದ.

“ನಿಮ್ಗೆ ಗ್ನ್ಯಾನ ಸುದ್ದಿಲ್ಲ ಸಾಮಿ” ಎಂದು ಕೂಗಿ ಕಂಕುಳಿನಲ್ಲಿದ್ದ ಬಟ್ಟೆ ಗಂಟು ಬಿಚ್ಚಿ ತೋರಿಸಿದ. ಅದರೊಳಗಿದ್ದ ರೊಟ್ಟಿಯನ್ನು ಎತ್ತಿ ಹಿಡಿಯುತ್ತಾ ‘ಇದು ಹಡಪಾನೇನ್ ಸಾಮಿ’ ಎಂದು ರೇಗಾಡಿದ. ‘ಹುಲ್ಗಾಡಿ ಯ್ಯಾಪಾರವಮಾಡ್ತೀನಿಎಂದು ಮನೆಗೆ ಕರಸ್ಕೊಂಡು ಚೌರ ಮಾಡು ಅಂತೀರಾ. ಇದು ನ್ಯಾಯವೇ ಸ್ವಾಮಿ? ಹಳ್ಳಿಯವರ್ನ ಕಂಡ್ರೆ ಎಲ್ಲಾ ಇಂಗೆ----ತಾತ್ಸಾರ ಸ್ವಾಮಿ’ ಎಂದು ಬಟ್ಟೆ ಗಂಟನ್ನು ತೆಗೆದುಕೊಂಡು ದಡಾರನೆ ಹೊರಟುಹೋದ.

ರಂಗಣ್ಣನಿಗೆ ಗಾಬರಿಯಿಂದ ನಾಲಿಗೆ ಚಲಿಸಲಿಲ್ಲ.

ಲೋಟದಲ್ಲಿ ನೀರು ತರುತ್ತಿದ್ದ ಶಂಕ್ರು ತನ್ನ ಮೈ ಮೇಲಿನ ಚರ್ಮ ಉಳಿಸಿಕೊಳ್ಳಲು ಹಿತ್ತಿಲಿನಿಂದ ನೆಗೆದು ರಂಗಣ್ಣ ಆಫೀಸಿಗೆ ಹೋಗುವವರೆಗೂ ಮನೆಯ ಹಿಂದಿನ ಗಲ್ಲಿಯಲ್ಲಿಯೇ ಠಳಾಯಿಸುತ್ತಿದ್ದ.

# ಸಂದರ್ಶನ

ಸಂದರ್ಶನ ತೆಗೆದುಕೊಳ್ಳಬೇಕೆಂದು ನನಗೆ 'ಲಾಗಾಯಿತು' ನಿಂದಲೂ ಬಹಳ ಆಸೆ. ಅನೇಕ ಮುಖಂಡರು, ಪ್ರಸಿದ್ಧ ಪುರುಷರು ಮತ್ತು ಸಾಹಿತಿಗಳ ದೂರ ದರ್ಶನವನ್ನು ತೆಗೆದುಕೊಂಡಿದ್ದೇನೆ. ಆದರೆ ಅವರೆಲ್ಲರೂ ನನಗೆ ಸಂದರ್ಶನವನ್ನು ನಿರಾಕರಿಸಿದ್ದಾರೆ. ಎಷ್ಟೇ ಆಗಲೀ, ನಾನು ಪತ್ರಿಕೋದ್ಯೋಗಿಯಲ್ಲ; ಎರಡೂವರೆ ಕಾಲಂ ತುಂಬ ಅವರನ್ನು ಹೊಗಳಬಲ್ಲನೆಂಬ ಭರವಸೆ ಅವರಿಗಿಲ್ಲ. ಆದರೂ ನಾನು ಧೃತಿಗೆಡಲಿಲ್ಲ. ನನ್ನಾಸೆ ಮನಸ್ಸಿನಲ್ಲಿ ಬಹುವಾಗಿ ಬೇರೂರಿತ್ತು.

* *

'ಕಿರ್'

—ಎಂದು ಬಾಗಿಲು ಹಿಂದೋಡಿ ಜವಾನನ 'ದಡೂತಿ' ಪೇಟ ಗೋಚರಿಸಿತು. ನಾನು ಕಳುಹಿಸಿದ್ದ 'ವಿಸಿಟಿಂಗ್ ಕಾರ್ಡು' ಹಿಂದಕ್ಕೆ ಬಂದಿದ್ದು ಕಂಡು, ಸಂದರ್ಶನ ಸಿಗಲಾರದೆಂದು ನಿರಾಶೆಗೊಂಡೆ.

"ಬನ್ನಿ ಸಾರ್, ಕರೀತಾರೆ" ಎಂದು ಆ ಜವಾನ ಹೇಳಿದ ಕೂಡಲೆ ನನ್ನ ನಿರಾಶೆಯೆಲ್ಲವೂ ಒಮ್ಮೆಲೆ ಭಯಕ್ಕೆ ತಿರುಗಿತು. ಕೈಕಾಲುಗಳು ಓಡುತ್ತಿರುವ ಹಳೆಯ ಬಸ್ಸಿನ ಸೀಟುಗಳಂತೆ ನಡುಗುತ್ತಿದ್ದುವು. ಕೊರ

ಳಿನ ಬೆವರಿನ ನಲ್ಲಿಗಳನ್ನು ಅಂಗೈಯಲ್ಲಿನ ಚೌಕದಿಂದ ತಡೆಗಟ್ಟುತ್ತಾ ಒಳಕ್ಕೆ ಕಾಲಿಟ್ಟೆ. ಪರಸ್ಪರ ವಂದನೆಗಳು ನಡೆದನಂತರ, ಅವರ ಸನ್ನೆಯಂತೆ ಸಿದ್ಧಪಡಿಸಿದ್ದ ಕುರ್ಚಿಯೊಂದನ್ನು ಏರಿದೆ.

ಅವರು ಕುರ್ಚಿಯ ಮೇಲೆ ಕುಳಿತಿರಲಿಲ್ಲ. ಮೇಜಿನ ಬುಡದಲ್ಲಿ ನಿಂತುಕೊಂಡು ಟ್ರೇ, ಕಾಲಿಂಗ್ ಬೆಲ್, ಬ್ಲಾಟರ್‌ಗಳನ್ನು ಮೂಸಿನೋಡುತ್ತ,

"ದಯವಿಟ್ಟು ಅನ್ಯಥಾ ಭಾವಿಸಬೇಡಿ....ನನಗೆ ಕುರ್ಚಿಯ ಮೇಲೆ ಕುಳಿತು ರೂಢಿಯಿಲ್ಲ....ಬೆನ್ನು ಉರಿ ಬರುತ್ತದೆ" ಎಂದರು.

ತಮ್ಮ ಮುಂಗಾಲುಗಳಿಗೆ ಅವರು ಅಂದವಾಗಿ ರಿಬ್ಬನ್ ಬಿಗಿದಿದ್ದರು. ಕೊರಳನ್ನು (ಮೇಜಿನ ಬುಡಕ್ಕೆ ಶಿಲ್ಕಿನ ಸಣ್ಣ ದಾರದಿಂದ) ಕಟ್ಟಿಕೊಂಡಿದ್ದರು.

"ಅಯ್ಯೋ! ಪರವಾಯಿಲ್ಲ, ಅದಕ್ಕೇನು?" ನನ್ನ ಗಂಟಲು ಒಣಗಿತ್ತು.

"ನನ್ನಿಂದ ತಮಗೇನಾಗಬೇಕು?" ಅವರ ಸೌಜನ್ಯಕ್ಕೆ ನಾನು ಬೆರಗಾದೆ.

"ನಾನು ಪತ್ರಿಕೋದ್ಯೋಗವನ್ನು ಅಭ್ಯಾಸಿಸುತ್ತಿದ್ದೇನೆ. ನಿಮ್ಮ 'ಇಂಟರ್‌ವ್ಯೂ' ಗಾಗಿ ಬಂದಿದ್ದೇನೆ"

'ಸಂತೋಷ ...ನಮ್ಮ ಕೋಮಿಗಾಗಿ ಮೀಸಲಾಗಿರುವ'ಮೈನಾರಿಟಿ' ಯ ಮಂತ್ರಿ ಪದವಿ, ನನಗೆ ದೊರೆತ ನಂತರ, ನೀವೇ ಮೊದಲನೆಯವರು ನನ್ನಿಂದ ಸಂದರ್ಶನವನ್ನು ಅಪೇಕ್ಷಿಸಿದವರು."

"ಇನ್ನು ಮೇಲೆ ಎಲ್ಲರೂ ಬರುತ್ತಾರೆ."

"ಹಿ—ಹೀ" ಇಬ್ಬರೂ ಹಲ್ಲು ಬಿಟ್ಟೆವು.

ಮೇಜಿನ ಮೇಲಿದ್ದ ಕಾಲಿಂಗ್ ಬೆಲ್ಲನ್ನು ಮೂತಿಯಿಂದ ಅದುಮಿ ಸದ್ದು ಮಾಡಿದರು. ಮರುದಲ್ಕಂಡ ಆ 'ದಢೂತಿಪೇಟದ' ಜವಾನ ಡೊಂಕು ಸೊಂಟದೊಂದಿಗೆ ಎದುರುನಿಂತ.

"ಟಿಫನ್ ತೆಗೆದುಕೊಂಡು ಬಾ ಬೇಗ." ಎಂದು ಸಾಹೇಬರ ಅಪ್ಪಣೆಯಾಯಿತು.

ಒಂದೆರಡು ನಿಮಿಷಗಳಲ್ಲಿ ಪಿಂಗಾಣಿ ತಟ್ಟೆಗಳಲ್ಲಿ ಐದಾರು ತೊಲದಷ್ಟು 'ಟೋಸ್ಟ್' ಮಾಡಿದ ಹುಲ್ಲು ಇಬ್ಬರ ಮುಂದೆಯೂ ಒಂದೊಂದು ಪ್ಲೇಟ್ ಬಂದಿತು. ಇಂಗು ತಿನ್ನುವ ಕಪಿಯಂತೆ ಮುಖ ಮಾಡಿಕೊಂಡು ತಟ್ಟೆಯನ್ನು ಖಾಲಿ ಮಾಡಿವೆ, ಆವರೆ ತಿನ್ನಲಿಲ್ಲ. ಸಾಹೇಬರೇ ಸ್ವಹಸ್ತದಿಂದ ಕೆಟಲ್ ಮೂತಿಯಿಂದ ಲೋಟಕ್ಕೆ ಏನನ್ನೋ ಸುರಿದು "ತೆಗೆದುಕೊಳ್ಳಿ" ಎಂದರು. ಅದನ್ನು ಮೂಗಿನ ಹತ್ತಿರ ಇಟ್ಟುಕೊಳ್ಳಬೇಕಾದರೆ ಸಾಕು ಸಾಕಾಯಿತು. 'ದೊಡ್ಡವರ ಸಹವಾಸ' ನನಗೆ ಅರಿವಾಗತೊಡಗಿತು. 'ಕಾಡ್‌ಲೀವರ್ ಆಯಿಲ್' ಕುಡಿಯುವ ಮಗುವಿನಂತಾದೆ.

"ಈ 'ಮುಸುರೇಟಿನ್' ನೀವೆಂದೂ ರುಚಿ ನೋಡಿಲ್ಲವೆಂದು ಕಾಣುತ್ತೆ. ಓವಲ್‌ಟಿನ್‌ಗಿಂತಲೂ ಒಳ್ಳೆಯದು. ಈಚೆಗೆ 'ಮುಸುರೆಟಿನ್' ಸಹ ಕಾಳಸಂತೆಯ ಪದಾರ್ಥವಾಗಿದೆಯಂತೆ...."

'ಅಕ್ಷರಸಹ ನಿಜ' ಎಂದು ಒಪ್ಪಿಕೊಂಡೆ.

ನೋಟುಪುಸ್ತಕವನ್ನು ಹೊರತೆಗೆದು 'ಇಂಟರ್‌ವ್ಯೂ' ಪಡೆಯಲು ಸಿದ್ಧನಾದೆ. "ನಿಮ್ಮ ಜನನ ಮತ್ತು ಬಾಲ್ಯ ಎಲ್ಲಿ ನಡೆಯಿತು ? ಆಗ ನಡೆದ ಪ್ರಮುಖ ಘಟನೆಗಳೇನು ?" ಎಂಬುದು ಮೊದಲನೆಯ ಪ್ರಶ್ನೆ.

"ನನ್ನ ತಂದೆ ಯಾರೆಂದು ಇದುವರೆಗೂ ನನಗೆ ಗೊತ್ತಾಗಿಲ್ಲ. ನನ್ನ ಜನನದ ಬಗ್ಗೆ ಜಾತಕವನ್ನು ಬರೆಸಿಟ್ಟಿಲ್ಲ ನನ್ನ ತಾಯಿ;—ಕಾರಣ ವಿಷ್ಟೆ; ನಮ್ಮಲ್ಲಿ ಮದುವೆಗಳಿಗೆ ಜಾತಕದ ಅವಶ್ಯಕತೆಯಿಲ್ಲ.—ಅಂತೂ ನಾನು ಒಂದು ಹಳ್ಳಿಯಲ್ಲಿ ಅಗಸರ ಹಟ್ಟಿಯ ಮೋಟುಗೋಡೆಯ ಬಳಿ ಹುಟ್ಟಿದೆನೆಂದು ಕರ್ಣಾಕರ್ಣಿಯಿದೆ. ಎಳೆಯುವನಾಗಿದ್ದಾಗ ನನ್ನ ಮೈ ತುಂಬ ಹೊಂಗೂದಲು ತುಂಬಿ 'ಯೂರೋಪಿಯನ್ ಬ್ಲಾಂಡೆ'ಯ ಹಾಗೆ ಪುಟ್ಟದಾಗಿ ಮುದ್ದಾಗಿದ್ದೆ ಎಂದು ನನ್ನ ಸಮಕಾಲೀನರು ಹೇಳುತ್ತಾರೆ.

"ಜನ್ಮ ಕಳೆದ ಕೆಲವು ದಿನಗಳವರೆಗೂ ನಾನು ನನ್ನ ತಾಯಿಯ ಜೊತೆಯಲ್ಲೇ ಸುಖವಾಗಿದ್ದೆ. ಸ್ವಲ್ಪ ದಿನಗಳನಂತರ ನನ್ನ ತಾಯಿಯ ಬೆನ್ನಿನ ಮೇಲೆ ಬೆಟ್ಟದಂಥ ಹೊರೆಯನ್ನು ಹೇರಿ ಎಲ್ಲಿಗೋ ಕರೆದುಕೊಂಡು ಹೋಗುತ್ತಿದ್ದರು. ನಾನು ನಮ್ಮ ಹಟ್ಟಿಯ ಹುಡುಗರೊಂದಿಗೆ ಸ್ನೇಹ ಬೆಳಸಿದೆ. ನಮ್ಮ ತಾಯಿ ಮನೆಗೆ ಬಂದೊಡನೆ ಅವಳ ಮುಂಗಾಲುಗಳನ್ನು ಕಟ್ಟಿಬಿಡುತ್ತಿದ್ದರು. ಈ ಜೀವನದಿಂದ ಅವಳಿಗೆ ಬೇಸರ ಬಂದು ಒಮ್ಮೊಮ್ಮೆ ನನಗೂ ಒದೆಯುತ್ತಿದ್ದಳು."

ನನ್ನ ಆಸಕ್ತಿ ಉಕ್ಕಿ ಹರಿಯುತ್ತಿತ್ತು.

"ಬೇಸಿಗೆ ರಜೆಗಳಲ್ಲಿ ಹುಡುಗರೊಂದಿಗೆ ನನ್ನ ಸ್ನೇಹ ಹೆಚ್ಚುತ್ತಿತ್ತು. ತೊರೆಯ ಬುಡದಲ್ಲಿ ಮೇಯುತ್ತಿದ್ದ ನನ್ನನ್ನು ನೀರಿಗೆಳೆಯುತ್ತಿದ್ದರು. ಈಜುಬಾರದ ನಾನು ಪ್ರಾಣ ಉಳಿಸಿಕೊಳ್ಳಲು ಒದ್ದಾಡುವುದು ಅವರಿಗೆ ಚೆಲ್ಲಾಟವಾಗಿತ್ತು. ನನ್ನೊಂದಿಗೆ ಅವರೂ ಲಂಗೋಟಿ ಹಾಕಿಕೊಂಡು ಧುಮುಕಿ ಈಜುತ್ತಿದ್ದರು. ಅವರಿಗೂ ಸಾಕಾಗಿ, ನನ್ನ ಮೂಗು ಬಾಯಿಗಳಲ್ಲಿ ಲೋಳೆ ಕಿತ್ತುಕೊಂಡಾಗ ಎಲ್ಲರೂ ದಡಕ್ಕೆ ನೆಗೆದು ನಡುಗುವ ಮೈಯನ್ನು ತೊಡುವ ಚಡ್ಡಿಗಳಿಂದಲೇ ಒರಸಿದ ಶಾಸ್ತ್ರ ಮಾಡುತ್ತಿದ್ದರು.

"ತಪ್ಪಿಸಿಕೊಂಡು ಹೊರಟಿದ್ದ ನನ್ನನ್ನು ನಾಲ್ಕೈದು ಒದ್ದೆಯ ಲಂಗೋಟಿಗಳನ್ನು ಗಂಟುಹಾಕಿ ಮಾಡಿದ 'ಹಗ್ಗ'ದಿಂದ ಬಂಧಿಸುತ್ತಿದ್ದರು. ಇಬ್ಬರು ನನ್ನ ಕಿವಿಗೆ ಕೈ ಹಾಕಿ, ಮತ್ತೊಬ್ಬ ಬಾಲವನ್ನು ಕಿರುಚುತ್ತಿದ್ದ. ಅಷ್ಟರಲ್ಲಿ ಆ ಹುಡುಗರ ಮುಖಂಡ ನನ್ನ ಬೆನ್ನು ಮೇಲೆ ನೆಗೆದು ಕುಳಿತುಕೊಳ್ಳುತ್ತಿದ್ದ. ಉಳಿದ 'ಲಂಗೋಟಿ ಗೆಳೆಯ'ರೆಲ್ಲ ನನಗೆ ಸಿಕ್ಕಿದ ಕಡೆಗಳಲ್ಲೆಲ್ಲಾ ಗುದ್ದಿರೇಗಿಸುತ್ತಿದ್ದರು."

'ಅಯ್ಯೋ! ಪಾಪ!' ಎಂದು ನನ್ನ ಸಹಾನುಭೂತಿಯನ್ನು ವ್ಯಕ್ತಗೊಳಿಸಿದೆ.

"ರೇಗಿದರೆ ನಾನೇನು ಕುದುರೆಗೆ ಕಡಿಮೆ ಓಡುವವನಲ್ಲ. ಕಿವಿ ಹಿಂಡಿದವನನ್ನು ಹಿಂದೆ ಹಾಕಿ, ಬಾಲ ಬಡಿದವನಿಗೆ ಒದ್ದು ಓಟದ ರಭಸ

ವನ್ನು ಹೆಚ್ಚಿಸುತ್ತಿದ್ದೆ. ನನ್ನ ಮೇಲೆ ಕುಳಿತಿದ್ದ ರಾಹುತನು ಬಂಡಿಯ ಗಾಲಿಯಂತೆ ದಿಂಡುರಳಿದಾಗ ಎಲ್ಲರೂ ಸೇರಿ ನನಗೆ ಬಾಸುಂಡೆ ಬರುವಂತೆ ಚಚ್ಚಿ ಸುಮ್ಮನಾಗುತ್ತಿದ್ದರು. ಈ ಹೊಡೆತವನ್ನೇ ನೆನೆದುಕೊಂಡು ನಾನೇನು ಅವರ ಜೊತೆ ಬಿಡಲಿಲ್ಲ, ಅವರೂ ಅಷ್ಟೆ. ಸ್ನೇಹವೆಂದಮೇಲೆ ಈ ವಿಚಾರವೆಲ್ಲ ಗಣನೆಗೆ ಬರುವುದಿಲ್ಲ.''

ಅವರ ನಿರ್ವ್ಯಾಜ ಸ್ನೇಹದ ಬಗ್ಗೆ ನಾನು ಮನಸ್ಸಿನಲ್ಲಿಯೇ ತಲೆ ದೂಗಿದೆ.

''ನಾನು ಪ್ರಾಪ್ತ ವಯಸ್ಕನಾದ ಕೂಡಲೆ ನನ್ನ ತಾಯಿಯೊಂದಿಗೆ ನನಗೂ ಹೊರೆಯನ್ನು ಹೇರಿ ಕರೆದೊಯ್ಯತೊಡಗಿದರು. ಕೆಲವು ವೇಳೆ ಅವರಿಗೆ ಚಕ್ಕರ್ ಕೊಡುತ್ತಿದ್ದೆ. ಅಂದಿನಿಂದ, ನನಗೆ ಮುಂಗಾಲುಗ ಳನ್ನು ಕಟ್ಟತೊಡಗಿದರು. ಇಷ್ಟರಲ್ಲಿ ನಮ್ಮ ಮಾಲೀಕರು 'ಸಿಟಿ'ಗೆ ವಲಸೆ ಬಂದರು. ಅವರ ಸಂಸಾರವೆಂಬಂತಿದ್ದ ನಾವೂ ಅವರೊಂದಿಗೆ ಬಂದೆವು.'' ಹೀಗೆಂದು ತಮ್ಮ ಬಾಲ್ಯ ಜೀವನವನ್ನು ವರ್ಣಿಸಿದರು.

''ತಮಗೆ ಸಂಗೀತ ಬರುತ್ತದೆಯೆ? ಅಭಿನಯದಲ್ಲಿ ಪರಿಶ್ರಮವಿ ದೆಯೇ?'' ಸಂದರ್ಶನ ಮುಂದುವರೆಯಿತು.

''ಹೌದು! ನಾವು ಹಾಡುವುದು ಒಂದೇ ಒಂದು ರಾಗ, ಮಿಕ್ಕ ರಾಗ ಗಳೆಲ್ಲವು ಮರೆತುಹೋದಂತೆ ಕಾಣುತ್ತಿವೆ. ನೀವು ಕೇಳಲಿಚ್ಛಿಸುವಿ ರಾದರೆ, ಒಮ್ಮೆ ನಮ್ಮ ನಿವಾಸಕ್ಕೆ ಬರಬಹುದು. ನಮ್ಮವರು ಅಭಿನಯ ದಲ್ಲಿ ಎತ್ತಿದ ಕೈ. ಒಂದಾನೊಂದು ಕಾಲದಲ್ಲಿ ನಮ್ಮ ಹಿರಿಯೊಬ್ಬರು ಹುಲಿ ಯ ವೇಷವನ್ನು ಹಾಕಿದಾಗ ವಿಪರೀತ ಪ್ರೋತ್ಸಾಹ ದೊರೆತು, ಮೈಯೂ ದಿಸಿಕೊಂಡರು. ಅಂದಿನಿಂದ ನಾವು ಈ ಉಪದ್ವ್ಯಾಪಕ್ಕೆ ತೊಡಗಿಲ್ಲ.

''ಸ್ವತಃ ಹಾಡುವದಕ್ಕಿಂತಲೂ ಸಂಗೀತವನ್ನು ಆಲಿಸುವುದು ನನಗೆ ಬಹು ಇಷ್ಟ. ಹೊಸಬರು, ಅನನುಭವಿಗಳು ಸಂಗೀತವನ್ನು ಅಭ್ಯಾಸಿಸ ತೊಡಗಿದರೆ, ನಾವು ತಪ್ಪದೆ ಅಲ್ಲಿಗೆ ಹೋಗುತ್ತೇವೆ. 'ಲೋ, ಅಗಸರು ಬರ್ತಿದಾರೆ' 'ಉಶ್.... ಉಶ್.... ಆಚೆಸಂತಿದೆ ಓಡಿಸಪ್ಪ' ಇತ್ಯಾದಿ ಉದ್ಗಾ

ರಗಳು ಜಾರಿಯಲ್ಲಿರುವುದು ನಮ್ಮ ಅಪಕ್ವ ಸಂಗೀತ ಪ್ರಿಯತೆಯನ್ನು ತೋರಿಸುವದಿಲ್ಲವೆ?''

ಅಹುದೆಂದು ತಲೆಯಾಡಿಸಿ, ''ನಿಮ್ಮ ಹಾಬಿ ಏನು?'' ಎಂದು ಕೇಳಿದೆ.

''ಸದಾ ಕೆಲಸದಲ್ಲಿ ನಿರತನಾಗಿ ಯೋಗ್ಯತೆ ಮೀರಿ ಕಷ್ಟಪಟ್ಟು ದುಡಿಯುತ್ತೇನೆ. ನಿಮ್ಮಲ್ಲಿ 'ಕತ್ತೆಯಂತೆ ದುಡಿಯುತ್ತಾನೆ' ಎಂಬ ಉಪಮೆಯನ್ನು ಅನೇಕರು ಪಡೆಯುವುದಿಲ್ಲವೆ? ಹೀಗಿರುವಾಗ ನಮಗೆ ಬಿಡುವು ದೊರೆಯುವುದೇ ಅಪರೂಪ. ನನಗೆ ಬಿಡುವುದೊರೆತಾಗ ಹಾಳುಗೋಡೆಯ ಪಡ, ಕಸಗಕುಪ್ಪೆ, ಬೂದಿಯ ಗುಂಡಿಗಳಲ್ಲಿ ವೈತೋಡಿಕೊಂಡು 'ವಾಕ್' ಹೋಗುವುದೆಂದರೆ ನನಗೆ ಬಹು ಪ್ರಿಯ.''

''ನೀವು ಕರ್ನಾಟಕದ ಸರ್ವಾಧಿಕಾರಿಯಾದರೆ, ಯಾವ ಯಾವ ಸುಧಾರಣೆಗಳನ್ನು ಕೈಕೊಳ್ಳುವಿರಿ?'' ಅತಿ ಉತ್ಸುಕತೆಯಿಂದ ಪ್ರಶ್ನಿಸಿದೆ.

''ಎಲ್ಲರೂ ತಮ್ಮ ಮನೆಗಳಲ್ಲಿಯೇ ಬಟ್ಟೆಗಳನ್ನು ಒಗೆದು ಇಸ್ತ್ರಿ ಹಾಕಿಕೊಳ್ಳಬೇಕು; ಇದು ನನ್ನ ಮೊದಲ ಸುಧಾರಣೆ. ಏಕೆಂದರೆ, ಅಗಸರಿಗೆ ಬಟ್ಟೆ ಒಗೆಯಲು ಕೊಡುವುದು, ನಮ್ಮ ಬೆನ್ನಿಗೆ ಮೂಲವಾಗುತ್ತದೆ. ಎರಡನೆಯದಾಗಿ, ದೈನಿಕ ಆಡಳಿತದಲ್ಲಿ ಕುದುರೆಗೂ ನಮಗೂ ಸಮ ಪ್ರಾತಿನಿಧ್ಯವಿರಬೇಕು. ವೈಲಿಗೆಯೆಲ್ಲವನ್ನೂ ನಾವೇ ಹೊರಬೇಕು; ಗಾಡಿ ಎಳೆಯುವುದು ಕುದುರೆಗಳ ಪಾಲಿಗೆ---ಈ ದಬ್ಬಾಳಿಕೆಯನ್ನು ನಾವು ಸಹಿಸೆವು. ಅವರಲ್ಲಿ ಶೇ|| ೫೦ ರಷ್ಟು ಮಂದಿ ವೈಲಿಗೆಯನ್ನು ಹೊರಲಿ, ನಮ್ಮಲ್ಲಿ ಶೇ|| ೫೦ ಮಂದಿ ಗಾಡಿಗೆ ನಿಲ್ಲುತ್ತೇವೆ........''

ಶ್ರೀಯುತರ ರಾಜಕೀಯ ನೀತಿಯನ್ನು ಮನಸ್ಸಿನಲ್ಲಿಯೇ ಅಭಿನಂದಿಸಿದೆ.

''ನೀವು ಕಳೆದ ಚುನಾವಣೆಯನ್ನು ಗೆಲ್ಲಲು ನಿಮ್ಮ ಕೋಮಿನ ಓಟರುಗಳಿಗಿತ್ತ ಭರವಸೆಗಳೇನು ?''

''ಅವುಗಳನ್ನು ನಾನು ಮರೆತಿಲ್ಲ. ಸದಾ ನನ್ನ ಕೋಮಿನವರ ಸೇವೆಯೇ ನನ್ನ ಜೀವನದ ಪರಮೋದ್ದೇಶ. ನಮ್ಮ ಜನರಿಗೆ ನೆಗಡಿ,

ಕೆಮ್ಮು, ಅಜೀರ್ಣಗಳು ಬಾರದಂತೆ ನೋಡಿಕೊಳ್ಳಲು ಹೆಲ್ತ್ ಆಫೀಸ ರನ್ನು ನಿಯಮಿಸಿ, ಔಷಧ ಶಾಲೆಯೊಂದು ಇನ್ನು ಕೆಲವು ದಿನಗಳಲ್ಲಿಯೇ ಆರಂಭವಾಗುವುದು. ಅಲ್ಲಿನ ಹುದ್ದೆಗಳನ್ನು ನಮ್ಮ ಜಾತಿಯವರಿಗೇ ಕೊಡಬೇಕೆಂದು ಕಾನೂನು ಸಹ ಆಗಿದೆ. ನಮ್ಮ ಆಹಾರವಾದ---ಮೋರಿಯ ಪಕ್ಕದಲ್ಲಿ, ಕಲ್ಲುಸಂದುಗಳಲ್ಲಿ ಬೆಳೆಯುವ ಗರಿಕೆ ಹುಲ್ಲನ್ನು ಕೆತ್ತಿ ಅದನ್ನು ತೊಳೆದು ಕುದುರೆಗೆ ಅಣಿ ಮಾಡುತ್ತಾರೆ. ಸದರೀ ಸ್ಥಳಗಳಲ್ಲಿ ಹುಲ್ಲು ಕೀಳಲಾಗದೆಂದು ಮುನಿಸಿಪಾಲಿಟಿ ಮುಖೇನ ಶಾಸನವನ್ನು ಮಾಡಿಸಿದ್ದೇನೆ. ಇಷ್ಟೇ ಅಲ್ಲ, ಸಾಮಾಜಿಕ ಸುಧಾರಣೆಗಳನ್ನು ಸಹ ಕೈಕೊಂಡಿದ್ದೇನೆ. ಕುದುರೆಗೆ ಮೈಕೂದಲು ಕತ್ತರಿಸುವಂತೆ ನಮ್ಮ ಮೈಕೂದಲನ್ನು ಕತ್ತರಿಸುವ ಸಂಪ್ರದಾಯ ಆಚರಣೆಗೆ ಬರುವುದು. ಬಹು ಕಾಲದ ಹಿಂದೆಯೇ 'ಬಾಗದಾದಿನ ನಾಯಿಂದ' ಈ ರೀತಿ ನಡೆಸಲು ಸಿರಾಕರಿಸಿದ್ದಕ್ಕಾಗಿ ದೊಡ್ಡ ಜಗಳವೇ ಆಗಿದೆಯೆಂಬ ವಿಚಾರವನ್ನು ಯಾರೂ ಮರೆಯಬಾರದು. ನಮ್ಮ ಮೈಕೂದಲನ್ನು ಚೌಲಿ, ಕುಚ್ಚು, ಬ್ರಷ್‌ಗಳ ತಯಾರಿಕೆಗೆ ಉಪಯೋಗಿಸಬೇಕೆಂದು 'ಹೇರ್ ಇಂಡಸ್ಟ್ರೀಸ್ ಲಿಮಿಟೆಡ್' ರವರನ್ನು ಪ್ರಾರ್ಥಿಸಲಾಗಿದೆ. ಕುದುರೆಯಂತೆ ನಮಗೂ 'ಮಾಲೀಸಿ'ನ ಸೌಲಭ್ಯವಿರಬೇಕೆಂಬ ಬೇಡಿಕೆಯನ್ನು ಠರಾವಿನ ರೂಪದಲ್ಲಿ ಶಾಸನ ಸಭೆಯಲ್ಲಿ ಇಷ್ಟರಲ್ಲಿಯೇ ಮಂಡಿಸಲಾಗುವುದು. ನಮ್ಮ ಕೋಮಿನವರ ಉದ್ದವಾದ ಕಿವಿ, ತುಂಡು ಬಾಲ, ಕರ್ಕಶಕಂಠಗಳನ್ನು ಸರಿಪಡಿಸಿ ಮನೋಹರವಾಗಿ ಮಾಡಲು, ಪಾಶ್ಚಿಮಾತ್ಯ ವೈದ್ಯರನೇಕರಿಗೆ ಆಹ್ವಾನಗಳು ಹೋಗಿವೆ. ಈ ಹೊಸ ಪ್ರಯೋಗದಲ್ಲಿ ಯಶಸ್ಸು ದೊರೆತಲ್ಲಿ, ಗೃಹಸ್ಥರೆಲ್ಲರ ಮನೆಗಳಲ್ಲಿ ನಮ್ಮನ್ನು ನಾಯಿ, ಬೆಕ್ಕುಗಳಂತೆ, ಮುದ್ದಿನ ಪ್ರಾಣಿಗಳನ್ನಾಗಿ ಸಾಕಿಕೊಳ್ಳಬೇಕೆಂಬ ಪ್ರಗತಿಶೀಲ ಚಳುವಳಿಯನ್ನು ಆರಂಭಿಸಲಾಗುವುದು.''

'ಸಾಹಿತ್ಯದ ಬಗ್ಗೆ ಏನನ್ನಾದರೂ ಕೇಳಬೇಕೆನ್ನಿಸಿತು. ಕೇಳಿಯೇ ಬಿಟ್ಟೆ.'

"ಆಧುನಿಕ ಸಾಹಿತ್ಯವನ್ನು ನೀವು ಗಮನಿಸಿರುವಿರಾ? ಈ ಬಗ್ಗೆ ನಿಮ್ಮ ಅಭಿಪ್ರಾಯವೇನು."

"ಇಂದು, ಅನೇಕ ಲೇಖಕರು ಹಿಂದಿನವರಂತೆ ಆಯಾಸಗೊಳ್ಳದೆ, ಬೇಕಾದಾಗ ಸಾಕಾದಷ್ಟು, ಕವನ, ಕತೆ, ಕಾದಂಬರಿಗಳನ್ನು ನೇಯು ವುದನ್ನು ನೋಡಿ ನಾನು ಮೆಚ್ಚಿರುತ್ತೇನೆ. ಆದರೆ, ಇಂದಿನ ಸಾಹಿತಿಗಳು ನನಗೆ ಅಷ್ಟಾಗಿ ಪ್ರಾಮುಖ್ಯತೆಯನ್ನು ಕೊಡುತ್ತಿಲ್ಲ. ಇದನ್ನು ನಾನು ಅತ್ಯಂತ ವಿಷಾದದಿಂದ ಖಂಡಿಸಬೇಕಾಗಿದೆ. ಷೇಕ್ಸ್‌ಪಿಯರಿನಂಥ ಮಹಾ ಸಾಹಿತಿ ತನ್ನ ಸ್ವಪ್ನ ನಾಟಕದಲ್ಲಿ ನನ್ನನ್ನು ನಾಯಕಿಯ ಪ್ರೇಮ ಪಾತ್ರವಾಗಿ ಚಿತ್ರಿಸಿದ್ದ. ಸಾಹಿತಿಗಳು ನನಗೆ ಪ್ರಚಾರವನ್ನು ಕೊಡಲಿ ಇಲ್ಲವೆ ಬಿಡಲಿ, ಜನ ಸಾಮಾನ್ಯರು ತಮ್ಮ ಕೆಳಮಟ್ಟದವರನ್ನು ಮಾತ ನಾಡಿಸುವಾಗ, ನನ್ನ ಹೆಸರನ್ನುಲ್ಲೇಖಿಸಿದ ನಂತರವೇ ಮಿಕ್ಕ ಮಾತು."

ಕಾಲಿಂಗ್ ಬೆಲ್ ಹೊಡೆದು "ಇನ್ನೆರಡು ಕಪ್ 'ಮುಸುರೇಟಿನ್' ತೆಗೆದುಕೊಂಡು ಬಾ" ಎಂದು ಆಜ್ಞಾಪಿಸಿದರು.

"ಬೇಡ....ಬೇಡ." ಎನ್ನುತ್ತ ಕುರ್ಚಿಯಿಂದ ಮೇಲಕ್ಕೆದ್ದೆ.

* *
*

ಕಣ್ಣುಗಳೆಲ್ಲ ತೇವವಾದವು. ಕಣ್ಣು ಬಿಟ್ಟೆ. ನನ್ನ ಶಾರಿ ನನ್ನ ಕೆನ್ನೆಯ ಮೇಲಿದ್ದ ತನ್ನ ತುಟಿಗಳನ್ನು ಕಿತ್ತುಕೊಂಡಳು.

"ಎಂಟು ಗಂಟೆಯಾಯಿತು. ಏಳೋಲ್ವೆ?"

ಸುತ್ತಲೂ ನೋಡಿದೆ.

ಶಾರಿಯ ಹೊರತಾಗಿ ಮತ್ಯಾರೂ ಅಲ್ಲಿರಲಿಲ್ಲ.

# ಕಿರ್‌ಚೂರ್ ಕಾಲೇಜಿನಲ್ಲಿ ಮುಷ್ಕರ

ಇಂಡಿಯನ್ ಕಾಫಿ ಕೊಡಿಸಿ, ಉಪಕರಿಸಿದ ನನ್ನ ಗೆಳೆಯನನ್ನು ಹುಚ್ಚಾಪಟ್ಟೆ ಹೊಗಳುತ್ತ ನಿಂತೆ. ವಿಪರೀತವಾಗಿ ತಲೆಯಾಡಿಸಿ ದೇಶಾವರಿ ನಗೆಯನ್ನು ಮುಖದ ಮೇಲೆ ಬಲವಂತವಾಗಿ ರೂಪಿಸಿಕೊಂಡು ಅವನಿಗೆ ಖರ್ಚಿನ ನೋವನ್ನು ಇಳಿಸುತ್ತಿದ್ದೆ. ಇಷ್ಟರಲ್ಲಿ ನನ್ನ ಬಲಗಾಲಿನ ಕಿರುಬೆರಳನ್ನು ಯಾವುದೋ ಪೇಟೆಂಟ್ ಲೆದರು ಬೂಟ್ಸಿನ ಕಾಲು ಲಘುವಾಗಿ ನೆಲಕ್ಕೆ ಅದುಮಿತು. ಪಕ್ಕನೆ ಪಕ್ಕಕ್ಕೆ ತಿರುಗಿದೆ.

''ನಮಸ್ಕಾರ'' ಎಂದ ಆತ.

ಮೇಲ್ತುಟಿಯನ್ನು ಮಾತ್ರ ಸ್ವಲ್ಪ ಸರಿಸಿ, ಕೆನ್ನೆಯನ್ನು ಸುಕ್ಕುಗೊಳಿಸಿ ಪ್ರತಿನಮಸ್ಕಾರವನ್ನು ಸೂಚಿಸಿದೆ.

''ಬರೋದಿಲ್ವೇ ಮೀಟಿಂಗಿಗೆ?'' ಎಂದು ಪ್ಯಾರಿಸ್ ಡಿ ಸೆಂಡ್ ಹಾಕಿದ್ದ ಗುಲಾಬಿ ಹೂವಿನಿಂದ ಅಲಂಕರಿಸಿದ ಕರವಸ್ತ್ರದಿಂದ ಮೂಗಿನ ಬುಡ, ಮೀಸೆಯ ಪಾತಿ, ಕೆನ್ನೆಯಗುಳಿಗಳನ್ನು ಗುಡಿಸುತ್ತ ಹೇಳಿದ.

''ಯಾವ ಮೀಟಿಂಗ್?'' ಎಂದೆ ಆಶ್ಚರ್ಯದಿಂದ.

''ಸ್ಟ್ರೈಕ್ ಬಗ್ಗೆ 'ಡಿಸ್ಕಸ್' ಮಾಡಲು ಜನರಲ್ ಬಾಡಿ ಮೀಟಿಂಗ್ ಕರೆದಿದ್ದಾರೆ.'' ಎಂದು ಹೇಳಿ ಲೋಟಕ್ಕೆ ತುಟಿಹಚ್ಚಿ ಮೌನವಾದ. ಇನ್ನು ಮಾತನಾಡಿ ಫಲವಿಲ್ಲವೆಂದು ಕಾಲೇಜಿಗೇ ಹೊರಟೆ.

ಕಿರ್‌ಚೂರ್ ಕಾಲೇಜಿನ ಆವರಣದಲ್ಲಿ—ಪ್ರಿನ್ಸಿಪಾಲ್ ಪ್ರೊಫೆಸರುಗಳ 'ಕಾಟಾಕ್ಷ' ಅಲ್ಲಿ ನಡೆಯುವುದಿಲ್ಲ—ಐವತ್ತೇ ಮಂದಿಯ ಮಹಾಸಭೆಯನ್ನು ಆ ಜಡೀಮಳೆಯಲ್ಲಿ ಮಹಾ ಪ್ರಯಾಸದಿಂದ ನೆರೆಸಲಾಗಿತ್ತು. ಟೀ, ಉಪಾಹಾರಗಳ ಏರ್ಪಾಟಿಲ್ಲದಿದ್ದರೆ ಕಿರ್‌ಚೂರ್ ಕಾಲೇಜಿನವರು ಸಭೆಗೆ ಬರುವ 'ಇಸಮು'ಗಳೇ ಅಲ್ಲ. ಆ ಸಭೆಯಲ್ಲಿ ಮಾತನಾಡಿದವರೆಲ್ಲರೂ, ಅದನ್ನು ಸರ್ವಸದಸ್ಯರ ಸಭೆಯೆಂದು ಕರೆದು ಮಹದುಪಕಾರ ಮಾಡಿದರು. ಕಿರ್‌ಚೂರಿಗೆ ಹೊಸಬರು ಯಾರಾದರೂ ಬಂದು, ಈ ಸಭೆಯನ್ನು ನೋಡಿದ್ದಲ್ಲಿ 'ಈ ಕಾಲೇಜಿನ ಯೂನಿಯನ್‌ನಲ್ಲಿ ಐವತ್ತೇ ಮಂದಿ ಇರುವರೆ' ಎಂದು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಿದ್ದರು.

ಸಭೆಯ ಸದಸ್ಯರೆಲ್ಲರು, ಅಗಸನ ಭಯಂಕರ 'ರೇಟ'ನ್ನು ತಿಳಿದು ಅನುಭವಿಸಿದವರಾದ್ದರಿಂದ ಪಂಚೆ ಪಾಯಿಜಾಮೆಗಳನ್ನು ಎತ್ತಿ ಹಿಡಿದು ಕೆಸರಿನಿಂದ ಅವುಗಳನ್ನು ಪಾರುಮಾಡಿದರು. ಶ್ರೀ....ಅವರನ್ನು ಅಂದಿನ ಸಭೆಗೆ ಅಧ್ಯಕ್ಷರು ಎಂದು ಒಪ್ಪಿಕೊಂಡಂತೆ ವಿದ್ಯಾರ್ಥಿಗಳು ನಟಿಸಿದ ಮೇಲೆ, ಶ್ರೀಯುತರು ಅಧ್ಯಕ್ಷ ಪೀಠವಾದ ಕಲ್ಲು ಬೆಂಚೊಂದನ್ನು ಆಕ್ರಮಿಸಿದರು. ಅಧ್ಯಕ್ಷರು ತಮ್ಮ ಪೀಠದ ಮೇಲೆ ನಿಂತು ಗುಡುಗಲು ತೊಡಗಿದಂತೆ, ಮಳೆಯು ಜೋರಾದ್ದರಿಂದ ಮತ್ತು ಮರದ ಹನಿಗಳೂ ಷರೀಕಾದ್ದರಿಂದ ಈ ಸರ್ವ ಸದಸ್ಯರ ಸಭೆ ಹಿಂದುವರೆದು ಮೂವತ್ತಕ್ಕೇರಿತು.

ಅಧ್ಯಕ್ಷ ಭಾಷಣ ಮುಂದುವರೆಯಿತು. ಐದಾರು ಮಂದಿ ಭಾಷಣದ ಮಧ್ಯದಲ್ಲಿಯೇ ಇಂಗ್ಲೀಷ್ ಕಲಿತ ಕನ್ನಡದಲ್ಲಿ 'ಪಾಯಿಂಟ್ ಆಫ್ ಆರ್ಡರ್', 'ಅಮೆಂಡೆಡ್ ರೆಸಲೂಷನ್', ಇತ್ಯಾದಿ ಅಸೆಂಬ್ಲಿ ಪಟಾಕಿಗಳನ್ನು ಹಾರಿಸತೊಡಗಿದರು. ಈ ಮಧ್ಯೆ ಜನಾಬ್ದಾರಿಯನ್ನು ನೀಗಿಕೊಂಡಿದ್ದ ವಿದ್ಯಾರ್ಥಿಗಳು ಅನಿರೀಕ್ಷಿತವಾಗಿ, ಅನವಶ್ಯಕವಾಗಿ ತಮ್ಮ ಸೈಕಲ್‌ಗಳ ಗಂಟೆಗಳನ್ನು ಬಾರಿಸಿ "ಬ್ಯೂಟಿ....ಮಜಾಮಾಡೋ" ಮೊದಲಾದ

ಶಿಶುಮಾತುಗಳಿಂದ ವಾತಾವರಣವನ್ನು ಮುಕ್ಕರಿಸಿ ರಸ್ತೆಗಾಮಿಗಳಿಗೆ 'ನರಿಯ ಕಾಳಗ'ವನ್ನು ಪ್ರದರ್ಶಿಸಿದರು.

ಈ ಜನರಲ್ ಬ್ಯಾಡ್ಜಿ ಮೀಟಿಂಗಿನಲ್ಲಿ ಕಿರ್‌ಚೂರ್ ವಿಶ್ವವಿದ್ಯಾಲಯದ ಉಪಸ್ಥಾನಪತಿಗಳು, ಸಂಘದ ಪತಿಯಿಂದ ನುಗ್ಗೋಡಿದ ಚುನಾಯಿತ ಅನಧಿಕಾರಿಗಳಿಗೆ (ಆಗ ಚುನಾಯಿತರಾಗಿದ್ದರೂ, ಅಧಿಕಾರವನ್ನು ಸ್ವೀಕರಿಸಿರಲಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ) ತೋರಿಸಲಾದ ವಿಶ್ವಾಸವನ್ನು ಸಾಂಗೋಪಾಂಗವಾಗಿ ಬೇಜಾರೋತ್ಪವವಾಗುವವರೆಗೂ ವಿವರಿಸಲಾಯಿತು ಖಾರಾಂಶವೇನೆಂದರೆ:

'ಸವರಿ ಸನ್ ಸಾವಿರದ ಒಂಭೈನೂರ ನಲವತ್ತಾರರಲ್ಲೂ ಕಿರ್‌ಚೂರ್ ಸಿಟಿ ಕೊಂಪೆಗೌಡಾ ರೋಡಿಸಿಂದಾಚೆ ಪೂರ್ವಕ್ಕೆ ಟಾರ್‌ರಸ್ತೆ, ಪಶ್ಚಿಮಕ್ಕೆ ಕಾಫಿಕ್ಲಬ್, ಉತ್ತರಕ್ಕೆ ಅರಳಿಕಟ್ಟೆ, ದಕ್ಷಿಣಕ್ಕೆ ಗಡಿಯಾರದ ಗೋಪುರ – ಈ ಚಕ್‌ಬಂದಿನಲ್ಲಿರುವ ಕಿರ್‌ಚೂರ್ ಕಾಲೇಜಿನಲ್ಲಿ ಜರುಗಾಡುತ್ತಿರುವ ಅನ್ಯಾಯ ವೈವಿಧ್ಯಗಳ ರಿಪೇರಿ ಸಪೇರಿಗಾಗಿ ಮೇಲ್ಮಂಡಪರನ್ನು ಕಾಣಲು ಹೋದೆವು. ಭೆಟ್ಟಿಚೀಟಿಯಲ್ಲಿ ಪ್ರವರಾದಿಗಳನ್ನು ಲಿಖಿಸಿ ಪ್ಯೂನ್‌ದ್ವಾರಾ ಕಳುಹಿಸಲಾಯಿತು. ಕುರ್ಚಿಗಳಿಲ್ಲವೆಂದು ನಮ್ಮನ್ನು ಬಹಳ ಹೊತ್ತು ಹೊರಗೆ ನಿಲ್ಲಿಸಿದರು. ಕೊನೆಗೆ ನೋಡಿಯೂ ನೋಡದಂತೆ ಹೊರಕ್ಕೆ ಹೊರಡುವ ಕಣ್ಣುಮುಚ್ಚಾಲೆಯಾಟವಾಡಿದರು. ಆದರೆ ನಾವು ಜಗ್ಗಲಿಲ್ಲ, ಬಗ್ಗಲಿಲ್ಲ, ನಮ್ಮ 'ಮೆಮೊರ್ಯಾಂಡಾ'ವನ್ನು ಅವರ ಕರಗತ ಮಾಡಿದೆವು. ಅವನ್ನು ಇನ್ನು ಕೆಲವು ಕಾಗದಗಳೊಂದಿಗೆ ಜೇಬು ಹರಿಯುವಂತೆ ತುರುಕಿಕೊಂಡರು. ಜೇಬಿನ ಮುಚ್ಚಳವನ್ನು ಮುಚ್ಚಿ ಅದಕ್ಕೆ ಮೂರು ಏಟುಗಳನ್ನು ಲಘುವಾಗಿ ಕೊಟ್ಟು ಅವರ ಹಾರಾಟವನ್ನು ನಿಲ್ಲಿಸಿದರು. ಇದಕ್ಕಿಂತಲೂ ಉತ್ತಮ ಕೆಲಸ ತಮಗಿರುವುದಾಗಿ ಅಪ್ಪಣೆಕೊಡಿಸಿ ಕಾರಿನಲ್ಲಿ ಸೋಫಾಸೀನರಾದರು. 'ಕಾಲೇಜಿನ ಶ್ರೇಯೋಭಿವೃದ್ಧಿಗಾಗಿ ನೀವು ಮೀಸಲು.' ಎಂದು ಗೊಣಗಿದ ವಿದ್ಯಾರ್ಥಿಯೊಬ್ಬನಿಗೆ ಚಂಡಿ ಹಿಡಿದ ಮಗುವಿನಂತೆ ಉತ್ತರಿಸಿದರು. ಕಾರು ಹೊರಟಿತು..........

ನಮ್ಮ ಪ್ರತಿನಿಧಿತಂಡವು ಕೆಳಪಟ್ಟವರ ಈ ಅನ್ಯಾಯುವನ್ನೂ ಸಹ ಲಗತ್ತಿಸಿಕೊಂಡು ವಿಳಂಬಿಸದೆ ಮೇಲ್ಪಟ್ಟವರಲ್ಲಿ ಮೊರೆಯಿಟ್ಟರು. ಅವರು ಈ ಬೀಳ್ಪಟ್ಟವರನ್ನು ಸಂತೈಸಿ ಒಂದು ವಾರ ಕಾಲ ವಾಯಿದೆ ಕೊಟ್ಟು ಜಾಮೀನಿನ ಮೇಲೆ ಬಿಡುಗಡೆಯಾದರು. ಈಗ ಈ ಅವಧಿ ಮುಗಿಯಿತು. ಈಸಂಘದ ಆನಾಫೀಸನ್ನು (ಅದನ್ನು ಆಫೀಸೆನ್ನಲು ಅನರ್ಹ-ಲೇ.) ಪ್ರವೇಶಿಸಿ ಅಧಿಕಾರ ಸೂತ್ರಗಳನ್ನು ಹಿಡಿದು (ಸ್ವ ಮತ್ತು ಪರ) ಕಾರ್ಯಗಳನ್ನು ಸಾಧಿಸುತ್ತಿರಿ. ಹಿಂದಿನಿಂದ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆಯುನ್ನಿತ್ತಿದ್ದಾರೆ.

ಈ ಸಂದರ್ಭದಲ್ಲಿ ಸರ್ವ ಸದಸ್ಯರ ಸಭೆಯುನ್ನು ಕರೆಯುವಂತೆ ಸಂಘದ ಅಧ್ಯಕ್ಷರನ್ನು ಪ್ರಾರ್ಥಿಸಲಾಯಿತು. ಆದರೆ ಈ ನಾಮಿಕ ಅಧ್ಯಕ್ಷರು 'ವಂದೇ ಮಾತರಂ ಹಾಡಲಾಗದು....ಇತ್ಯಾದಿ ಅನುಪಯುಕ್ತ ಕಟ್ಟಳೆಗಳನ್ನು ಒಡ್ಡಿದ್ದಾರೆ. ಆದ್ದರಿಂದ ಸರ್ವಸದಸ್ಯರೇ 'ಈಗ ನಾವು ತರಗತಿಯ ಗ್ಯಾಲರಿಯುನ್ನು ಹತ್ತಿ ಉಪನ್ಯಾಸಕರಿಗೆ ಮುಖ ತೋರಿಸೋಣವೇ?—ಇಲ್ಲ, ಮೂರು ಗಂಟೆಯುವರೆಗೂ ಈ ಆವರಣದಲ್ಲಿಯೇ ಠಳಾಯಿಸುತ್ತಿದ್ದು ಅನಂತರ ಸಿನಿಮಾ ಸೀಟುಗಳನ್ನು ಹಿಡಿಯೋಣವೇ? ಎಂಬುವನ್ನು ತೀರ್ಮಾನಿಸಬೇಕಾಗಿದೆ....'

ಅಧ್ಯಕ್ಷರು ಭಾಷಣವನ್ನು ನಿಲ್ಲಿಸುತ್ತಾರೆಂದು ಅರಿವಾದ ಕೂಡಲೆ, ಮ್ಯಾಟಿನಿ ಆಟವಿರತಕ್ಕ ಚಿತ್ರಗಳ ಹೆಸರುಗಳೆಲ್ಲ ಬಯಲಿಗೆ ಬಂದುವು. ನಟ ನಟಿಯುರ ಕ್ಯಾಟಲಾಗ್, ಚಿತ್ರಗಳ ವಿವಿಧ ವಿಮರ್ಶೆ....ಸಂವಾದಗಳ ಸ್ಯಾಂಪಲ್...ಗೀತೆಗಳ ಪಲ್ಲವಿ....ಇತ್ಯಾದಿಗಳು ಕೇಳಬಂದುವು. ಕಳೆದ ಒಂದು ವರ್ಷದಿಂದ ಕಿರ್‌ಚೂರಿನಲ್ಲಿ ಪ್ರದರ್ಶಿತವಾದ ಚಿತ್ರಗಳ ಬಗ್ಗೆ ಆಶು ಭಾಷಣಗಳು ಸರ್ವಸದಸ್ಯರ ಸಭೆಯ ನಾನಾ ಕೋನಗಳಲ್ಲಿ ಪ್ರಾರಂಭವಾದುವು.

ಕೂಡಲೆ 'ಕೂಲಿಂಗ್ ಗ್ಲಾಸ್ ಕಾರ್ಯದರ್ಶಿ'ಯು ಸಭಾವೇದಿಕೆಯಾದ ಕಲ್ಲುಬೆಂಚನ್ನು ಹತ್ತಿ ಹಸೀಮಸೂದೆಯೊಂದನ್ನು ಯಾರಿಗೂ ಕೇಳಿಸದಂತೆ ಎಚ್ಚರಿಕೆಯುನ್ನು ವಹಿಸಿ ಎರಡು ಮೂರು ಸಾರಿ ಕೂಗಿ ಹೇಳಿ

ದರು. ಮತ್ತಿಬ್ಬರು ಅವರ ಪಕ್ಕಕ್ಕೆ ನೆಗೆದು ಅವರಷ್ಟೆ ಕಿರುಚುತ್ತ 'ಡ್ರಿಲ್' ಮಾಡಿದರು. ಅಧ್ಯಕ್ಷರು 'ನೋ....ನೋ....' ಎಂದು ಇಬ್ಬರನ್ನೂ ಹಿಂದೋಡಿಸಿದರೂ ಅವರು ಮುನ್ನುಗ್ಗುವ ಸೂಚನೆಯೇ ಕಂಡುಬಂದಿತು. ಕೊನೆಗೆ ಅಧ್ಯಕ್ಷರು ತಿದ್ದಿ ಪುಡಿಯಾದ ಮಸೂದೆಯೊಂದನ್ನು ಕಿರಿಚಿದರು. ಅದೇನೆಂದರೆ, "ಇಷ್ಟಪಡುವ ನೀವುಗಳು, ಕಷ್ಟಪಡುವ ಇತರರು ಕೂಡಿ ಬೇಕಾದರೆ ವಿದ್ಯಾಸಚಿವರ ಮನೆಯ ಮುಂದಿನ ಗುಲಾಬಿ ಗಿಡದಡಿಯ ಲ್ಲಾಗಲೀ, ಕಾಲೇಜಿನ ಆವರಣದಲ್ಲಿನ ಕತ್ತೀಕಾಯಿ ಗಿಡದಡಿಯಲ್ಲಾ ಗಲೀ, 'ಉಪವೇಷ' (ವಿದ್ಯಾರ್ಥಿಗಳ ಉಪವಾಸ ವ್ರತ) ಮುಷ್ಕರವನ್ನಾ ರಂಭಿಸಬೇಕು. ಈಗಿರುವ ಸಂಘದ ನಾಮಿತಿ (ನಾಮಕರಣದಿಂದ ಬಂದ) ಅಧ್ಯಕ್ಷರನ್ನು ರದ್ದುಗೊಳಿಸಿ ಅನಾಮಿಕ ಅಧ್ಯಕ್ಷರನ್ನು ತಂದುಕೊಳ್ಳ ಬೇಕು. ಅದುವರೆಗೂ ಮುಷ್ಕರವನ್ನು "ಕಂಟಿನ್ಯೂ" ಮಾಡಬೇಕು. ಅನೇಕರು ಖಂಡಿಸಿ, ತುಂಡಿಸಿ ಮಾತನಾಡಿದ ಬಳಿಕ ಮಸೂದೆ ಎದ್ದು ಕೊಂಡಿತು. 'ಉಪಸ್ಥಾನಪತಿಗಳ ವರ್ತನೆಯನ್ನು ಸಭೆಯು ತೀವ್ರ ವಾಗಿ ಖಂಡಿಸುತ್ತದೆ' ಎಂಬ ಮಸೂದೆಗೂ ಸದಸ್ಯಸ್ತೋಮವು ಅನಾಯಾ ಸವಾಗಿ ತಲೆಯಾಡಿಸಿತು.

* *

ಮೊದಲನೆಯ ದಿನದ ಮುಷ್ಕರದ ಆಟವನ್ನು—ಚಂಡಾಟದಂತೆ— ಯಶಸ್ವಿಯಾಗಿ ಆಡಿದರು. ಉಪನ್ಯಾಸಕರ 'ಕಾಕಾ' ಹಿಡಿಯುವ 'ಕರಿಯ' ಕುರಿಗಳು ಮಾತ್ರ 'ಗೋಲಿ'ನೊಳಗೆ ತೂರಿ ಪಾಠಗಳನ್ನು ಶ್ರಮಿಸುತ್ತಿ ದ್ದರು. ಅಂಥವರಲ್ಲಿಯೂ ಸಹ ಕೆಲವರನ್ನು ಹೊರಗಿನವರು ಬೆದರಿಸಿ, ಹೆದರಿಸಿ ಈಚೆಗೆ "ಥ್ರೋ" ಮಾಡಿಸಿದರು. ಆಗ ಉಪನ್ಯಾಸಕರಿಗೂ, ತನ್ಮೂಲಕ ಕಿರ್‌ಚೂರ್ ಸರ್ಕಾರಕ್ಕೂ ಏನಕೇನ ಮುಷ್ಕರವನ್ನು ತಗ್ಗಿಸಿ ಕುಗ್ಗಿಸಬೇಕಾದ ಆತುರವು ಹೆಗಲೇರಿತು. ತಲೆ ಕೆರೆದು ಕುಟ್ಟಿದಾಗ ಅವರಿಗೆಲ್ಲ ಒಂದು ಯೋಜನೆ ಮರಳಿತು—ಆಗಸ್ಟ್' ೪೨ ರಲ್ಲಿ ಕಾರ್ಯ ರಂಗಕ್ಕಿಳಿಸಿದ್ದ ನಿಯಮಾವಳಿಗಳು.

ಕಿರ್‌ಚೂರ್....

ಪ್ರತಿ ಕೋಮಿನಲ್ಲಿಯೂ 'ದುಡ್ಡಿನ ಡಬ್ಬಿ'ಗಳು ಹಬ್ಬಿ, ಹರಡಿರುತ್ತಾರೆ. ಇವರು ಸ್ಥಳೀಯ ಸಂಘ, ಸಂಸ್ಥೆ, ಹಾಸ್ಟೆಲುಗಳ ಅಧ್ಯಕ್ಷರು-ಉಪಾಧ್ಯಕ್ಷರು, ಇಲ್ಲವೆ ಕಾರ್ಯದರ್ಶಿಗಳು; ಊರಿನಲ್ಲಿ ಯಾವ ಸಭೆಯು ನಡೆದರೂ ಅಧ್ಯಕ್ಷಸ್ಥಾನವು ಇವರಿಗೇ ಗುತ್ತಿಗೆ, ತಮ್ಮ ನೆಂಟರಿಷ್ಟರಿಗೆ ಸರ್ಕಾರಿ ಕೆಲಸಗಳ ಬಳುವಳಿಗಳನ್ನು ಕೊಡಿಸುವುದಕ್ಕಾಗಿ ಸರ್ಕಾರದಲ್ಲಿ ಇವರು 'ಪಾರಾ' ತಿರುಗುತ್ತಿರುತ್ತಾರೆ.

ಈ 'ದುಡ್ಡಿನ ಡಬ್ಬಿ'ಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಆಮದು ಮಾಡಿಕೊಂಡು "ನೋಡಿ, ನಿಮ್ಮ ಕೋಮಿಗೆ 'ಮಾಕ್ಸಿಮಮ್ ಬೆನಿಫಿಟ್' ಕೊಟ್ಟಿದೆ. ೯೬ ಫ್ರೀಷಿಪ್, ೧೪೨ ಹಾಫ್ ಫ್ರೀಷಿಪ್" ಇತ್ಯಾದಿ ವಿವರಗಳನ್ನೆಲ್ಲಾ ಅವರ ಡೈರಿಗಳಲ್ಲಿ ಹೇಳಿ ಬರೆಯಿಸಿ, ಈ ಕೂಡಲೆ ತಮ್ಮ ಪ್ರಭಾವಕ್ಕೆ ಸಿಕ್ಕಿ ಬಿದ್ದಿರುವ ವಿದ್ಯಾರ್ಥಿಗಳಿಗೆ ಬುದ್ಧಿ ಹೇಳುವಂತೆ ರೇಗಿದರು. 'ಇದೆಲ್ಲ ಹಿಂದು ಮುಂದುಳಿದವರ ತಂತ್ರ. ಅನ್ಯಾಯವಾಗಿ ಕೆಡಬೇಡಿ' ಎಂದು ಎಚ್ಚರಿಸುವಂತೆ ಹೇಳಿ ಬೆನ್ನು ತಟ್ಟಿ ರಫ್ತು ಮಾಡಿದರು.

ಮೇಲ್ಕಾಣಿಸಿದ ಈ 'ದುಡ್ಡಿನಡಬ್ಬಿ'ಗಳು ಆ ಕೂಡಲೆ ತಮ್ಮ ತಮ್ಮ ಪ್ರತಿಷ್ಠೆಯು ನಡೆಯುವ ಜಾಗಗಳು—ಎಂದರೆ ಹಾಸ್ಟೆಲು, ಸಂಘ, ಸಂಸ್ಥೆಗಳಿಗೆ ಭೆಟ್ಟಿ ಕೊಟ್ಟು ನೋಟೀಸು ಹಾಕಿದರು.

'ಇದೇ ಮಾಹೆ....ಹಾಸ್ಟಲು ವಿದ್ಯಾರ್ಥಿಗಳು ಕಾಲೇಜಿನ ಮುಷ್ಕರದಲ್ಲಿ ಭಾಗವಹಿಸಿ, ಠರಾವುಗಳ ಮೂಲಕ ಅಧಿಕಾರಿಗಳನ್ನು ಖಂಡಿಸಿದ ಬಗ್ಗೆ ನಾವು ವಿಷಾದಿಸುತ್ತೇವೆ. ಇದೇ ರೀತಿ ವಿದ್ಯಾರ್ಥಿಗಳು ಮುಷ್ಕರವನ್ನು ಮುಂದುವರಿಸಿದಲ್ಲಿ ಊಟೋಪಚಾರಗಳನ್ನು ನಿಲ್ಲಿಸಿ, ಹಾಸ್ಟಲಿನಿಂದ ಹೊರಹಾಕಲಾಗುತ್ತದೆ. ಆದ್ದರಿಂದ ಈ ನೋಟೀಸು ಕಂಡ ಕೂಡಲೆ ಈ ಹಾಸ್ಟಲಿನ ವಿದ್ಯಾರ್ಥಿಗಳೆಲ್ಲರೂ ಕಾಲೇಜಿಗೆ ಹೋಗಿ, ಯಾವುದಕ್ಕೂ ಜವಾಬು ಬರೆಯಬೇಕು.

—ಇತಿ

...........................

ಗೌರವ ಕಾರ್ಯದರ್ಶಿ,

ಇದಲ್ಲದೆ ರಸ್ತೆ, ಕ್ಲಬ್ಬು, ಸಿನಿಮಾ....ಇತ್ಯಾದಿ ಸಾರ್ವಜನಿಕ ರಂಗಗಳಲ್ಲಿ ಸಿಕ್ಕಿ ಬಿದ್ದ ವಿದ್ಯಾರ್ಥಿಗಳು, ಅವರ ಸಂಬಂಧಿಕರು, ಅವರಿಗೆ ಹಣಸಹಾಯಕರು ಇತ್ಯಾದಿಯವರಿಗೆಲ್ಲ ಪಿಸುಮಾತಿನಲ್ಲಿ ಕಿರ್‌ಚೂರಿನ ಗುಟ್ಟನ್ನು ಟೀಕಾ ಸಹಿತ ಹೇಳಿದರು. ಇದೇ ಪಾಡು 'ಕೂಲಿಂಗ್‌ಗ್ಲಾಸು ಕಾರ್ಯದರ್ಶಿ'ಗೂ, 'ಉಲನ್ ಸೂಟು ಉಪಾಧ್ಯಕ್ಷರಿಗೂ ಒದಗಿತೆಂದು ಬೇರೆ ಹೇಳಬೇಕಾಗಿಲ್ಲ. ಅದೂ ಅಲ್ಲದೆ, ಈ ಕಾರ್ಯದರ್ಶಿಗೆ ಅದೇ ದಿನವೇ ವಿದ್ಯಾರ್ಥಿ ವೇತನವೂ ದೊರೆಯಿತು.

ಶ್ರೀ....ಯವರು ಇವರೀರ್ವರಿಗೂ ಬುದ್ಧಿವಾದವನ್ನು ಬುರುಡೆಗೆ ಹಿಡಿಸಿ, ದಾರಿಗೆ ತಂದರು ಇವರಿಗಾಗಿ ತಾವು ಬರೆದು ತಂದಿದ್ದ 'ಹೇಳಿಕೆ'ಗಳನ್ನು 'ಉಜ್ವಲ ರಾಷ್ಟ್ರೀಯ ದೈನಂದಿನ ಪತ್ರಿಕೆ'ಗಳಿಗೆ ಅವರಿಂದಲೇ ಹಂಚಿಸಿದರು.

ಮುಷ್ಕರವು ತಣ್ಣಗಾಯಿತು.

* *

ಮುಷ್ಕರವು ಮುಂದುವರೆಯುವುದೆಂದು 'ನಾಲ್ಕು ದಿನದವುಟ್ಟಿಗೆ' ಊರಿಗೆ ಹೋಗಿದ್ದವರು, ಪತ್ರಿಕಾ ಸನ್ಯಾಸವನ್ನು ಅಭ್ಯಾಸಿಸಿದ್ದವರೂ, ಮನೆಗಳಲ್ಲಿಯೇ ನಿಂತರು. ಕಾಲೇಜಿಗೆ ಬಂದವರು ಕೆಲವರು, ಮುಷ್ಕರವನ್ನು ಕೊನೆಗೊಳಿಸಿದ್ದಕ್ಕೆ ಕಾರಣವನ್ನು ತಿಳಿಯಲು ಮುಂದಾಳುಗಳನ್ನೂ ಅವರ ಹಿಂನಾಳುಗಳನ್ನು ಹುಡುಕಿ ಸೋತರು. 'ಕೂಲಿಂಗ್‌ಗ್ಲಾಸ್ ಕಾರ್ಯದರ್ಶಿ'ಗಳು ಮಾತ್ರ ಕಣ್ಣಿಗೆ ಬಿದ್ದರು.

ಇದ್ದು ಬಿದ್ದವರೆಲ್ಲ ಸಭೆ ಸೇರಿ ಅಂದಿನ ಸರ್ವಸದಸ್ಯರ ಸಭೆಯ ಅಧ್ಯಕ್ಷರಿಗೆ 'ಷೇಮ್'-ಇತ್ಯಾದಿ ಪ್ರಶಸ್ತಿಗಳನ್ನು ಕೊಟ್ಟು, ಕಿರಿಚಿ ಸಮಾಧಾನ ಹೊಂದಲೇಬೇಕಾಯಿತು. ಕಾರ್ಯದರ್ಶಿಗಳು ಮಾತ್ರ ಮುಷ್ಕರಾಂತ್ಯಕ್ಕೆ ಅಲ್ಪವಾದ ಕಾರಣಗಳ ಮೂಲಕ ವಿವರಿಸಹೋಗಿ ಖಂಡಿಸಿ ತುಂಡಿಸಲ್ಪಟ್ಟು ಹಿಂತಿರುಗಿದರು.

ಇದೇ ರೀತಿ ಸಭೆಯು ಜಡಿಮಳೆಯಲ್ಲಿ ಬಹಳ ಕಾಲ ನಡೆಯಲಾರದೆ ಬರಖಾಸ್ತಾಯಿತು.

# ನಮ್ಮ 'ಪಟಾಲಂ'

ನಮ್ಮ ಮನೆಯ 'ಪಟಾಲಂ'ಗಳ ಕವಾಯತಿನ ಎಲ್ಲೆ ಅಷ್ಟಿಷ್ಟಲ್ಲ. ನನ್ನ ಶಾರಿಯ 'ಷರೀಕು' ಅದಕ್ಕೆ ಸಹಾಯವೆ!

'ಹೋಗಲಿ ಬಿಡಿ, ನೀವೇಕೆ ಹೀಗಾಡ್ತೀರಿ—ಹುಡುಗರ ಸ್ವಭಾವವೇ ತುಂಟತನ, ನೀವು ಚಿಕ್ಕಂದಿನಲ್ಲಿ ಹೀಗೆಯೇ ಇರಲಿಲ್ಲವೆ...' ಎಂದು ನಿಂತ ಕ್ಷೇತ್ರದಲ್ಲಿಯೆ ತನ್ನ ಗೃಹದ್ಗೀತೆಯನ್ನು ಹೇಳತೊಡಗುತ್ತಾಳೆ. ನಾನೇನಾದರೂ ಅಂದುಬಿಟ್ಟೆನೋ, ತೀರಿತು. ಅಳು, ಮುನಿಸು, ತೌರುಮನೆಗೆ ಹೊರಡುವ ಬೆದರಿಕೆಗಳನ್ನು ಒಂದಾದ ಮೇಲೊಂದು ಪ್ರಯೋಗಿಸುತ್ತಾಳೆ.

ಬೆಳಿಗ್ಗೆ ಹನ್ನೊಂದರಿಂದ ಸಂಜೆಆರುಗಂಟೆಯವರೆಗೆ ಅವ್ಯಾಹತವಾಗಿ '**ಇ'ದಾ-ಗೆ**' ಗುಮಾಸ್ತಗಿರಿ ನಡೆಸಿ ಬಂದ ನನಗೆ ಶಾರಿಯ ನಗುಮುಖವೇ 'ಸಾರಿಡಾನ್'. ಆದ್ದರಿಂದ ಈಚೆಗಂತೂ ಅವಳು ಹೇಳಿದ್ದಕ್ಕೆಲ್ಲ ಹೂಗುಟ್ಟಿ ನಾನೇ ಸೋಲುತ್ತೇನೆ. ಇದನ್ನು ಅರಿತುಕೊಂಡೋ ಏನೋ ನಮ್ಮ 'ಪಟಾಲಂ'ಗಳು ಬಹಳ ಹೆಚ್ಚಿ ಹೋಗಿವೆ. ಇದರ ಜೊತೆಗೆ 'ಪಟಾಲಂ'ಗಳ ಸಂಖ್ಯೆ ಪ್ರತಿ ವರ್ಷವೂ ಬೆಳೆಯುತ್ತಲೇ ಇದೆ.

ಮೊದಲಿನಿಂದಲೂ ವರ್ಷಕ್ಕೊಂದರಂತೆ ಉದ್ಭವಿಸುವ ಎಳೆಯ ಮಕ್ಕಳನ್ನು ನಾನು ಎತ್ತಿಕೊಳ್ಳಬೇಕು. ಅವಳು ಅಡಿಗೆ ಮಾಡಬೇಕು. ಇಲ್ಲ.

ಅವಳು ಎತ್ತಿಕೊಳ್ಳಬೇಕು, ನಾನು 'ನಳ'ನಾಗಬೇಕು ಆದರೆ ನಾನು ಮಕ್ಕಳನ್ನು ಎತ್ತಿಕೊಳ್ಳುವ ಜವಾಬ್ದಾರಿಯನ್ನೇ ವಹಿಸಿಕೊಂಡೆ— ಇದು ನನ್ನ ಪಾಲಿಗೆ ಬಿದ್ದ ಅನಿವಾರ್ಯ ಕರ್ತವ್ಯವಾಗಿ ಹೋಯಿತು. ಇದರಿಂದಾಗಿ ನನ್ನ ಗಿರಿಜಾಮೀಸೆಯನ್ನು ಹಜಾಮನ ಕತ್ತಿಗೆ ಆಹುತಿ ಕೊಡಬೇಕಾಯಿತು. ಏಕೆಂದರೆ ಎತ್ತಿಕೊಂಡ ಮಕ್ಕಳೆಲ್ಲರಿಗೂ ನನ್ನ ಮೀಸೆಯ ಮೇಲೆಯೇ ಕಣ್ಣು. ಅದನ್ನು ಸುರುಳಿ ಸುತ್ತುವುದೊ, ಇಲ್ಲವೆ, ಅದನ್ನು ಹಿಡಿದು ಜೋಗಾಲಿಯಾಡಲು ಯತ್ನಿಸುವುದೊ, ಆರಂಭವಾಗುತ್ತಿದ್ದುವು. ನಾನು ಎಷ್ಟೊಂತ ಕಣ್ಣೀರಿಡಲಿ? ಯೋಚಿಸಿ ಯೋಚಿಸಿ ಕೊನೆಗೆ ಈ ಪಜೀತಿಯಿಂದ ಪಾರಾಗಲಿಕ್ಕಾಗಿ ಪ್ರೀತಿಯಿಂದ ಬೆಳಸಿದ್ದ ಮೀಸೆಯನ್ನೆ ತೆಗೆಸಿ ಹಾಕಿಬಿಟ್ಟೆ. ಅದುವರೆಗೂ ಕೈ—ಗ್ರಿ ಒರೆಸುವುದಕ್ಕೆ ಬರುತ್ತಿತ್ತು. ನನ್ನ ಮೀಸೆ ಅಲ್ಲಿಂದೀಚೆಗೆ ಕರವಸ್ತ್ರವನ್ನು ಇಟ್ಟುಕೊಳ್ಳಬೇಕಾಯಿತು.

ನಾನು ಅರಿತೊ ಮರೆತೊ ಗಾಜಿನ ಸಾಮಾನು, ಕೋಟು...ಇತ್ಯಾದಿ ಯಾವುದೇ ಆಗಲಿ ಐದಡಿಗಿಂತ ಮೇಲಿಡದಿದ್ದರೆ ಅವುಗಳಿಗೆ ಏನಾದರೂ ಮಾಡಿಟ್ಟುಬಿಡುತ್ತವೆ—'ಶಿಶು ಬುದ್ಧಿ ಪ್ರಳಯಾಂತಕಃ' ಎಂಬ ತತ್ವವನ್ನು ನನ್ನ 'ಪಟಾಲಂ'ಗಳು ಸಮರ್ಥನೆ ಮಾಡತೊಡಗಿವೆ.

*  *

ನಮ್ಮ 'ಪಟಾಲಂ'ಗಳ ಪುಸ್ತಕಗಳನ್ನು ಪರೀಕ್ಷಿಸಿದರೆ ಗೊತ್ತಾಗುವುದು ಅವರ ಕಲಾವಂತಿಕೆ.

ಪುಸ್ತಕದ ಮಾರ್ಜಿನ್ನಿನಲ್ಲಿ (ಲೈಬ್ರರಿಪುಸ್ತಕಗಳಾದರೆ ಇನ್ನೂ ಸರಾಗ ಮತ್ತು ಧಾರಾಳ) ಅವರ ಹೆಸರು, ಅದರ ಕೊನೆಯಲ್ಲಿ ಮನಸ್ಸಿಗೆ ಬಂದ 'ಡಿಗ್ರಿ'ಗಳನ್ನು ಹಚ್ಚಿಕೊಂಡು ತಮ್ಮ ಪಾಡಿಗೆ ತಾವೇ ನಗುತ್ತವೆ. ಅವರ ವಿಳಾಸ, ಈ ಪುಸ್ತಕ ಯಾರಿಂದ, ಯಾವಾಗ, ಹೇಗೆ ಮತ್ತು ಏಕೆ ಬಂತು ಎಂಬುದರ ವಿವರವೂ ಅವರ ಪುಸ್ತಕಗಳಲ್ಲಿ ದೊರೆಯುತ್ತದೆ. ಮೊದಲನೆಯ ಮತ್ತು ಕೊನೆಯ ನಾಲ್ಕು ಪುಟಗಳು ಇರುವ ಪುಸ್ತಕಗಳು ಅವರ ಬಳಿ ಇಲ್ಲವೇ ಇಲ್ಲ.

ಕೊಂಚ ಮಾತ್ರ ಅಚ್ಚಾಗಿ ಉಳಿದ ಜಾಗಗಳಲ್ಲಿ ಅವರ ಸ್ನೇಹಿತರು ಗಳ ಸಟ್ಟಿ, ಅವರ ಹತ್ತಿರವಿದ್ದ ಮೂರು ಕಾಸಿನ ಟ್ರೇಸು, ಅವರವೇ ಆದ ಕೆಲವು 'ಕಾರ್ಟೂನ್' ಚಿತ್ರಗಳು ತುಂಬಿರುತ್ತವೆ. ಅವರ ಹಸ್ತಾಕ್ಷರವೋ (ಅವರು ಕನ್ನಡವೆಂದು ಸಾರಿ ಹೇಳಿದರೂ ನಂಬುವಂತಿಲ್ಲ.) ಯಾವುದಾದರೂ ಹುಂಜನ ಕಾಲಿಗೆ 'ಸ್ವಾನ್ ಇಂಕ್' ಸವರಿ ಬಿಳಿಯ ಕಾಗದದ ಮೇಲೆ ಓಡಾಡಿಸಿದ ಹಾಗೆ ಕಾಣುವುದು.

ನಾನು ಮನೆಯಲ್ಲಿಲ್ಲದಿದ್ದಾಗ ಯಾರೂ ಆಟಕ್ಕೆ ಸಿಗದಿದ್ದರೆ ಅವು ತಮ್ಮ ಪುಸ್ತಕದಲ್ಲಿರುವ ಎಲ್ಲಾ ಗೊಂಬೆಗಳಿಗೂ ಬಣ್ಣ ಹಾಕುತ್ತವೆ. ಅವರ 'ಖುಷಿ'ಗನುಸಾರವಾಗಿ ಬಣ್ಣದ ಸೀಸದಕಡ್ಡಿಯನ್ನು ತೀಡುತ್ತವೆ. ಲಾರ್ಡ್ ಕ್ಲೈವನಿಗೆ 'ನಾಮ' ಹಾಕಿಬಿಡುತ್ತವೆ. ನಾನಾಫಡ್ನವೀಸನಿಗೆ ಗಡ್ಡ ಹಚ್ಚಿಬಿಡುತ್ತವೆ. ಅವನ ದಪ್ಪನೆಯ ರುಮಾಲಿಗೆ 'ಚಮುಕಿ' ಅಲಂಕಾರ ಮಾಡುತ್ತವೆ. ಪದ್ಮಿನಿಗೆ ಮೀಸೆ ತಿದ್ದಿ, ಜಯಸಿಂಹನಿಗೆ ಇದ್ದ ಮೀಸೆಯನ್ನು ಎಂಜಲು ಬೆರಳಿನಿಂದ ಅಳಿಸಿ ಬಿಡುತ್ತವೆ. ಚಾಂದಬೀಬಿಗೆ ಕುಂಕುಮವಿಟ್ಟು ಅದರ ಕೆಳಗೆ ಮುದ್ರಿಸಿದ್ದ 'ಚಾಂದಬೀಬಿ'ಯನ್ನು 'ಚಾಂದ ಬೂಬಿ'ಯೆಂದು ಹಾಳೆಯು ತೂತಾಗುವವರೆಗೂ ಪೆನ್ಸಿಲ್‌ನಿಂದ ಪ್ರೂಫ್ ತಿದ್ದುತ್ತವೆ.

*   *

ಎಲ್ಲರ ತುಟಿ, ನಾಲಿಗೆಯೂ ಒಂದೇ ಬಣ್ಣ—ಪೆರುಮಾಳ್ ಚೆಟ್ಟಿ ಪೆನ್ಸಿಲಿನದು. ನನಗೆ ಏಮಾರಿಸಿ ನನ್ನ ಜೇಬಿನಿಂದ ತೆಗೆದುಕೊಂಡು ತಮ್ಮ ಕೆಲಸಗಳೆಲ್ಲ ಮುಗಿದ ಬಳಿಕ, ಇದ್ದ ಸ್ಥಳದಲ್ಲಿ ಇದ್ದ ಹಾಗೆ ಇಟ್ಟುಬಿಡುತ್ತವೆ. ಕೈ ಬೆರಳುಗಳೂ, ಅಂಗೈಗಳೂ 'ಶಾಯಿ'ಯನ್ನು ಬಳಿದುಕೊಂಡೇ ಇರುತ್ತವೆ.

ಅವರ ಅಂಗಿಯ ಜೇಬುಗಳೆಲ್ಲವೂ ತೂತು. ರಂಧ್ರಗಳಿಲ್ಲದ ಜೇಬಿನ ಅಂಗಿಯನ್ನು ಅವರು ಹಾಕಿಕೊಳ್ಳುವುದಿಲ್ಲವೊ ಏನೊ? ಅವರ ಅಂಗಿಯ ಮುಂಭಾಗವಂತೂ ಬಣ್ಣಗಾರನ ಕೈವಸ್ತ್ರವೇ! ಅದರಿಂದಲೇ ಮುಖಸಾರಣೆ, ಮೂಗು ಶುದ್ಧಿ, ಕೈಮಸಿ ಉಜ್ಜಿಕೊಳ್ಳುವುದು. ಬೆಲ್ಲ,

ಉಂಡೆ...ಇತ್ಯಾದಿ ಗಡಸು ಪದಾರ್ಥಗಳನ್ನು ಗೆಳೆಯರಿಗೆ ಕೊಡಲು 'ಕಾಕಿ ಎಂಜಲು' ಮಾಡುವುದು. ನಾಯಿಮರಿ, ಬೆಕ್ಕಿನ ಮರಿಗಳನ್ನು ಅದರಲ್ಲಿ ಹಾಕಿಕೊಂಡು ತೂಗುವುದು—ಇವೆಲ್ಲ ಸಾಗುವುದು ಅವರ ಅಂಗಿಯ ಮುಂಭಾಗದಲ್ಲಿಯೆ!

ಹೌದು! ಮರೆತಿದ್ದೆ ಈಗ ಬೆಕ್ಕಿನಮರಿಯ ತಂಟೆಗೆ ಅವರು ಹೋಗುವುದಿಲ್ಲ. ಕೆಲವರ ಕೈಗೆ ಅದು ಉಗುರುಗಳಿಂದ ವಕ್ರರೇಖೆಗಳನ್ನು ರಕ್ತ ಬರುವಂತೆ ಎಳೆದಿದೆ.

ಈ ಯುದ್ಧ ಕಾಲದಲ್ಲಿಯಂತೂ ಕಾಗದದ ಅಭಾವದಿಂದಾಗಿ ಕಡಲೆ, ಪುಟಾಣಿ, ಚೌಚೌ....ಇತ್ಯಾದಿ ತಿನಸುಗಳಿಗೂ ಅಂಗಿಯ ಮುಂಭಾಗವೇ ಗತಿ. ಯಾವುದಾದರೂ ಕುರ್ಚಿ, ಮೇಜುಗಳ 'ನಟ್ಟು-ಬೋಲ್ಟ್', ಗೋಡೆಯ ಮೊಳೆ ಇವುಗಳನ್ನು ಕಳಚಬೇಕಾದರೂ ಅಂಗಿಯೇ ಅವರ 'ಸ್ಪಾನರ್'. ಕಾಫಿ, ಊಟ, ಕದ್ದು ತಿಂದ ಸಕ್ಕರೆ ತುಪ್ಪ, ಇವುಗಳಿಂದಾದ ಕೈಬಾಯಿ ಮುಸುರೆಗೂ, ಅದೇ ಆಸರೆ. ಈಗಲೂ ಅಷ್ಟೆ-ಅಂಗಿ ಕಳಚಿ ನೆಲದ ಮೇಲೆ ಹಾಕಿದರೆ ಒಂದು ಕೋಟಿ ಇರುವೆಗಳು ಮುತ್ತಿಬಿಡುತ್ತವೆ, ಆ ಮುಂಭಾಗಕ್ಕೆ.

ಮನೆಯಲ್ಲಂತೂ ಐದು ನಿಮಿಷವಾದರೂ ಕೂಡುವುದೇ ಇಲ್ಲ. ಗೋಡೆಯ ಮೇಲೆ ತಾವು ಕತ್ತರಿಸಿದ ಚಿತ್ರಗಳನ್ನು ಅಂಟಿಸುವುದೋ, ಗಾಳಿಪಟ ಕಟ್ಟುವುದೋ....ಯಾವುದಾದರೂ ಒಂದು ಕೈಗಾರಿಕೆಯನ್ನು ನಡೆಸುತ್ತಲೇ ಇರುತ್ತವೆ. ಅನೇಕ ವೇಳೆ ನಾನು ಬೇಗ ಆಫೀಸಿಗೆ ಹೋಗಬೇಕಾದ ದಿನಗಳಲ್ಲಿ 'ವಾಲ್ವ್-ಟ್ಯೂಬ್' ತೆಗೆದರೆ ಚಕ್ರದ ಗತಿ ಏನು? ಎಂದು ಪರೀಕ್ಷಿಸಿರುತ್ತವೆ. ನನ್ನ ಗತಿಯೇನು? ಎಂಬುದನ್ನು ಯೋಚಿಸುವುದೇ ಇಲ್ಲ.

ಸಮುಕಲು ನಾಣ್ಯವನ್ನು ನಮ್ಮ ಬೀದಿಯ ಯಾವ ಅಜ್ಜಿ ಅಜ್ಜರ ಹತ್ತಿರವಿದ್ದರೂ ಪತ್ತೆ ಹಚ್ಚಿಬಿಟ್ಟು ಸ್ವಾಧೀನಕ್ಕೆ ತೆಗೆದುಕೊಂಡು ಬಿಡುತ್ತವೆ. ಅದನ್ನು ಹುಳಿಹಣ್ಣಿನಲ್ಲಿ ಬೆಳಗಿಬಿಟ್ಟು ಯಾವ ಮಾಯದಲ್ಲಿ ಯಾರಿಗೊ ನೂಕಿಬಿಟ್ಟು ತಿಂಡಿ ತಿಂದುಬಿಡುತ್ತವೆ. ನಮ್ಮ ಬೀದಿಯಲ್ಲಿ

ಎಲ್ಲಿ, ಯಾರೇ ಜಗಳವಾಡಲಿ ಇವು ಹೋಗಿ ನೋಡುತ್ತ ನಿಂತುಬಿಡುತ್ತವೆ. ಹಾವಾಡಿಗರು, ಮೋಡಿ ಹಾಕುವವರು---ಇವರಿಗೆಲ್ಲ ನಮ್ಮ 'ಪಟಾಲಂ'ದೇ ಮೊದಲ ಬೆಂಬಲ. ನಮ್ಮ ಬೀದಿಗೆ ಬಂದ ಯಾವ ಹೊಸ ಹುಡುಗನನ್ನಾದರೂ ರೇಗಿಸುತ್ತವೆ. ಸಿನುಷ ಮಾತ್ರದಲ್ಲಿ ಅವನಿಗನುಗುಣವಾದ ಒಂದು ಹೆಸರನ್ನು ಕಟ್ಟಿಬಿಟ್ಟು, ಅವನ ಸಮ್ಮುಖದಲ್ಲಿ ಅರಚುತ್ತವೆ. ಅವನೇನಾದರೂ ' ಫುರ್---ಫುರ್ ' ಎಂದರೆ 'ತದಕಿ' ಬಿಡುತ್ತವೆ.

ಎಲ್ಲರ ಮನೆಯ ಗೃಹಕೃತ್ಯಗಳನ್ನು ತಿಳಿದು ಬಗಲಿಗೆ ಹಾಕಿಕೊಂಡಿವೆ. ಯಾರ ಮನೆಗೆ, ಎಲ್ಲಿಂದ, ಎಷ್ಟುಜನ ನೆಂಟರು ಬಂದರು? ಎಷ್ಟು ದಿನ ಇರುತ್ತಾರೆ? ಅವರಾಗಿಯೇ ಹೊರಟರೆ? ಇಲ್ಲ....ಎಲ್ಲಿ ಅತ್ತೆ ಸೊಸೆಯರ ಕಾಳಗ? ಯಾವ ಮನೆಯಲ್ಲಿ ಗಂಡ ಯಜಮಾನನಲ್ಲ? (ನಮ್ಮ ಮನೆಯನ್ನು ಬಿಟ್ಟು) ನಮ್ಮ ಬೀದಿಯಲ್ಲಿ ಎಷ್ಟು ಎಳೆಯ ಹುಡುಗರಿವೆ ಎಂಬ ವಿವರವೆಲ್ಲಾ ಮುಂದಟ್ಟುಮಾಡಿಕೊಂಡಿವೆ.

ಅಕಸ್ಮಾತ್ತಾಗಿ ನಾನು ಎಂದಾದರೂ ಬಾಯಿ ಬಿಟ್ಟಿದ್ದರೆ ತಾರೀಖು, ಗಂಟೆ, ಸನ್ನಿವೇಶ, ಸಾಕ್ಷಿಸಮೇತ 'ನೀನು ಸಿನಿಮಾಕ್ಕೆ ಕರ್ಕೊಂಡು ಹೋಗ್ತೀನಿ' ಎಂದು ಹೇಳಿದ್ದೇ ಎಂದು ನೆನಪಿಗೆ ತರುವಷ್ಟು ಜ್ಞಾಪಕ ಶಕ್ತಿಯಿದೆ ಅವುಗಳಿಗೆ. "ನಾನು ಕೊಡಬೇಕಾದ ಸಾಲವೆಷ್ಟು" ಎಂದು ನನ್ನ ಶಾರಿಗೆ ಹೇಳುತ್ತಿದ್ದುದನ್ನು ಕೇಳಿಸಿಕೊಂಡು ಸಂದರ್ಭವೊದಗಿದಾಗ ಸರ್ರನೆ ಗುಡುಗಿ ಬಿಡುತ್ತವೆ. ಎಲ್ಲರೂ ಹೋಗಲು ಹೆದರಿ ನಡುಗುವ ಜಾಗಗಳಿಗೆ-ರೇಷನ್ ಡಿಪೊ, ಕ್ಲಾತ್ ಎಂಪೋರಿಯಮ್, ಸೌದೆಗಡಂಗು-ಲೀಲಾಜಾಲವಾಗಿ ನುಗ್ಗಿಬಿಡುತ್ತವೆ. ಆದರೆ ಮಾತ್ರ ಸರಿಯಾಗಿ ಸೂಚನೆ ಕೊಡದಿದ್ದಲ್ಲಿ ಅನರ್ಥವಾಗುವುದು ಖಂಡಿತ.

* *

ಮೊನ್ನೆಯದಿನ ಮಾತ್ರ ಶಾರಿಯು ಷರೀಕಾಗಲಿಲ್ಲ. ಅವಳೂ ನಾನು ಸೇರಿಕೊಂಡು 'ಇಸಂ'ಗೆ ಅರ್ಥ ಡಜನ್ನಿನಂತೆ ಬಿಗಿದೆವು.

ರಜಾ ಬಂದಾಗ ಮನೆಯೊಳಗೆ ಕಣ್ಣುಮುಚ್ಚಾಲೆಯಾಡುವುದು ಪದ್ಧತಿ. ಪಾಪ, ಆಡಿಕೊಳ್ಳಲಿ ಎಂದು ಶಾರಿಯೂ ಬಿಡುವಿದ್ದರೆ ಅವ ರೊಂದಿಗೆ ಸೇರಿಕೊಳ್ಳುತ್ತಿದ್ದಳು. ನನ್ನ ಶಾರಿ ಆರುಮಕ್ಕಳ ತಾಯಿಯಾ ದರೂ ನನ್ನ ಪಾಲಿಗೆ ಹುಡುಗಿಯೆ!

ಯಾರಾದರೂ ಶಾರಿಯಿಂದ ಕಣ್ಣು ಮುಚ್ಚಿಸಿಕೊಳ್ಳುವರು ಮಿಕ್ಕ ವರು ಬಚ್ಚಿಟ್ಟುಕೊಳ್ಳುವರು. ಅವರನ್ನು ಹುಡುಕಬೇಕು. ಯಾರು ಮೊದಲು ಸಿಕ್ಕಿಬೀಳುತ್ತಾರೊ, ಅವರು ಕಣ್ಣುಮುಚ್ಚಿಸಿಕೊಳ್ಳುವ ಸರದಿ.

'ಪಪ್ಪಿ'ಯ ಸರದಿ ಬಂತು. ಶಾರಿ ಅವಳ ಕಣ್ಣು ಮುಚ್ಚಿದಳು ಎಲ್ಲರೂ ಬಚ್ಚಿಟ್ಟುಕೊಂಡರು. 'ಪಪ್ಪಿ' ಕಣ್ಣುಬಿಟ್ಟಳು 'ಅಮ್ಮಾ ಯಾರು ಇಲ್ಲ....' ಎಂದು ಅಳತೊಡಗಿದಳು 'ಪಾಪ, ಮೂರು ವರ್ಷದ ಮಗು ಏನು ಹುಡುಕೀತು' ಎಂದುಕೊಂಡು ಶಾರಿ ಯಾರನ್ನಾದರೂ ಹುಡುಕಿ ಕೊಡಬೇಕೆಂದು "ಪಪ್ಪಿ"ಯನ್ನೆತ್ತಿಕೊಂಡು ಒಳಕ್ಕೆ ಬಂದಳು---ಸದ್ದು ಮಾಡದೆ.

ಒಳಗೆ ಉಳಿದ 'ಪಟಾಲಂ' ಎಲ್ಲವೂ ಅಡಿಗೆ ಮನೆಯಲ್ಲಿ ಸಕ್ಕರೆ ಬೆಲ್ಲ, ಕೊಬ್ಬರಿ ತುಪ್ಪಗಳನ್ನು ತಿನ್ನುತ್ತಾ ಇವೆ-ಸರಸರನೆ. 'ಅಣ್ಣಾ! ನಂಗೇ!' ಎಂದು ಪಪ್ಪಿ ಶಾರಿಯ ಸೊಂಟದಿಂದ ಕೆಳಕ್ಕೆ ಜೋತುಬಿದ್ದಳು. ನಮ್ಮ 'ಪಟಾಲಂ' ಇತ್ತ ದೃಷ್ಟಿ ಹೊರಡಿಸಿದವು. 'ಅಮ್ಮಾ' ಎಂದುಕೂಗಿ, ಕಾಳು ಮೇಯುತ್ತಿದ ಗುಬ್ಬಚ್ಚಿಗಳನ್ನು ಬೆದರಿಸಿದಂತೆ-ಹಾರಿಹೋದರು.

* *

ಆ ದಿನ ಸಂಜೆ 'ಪಪ್ಪಿ' ಎಲ್ಲವನ್ನೂ ಹೇಳಿಬಿಟ್ಟಳು. 'ಪ್ರತಿದಿನವೂ

ಕಣ್ಣುಮುಚ್ಚಾಲೆಯಾಡುವುದು ಇದಕ್ಕೋಸ್ಕರವೇ!' ಎಂದು ಶಾರಿಗೆ ಗೊತ್ತಾಯಿತು. 'ಇದಕ್ಕಾಗಿಯೇ ಇವು ನನ್ನನ್ನೇ ಕಣ್ಣು ಮುಚ್ಚೋಕೆ ಪೀಡಿಸುತ್ತಿದ್ದವು' ಎಂದು ತಿಳಿಯಿತು.

ಆ ದಿನ ಸಂಜೆ ನನ್ನ ಕೈಗೆ ಶಾರಿ ಬೆತ್ತ ತಂದುಕೊಟ್ಟು ನಮ್ಮ 'ಪಟಾಲಂ'ನ 'ವಿಚಾರಣೆ ನಡೆಸಿ' ಎಂದು ಆಜ್ಞಾಪಿಸಿದಳು. ಬೆತ್ತದ ಸಮ್ಮುಖದಲ್ಲಿ ವಿಚಾರಣೆಯಾದಾಗ ಒಬ್ಬರಮೇಲೊಬ್ಬರು ತಪ್ಪು ಹಾಕಿ ಎಲ್ಲರೂ ನಿರಪರಾಧಿಗಳೆಂದು ಘೋಷಿಸಿದರು.

# ನಿರುತ್ತರ!

ಅಂತೂ ನನ್ನಾಸೆ ಫಲಿಸಲಿಲ್ಲ!

---ಪ್ರತಿ ದಿನವೂ ಅಂಚೆಕಟ್ಟೆಯ ಮೇಲೆ ಮುಂಗೈ ಕೆರೆದುಕೊಳ್ಳುತ್ತ "ನನಗೇನಾದರೂ ಇದೆಯೆ?'' ಎಂದು ಅಂಚೆಯವನನ್ನು ಕೇಳುತ್ತಿದ್ದೆ.

"ಇಲ್ಲರೀ...ಇದ್ರೆ ನಾನೇ ಕೊಡ್ತೇನೆ"---ಬೇಸರವಾಗಿಯೇ ಹೇಳುತ್ತಿದ್ದನಾತ. ಹೌದು---ದಿನವೂ ಸಾಯುವವರಿಗೆ ಅಳುವವರಾರು?

ಈವರೆಗೆ ನನ್ನ ವಿಳಾಸಕ್ಕೆ ಒಂದು ಕವರು, ಒಂದು ಕಾರ್ಡು--- ಏನೇನೂ ಬರಬೇಡವೆ? ಸುಮಾರು ಇಪ್ಪತ್ತು ಕವನಗಳನ್ನು ಕಳುಹಿಸಿದ್ದೆ, ಆ ಕನ್ನಡೋಜ್ವಲ ಏಕಮಾತ್ರ ಮಾಸ ಪತ್ರಿಕೆಗೆ. ಅವುಗಳಲ್ಲಿ ಐದೈದು ಕವನಗಳನ್ನು ಒಂದೊಂದು ಜಾತಿಯಾಗಿ ವಿಂಗಡಿಸಿದ್ದೆ. ಅಂದರೆ ಪ್ರತಿ ಜಾತಿಯ ಕವನಗಳಿಗೂ ವೆತ್ಯಾಸವಿರುವುದು ಅವುಗಳ ಪಾದದ ಉದ್ದಳತೆಯಲ್ಲಿ---ಎರಡು ಅಂಗುಲದಿಂದ ನಾಲ್ಕು ಅಂಗುಲದವರೆಗೆ ಅವುಗಳ ಮೇರೆ.

ನನ್ನ ಕವನ ಸಂಗ್ರಹವಲ್ಲಿ ಕನ್ನಡಾಂಬೆ, ಭಾರತಮಾತೆ, ದಲಿತ ಜನಾಂಗಗಳನ್ನು ಕುರಿತು ಹಲುಬಿದ ಗೀತೆಗಳಿವೆ. ಕ್ರಾಂತಿ, ವಿಪ್ಲವ, ಸಾಮ್ಯ, ಸಮತಾ, ಬಂಡವಲ---ಈ ಶಬ್ದಗಳನ್ನೇ ಹೆಚ್ಚಾಗಿ ಬಳಸಿ ಹೆಣೆದ ಕವನಗಳಿವೆ. ಕಥನಕವನಗಳ ಹೆಣಿಗೆಯೂ ಒಂದೆರಡಿವೆ. ನನ್ನ

ಕಯ್ಯಾರ ಜೋಡಿಸಿದ ನೀಳ್ಗವನ, ರಗಳೆಗಳೂ ಇವೆಯೆಂದು ನಾನು ಭರವಸೆ ಕೊಡುತ್ತೇನೆ.

ಇವುಗಳಲ್ಲಿ ಒಂದಾದರೂ, ಎಂದಾದರೂ ಪ್ರಕಟಿಸಿ. ನನ್ನ ಮನಸ್ಸಂತೋಷಪಡಿಸಬೇಕಾಗಿ ಅಂಗಲಾಚಿದೆ.

ಯಾವ ಉತ್ತರವೂ ಬರಲಿಲ್ಲ.

*　　　　*

ಕವನ ಅವರಿಗೆ ಬೇಡ, ಇಂದಿನ ಲೇಖಕರಿಂದ ಅವರು ಅಪೇಕ್ಷಿಸುವುದು ಕವನಗಳಲ್ಲ ಎಂದು ನಾನೇ ಹೇಗೋ ಅರಿತುಕೊಂಡು ಸಣ್ಣ ಕತೆಗಳನ್ನು ನಿರ್ಮಿಸತೊಡಗಿದೆ. ರೂಪಕತೆ, ಕಿರುಗತೆ, ಸತ್ಯಕತೆ, ಕಲ್ಪನಾ, ನಿತ್ಯಕತೆ—ಈ ಜಾತಿಯ ಕತೆಗಳೆಲ್ಲವೂ ನನ್ನಿಂದ ಮೂಡಿದವು. ಪ್ರತಿಯೊಂದು ಕತೆಯನ್ನೂ 'ಬುಕ್ ಪೋಸ್ಟು' ಮಾಡಿದೆ.

ಕೂಡಲೆ ಪ್ರಾಣದೇವರ ಗುಡಿಗೆ ನುಗ್ಗಿ ದೇವರಿಗೆ ನನ್ನ ಕತೆ ಪ್ರಕಟವಾದರೆ ತೆಂಗಿನಕಾಯಿ, ಕರ್ಪೂರ ಮತ್ತು ಊದಿನಕಡ್ಡಿಗಳ ಹೊಗೆ, ಪಾಯಸದ ನೈವೇದ್ಯ ಇವುಗಳ ಆಸೆ ಹುಟ್ಟಿಸಿದೆ. ಆ ದೇವರಿಗೆ ನಂಬಿಗೆ ಹುಟ್ಟಲೋಸುಗ ಅರಿಶಿನ ಬಟ್ಟೆಯಲ್ಲಿ ಹರಕೆ ಕಟ್ಟಿದೆ. ಎಳ್ಳು ದೀಪ ಉರಿಸಿ 'ನಮ್ಮ ಸಂಪಾದಕರಿಗೆ ನನ್ನ ಕತೆ ಆರಿಸಿಕೊಳ್ಳುವ ಬುದ್ಧಿ ಕೊಡು' ಎಂದು ಜಪ ಮಾಡಿದೆ. ಹಕ್ಕಿಯ ಶಕುನ, ಜೋಯಿಸರ ಪ್ರಶ್ನೆ, ಹಸ್ತ ಸಾಮುದ್ರಿಕಗಳನ್ನೂ ಕೇಳಿ ಮುಗಿಸಿದೆ.

ಎಲ್ಲವೂ 'ಭಯಪಡಬೇಡ' ಎಂದು ಉತ್ತರಿಸಿದ್ದವು. ಆ ಗಳಿಗೆಗೆ ಹಾಲು ಕುಡಿದಷ್ಟು ಸಂತೋಷವಾದರೂ ಮರು ಗಳಿಗೆಯಲ್ಲಿಯೇ 'ಉತ್ತರವೇಕೆ ಬರಲಿಲ್ಲ?' ಎಂಬ ಸಂಶಯ ಎದುರು ನಿಂತು ರೇಷನ್‌ಕಾರ್ಡು ಕಳೆದುಕೊಂಡ ಸದ್ಗೃಹಸ್ಥನಂತಾಗುತ್ತಿದ್ದೆ. ಎಳೆಗುರುವಿನಂತೆ ಹಿಡಿದಷ್ಟೂ ರಭಸವಾಗಿ ಮೆದುಳಿಗೆ ನುಗ್ಗಿಬಿಡುತ್ತಿತ್ತು ಆ ಯೋಚನೆ.

...'ಒಂದು ಉತ್ತರವಾದರೂ ಬರಲಿಲ್ಲವಲ್ಲಾ! ಎಂದು.

## ಮುಗುಳು ನಗೆ

ನನ್ನ ಮೇಲೆ ಹಲ್ಲಿ ಬಿತ್ತು.

ನಮ್ಮೂರಿನಲ್ಲೆಲ್ಲಾ ಹಾರಾಡಿ, ನಾನೇ ಜಗಳ ತೆಗೆದು ಮಾತು ಬಿಟ್ಟಿದ್ದವರನ್ನೆಲ್ಲಾ ನಾನಾಗಿ ಮಾತಾಡಿಸಿ 'ಹಲ್ಲಿ ಶಕುನದ ಪುಸ್ತಕವನ್ನು ಪತ್ತೆ ಹಚ್ಚಿದೆ. 'ನಡು ನೆತ್ತಿಯ ಮೇಲೆ ಬೀಳೆ ಶುಭ'---ಎಂದು ಬರೆದಿತ್ತು. ಸರಿ. ನನ್ನ 'ಕೃತಿ' ಪ್ರಕಟವಾಗುತ್ತೆ ಎಂದು ಧೈರ್ಯವಾಯಿತು. ಒಂದೇ ಸಾರಿ ಪ್ರಕಟಮಾಡಿದರಾಯಿತು'—ಎಂದು ಸುಮ್ಮನಿದ್ದಾರೆ ಬಿಡುವಿಲ್ಲದ ಸಂಪಾದಕರು ಎಂದುಕೊಂಡೆ.

ಪ್ರಕಟವಾಗುವುದು ಕತೆಯೊ? ಕವನವೊ?—ಎಂಬ ಅನುಮಾನ ಮಾತ್ರ ಇನ್ನೂ ಪರಿಹಾರವಾಗದೆ ಉಳಿದಿತ್ತು. ಜೇಬಿನಿಂದ ಕಾಸು ತೆಗೆದುಕೊಂಡು 'ತಲೆ' ಬಿದ್ದರೆ ಕತೆ, 'ಕಾಲು' ಬಿದ್ದರೆ ಕವನ ಎಂದು ಕರಾರು ಮಾಡಿಕೊಂಡು ಉಗುರಿನಿಂದ ಮೇಲಕ್ಕೆ ಚಿಮ್ಮಿದೆ. ಕೆಳಕ್ಕೆ ಬಿದ್ದ ಕಾಸನ್ನು ಕುತೂಹಲದಿಂದ ನೋಡಿದೆ. ಅದು 'ಕತೆ' ಪ್ರಕಟವಾಗು ವುದು—ಎಂದು ಉತ್ತರ ಹೇಳಿತು.

ತುಟಿಯ ತುದಿಯಲ್ಲಿ ನಗೆ ಅರಳಿಸುತ್ತ ಉಬ್ಬಿಹೋದೆ.

*    *

''ಇವತ್ತು ಬರುತ್ತೆ....ನಾಳೆ ಬರುತ್ತೆ''—ಎಂದುಕೊಂಡಿದ್ದ ಕಾಗದ ತಿಂಗಳಾದರೂ ಬರಲಿಲ್ಲ. ನನ್ನಿಂದ ಉತ್ತರಕ್ಕಾಗಿ ಹತ್ತಾರು ಪತ್ರಗಳು ಓಡಿದವು. ಆದರೇನು?—ಅವೆಲ್ಲವೂ ಸತ್ತ ಪತ್ರಗಳ ಕಛೇರಿ ಸೇರಿದ ವೇನೊ?—

ಅವುಗಳಿಂದ ಯಾವ ಉತ್ತರವೂ ಬರಲಿಲ್ಲ. ಪ್ರಾಣದೇವರು, ಹಲ್ಲಿ ಶಕುನಗಳಾದಿಯಾಗಿ ಎಲ್ಲದರಲ್ಲಿಯೂ ಅಪನಂಬಿಕೆಯಾಯಿತು. ರೇಗಿದಾಗ ಅವುಗಳ ವಂಶಾವಳಿಗಳನ್ನುದ್ಧರಿಸುತ್ತ ಅವುಗಳ ನಿರುಪಯೋ ಗಕ್ಕಾಗಿ ಶಪಿಸುತ್ತಿದ್ದೆ.

*    *

ಅಂತೂ ನನಗೆ ಹೊಳೆದುಬಿಟ್ಟಿತು ಈ ಗುಟ್ಟು!

'ಇಂದಿನ ಜನರಿಗೆ ಬೇಕಾಗಿರುವುದು ಪ್ರಣಯ ಕತೆಗಳಲ್ಲ....ಪ್ರೇಮ ಗೀತೆಗಳಲ್ಲ....ಕಥನ ರಗಳೆಗಳಲ್ಲ....ರಾಜಕೀಯ ಲೇಖನಗಳು ಎಂದು ಹೇಗೋ ಬುದ್ಧಿಗೆ ಹೊಳೆಯಿತು. ನಾನೂ ನರನಾಡಿಗಳನ್ನು ಮಿಡಿಯುವ ಲೇಖನಗಳನ್ನು ಬರೆಯಬೇಕೆಂದು ಕನಸು ಕಂಡೆ.

ಇದುವರೆಗೂ ದಿನಪತ್ರಿಕೆಯ ವಾಸನೆ ಕಂಡರಾಗುತ್ತಿರಲಿಲ್ಲ ನನಗೆ. ಈಗ ಅವುಗಳನ್ನು ಜಾಗರೂಕತೆಯಿಂದ ತೆಗೆದುಕೊಂಡು ಓದಿಕೊಂಡೆ. ಅವುಗಳ ಧೋರಣೆ ಏನು?—ಎಂದು ತಿಳಿಯಲು ಪ್ರಯಾಸ ಪಟ್ಟೆ. ಸುಸ್ತು ಹೊಡೆದೆ. ಕೊನೆಗೆ 'ಎಂಥ ಧೋರಣೆಯಿಲ್ಲದ ಜನ!'—ಎಂದು ಗೊಣಗಿ ಕೊಂಡೆ. ಅವರನ್ನೇಕೆ ನಾನು ಅನುಸರಿಸಬೇಕು? ಅದು ಮಾರ್ಗಚ್ಯುತಿ' ವಾಗುವುದು ಎಂದುಕೊಂಡು ನನ್ನದೇ ಆದ ಒಂದು ದಾರಿಯನ್ನು ಹಿಡಿದೆ. ಅವರಿಗಿಂತ ನಾನೇ ಚೆನ್ನಾಗಿ ಬರೆಯುತ್ತೇನಲ್ಲಾ ಎಂದು ಆಶಾವಾದಿಯಾಗಿ ತುಳುಕಾಡಿದೆ. ಕನ್ನಡದ ಮೇಲೆ ತೆಲಗು, ಮಲಯಾಳಿ, ಕೊಂಕಣಿ ಮತ್ತು ಹೂಣ ಭಾಷೆಗಳ ದಬ್ಬಾಳಿಕೆಯನ್ನು ಖಂಡಿಸಿ ಬರೆದೆ. ಸ್ವಾರ್ಥಿ ಗಳು, ದಾಂಭಿಕರು, ಸೋಗಲಾಡಿಗಳು ಮತ್ತು ಜಾತೀಯ ಕೋತಿಗ ಳನ್ನು ಟೀಕಾತ್ಮವಾಗಿ ತೀಡಿ ಬರೆದೆ.

*   *

ಈ 'ಲೇಖನ ಸಂಗ್ರಹ'ವನ್ನು ಮೇಲ್ಕಂಡ ಸಂಪಾದಕರಿಗೇ ಪಾರ್ಸಲ್ ಮಾಡಿದೆ. ಜೊತೆಗೆ ನಾಲ್ಕಾರು ರಿಪ್ಲೈ ಕಾರ್ಡು ಇಟ್ಟಿದ್ದೆ. ತಾಯಿಯ ಆಗಮನವನ್ನು ಕಾಯುವ ಎಳೆಗರುವಿನಂತೆ ಉತ್ತರವನ್ನು ಎದುರುನೋಡಿದೆ. ಸ್ವಲ್ಪ ದಿನಗಳಾದನಂತರ ಅವರಿಗೊಂದು ಪತ್ರವನ್ನು ಬರೆದೆ.

ಶ್ರೀ ಸಂಪಾದಕ ಮಹಾಶಯರಿಗೆ

ಜೈ ಹಿಂದ್ !

ಈ ದಿನ ನಿಮಗೆ ಕನ್ನಡಮ್ಮನ ಸೇವೆಗಾಗಿಯೇ ಲಿಖಿಸಿದ ಲೇಖನ ಮಾಲೆಯನ್ನು ಪ್ರತ್ಯೇಕವಾಗಿ ಕಳುಹಿಸಿದ್ದೆ-ಗಾಬರಿ ಪಡಬೇಡಿ. ಅವುಗ

ಳಿಂದ ನಿಮ್ಮ ಪ್ರಗತಿಶೀಲ ಮಾಸಿಕದ ನಾಲ್ಕಾರು ಪುಟಗಳನ್ನಾದರೂ ತುಂಬಿ ಉಪಕರಿಸಿ.

ಸಾಧ್ಯವಾದರೆ ಅವುಗಳನ್ನು ನಿಮ್ಮದೇ ಆದ 'ತಾತ್ಕಾಲಿಕ ಗ್ರಂಥ ಮಾಲೆ'ಯಲ್ಲಿ ಕಿರೀಟಸಿಕೊಳ್ಳಬಹುದು. ನನ್ನ ಅಭ್ಯಂತರವೇನೂ ಇಲ್ಲ.

ಈ ತರುಣನಿಗೆ ನಿಮ್ಮ ಪ್ರೋತ್ಸಾಹವೇ ಅವಶ್ಯಕ. ನೀವು ಇಷ್ಟ ಪಟ್ಟಲ್ಲಿ ಈಗ ನನ್ನಲ್ಲಿ ಹಾಲಿ ಇರುವ ಇನ್ನೊಂದು ಬಂಡಲನ್ನು ಪಾರ್ಸಲ್ ಮಾಡುತ್ತೇನೆ.

ಇಂತು ಎಂದೆಂದೂ ನಿಮ್ಮವನೇ,

................

*　　　*

ಮೇಲ್ಕಂಡ ಪತ್ರಕ್ಕಾಗಲಿ, ಪಾರ್ಸಲ್ ತಲುಪಿದ್ದಕ್ಕಾಗಲಿ ಆರು ಕಾಸಿನ-ನಾನು ಕಳುಹಿಸಿದ್ದ - ಕಾರ್ಡಿನಲ್ಲಿ ಉತ್ತರ ಬರಲಿಲ್ಲ. ನನ್ನ 'ಸಾಹಿತ್ಯ ಸೃಷ್ಟಿ'ಯನ್ನು ಕೆಲವಾರು ತಿಂಗಳು ರವಾನಿಸದೆ ಸುಮ್ಮನಿದ್ದು ಆಮೇಲೆ ಒಂದು ಪತ್ರ ಬರೆದೆ---ಅದೂ ಬಿಳಿಯ ಹಾಳೆಯ ಮೇಲೆ ಒಂದೇ ಪಕ್ಕದಲ್ಲಿ ಬಿಡಿ ಬಿಡಿಯಾಗಿ.

ಶ್ರೀ....ಸಂಪಾದಕರಿಗೆ

....................

ನಿಮ್ಮ ಉಜ್ವಲ ಲೇಖನಿಯ ಪ್ರಖರ ಕಿರಣಗಳು ಕನ್ನಡ ಜನತೆಯ ಕಣ್ಣುಗಳನ್ನು ಕೋರೈಸುವುದರಲ್ಲಿ ನನಗೆ ಸಂಶಯವೇ ಉಳಿದಿಲ್ಲ. ನೀವು ಕನ್ನಡ ನಾಡಿನ.......(ವಿ. ಸೂ : ಇಲ್ಲಿ ಸ್ಥಳ ಬಿಟ್ಟಿರುವ ಜಾಗವನ್ನು ಯಾರಾದರೂ ಆಸ್ಥಾನ ವಿದ್ವಾನ್‌ಗಳಿಂದ ತುಂಬಿಸಿಕೊಂಡರೆ ಒಳ್ಳೆಯದು.)

ನಿಮ್ಮ ಕತೆ ಕಾದಂಬರಿಗಳ ಬಗ್ಗೆ ಹೇಳುವುದಾದರೆ-ಕಜ್ಜಿ ಅಂಟಿದ ಬೆರಳು ಸಂದಿಗಳನ್ನು ಉಜ್ಜಲು ಪ್ರಾರಂಭಿಸಿದರೆ ಮಧ್ಯದಲ್ಲಿ ನಿಲ್ಲಿಸಲು

ಹೇಗೆ ಮನಸ್ಸು ಬರುವುದಿಲ್ಲವೊ, ನಿಲ್ಲಿಸಿದರೂ ಮತ್ತೆ ಕೆರೆದುಕೊಳ್ಳಬೇಕು ಎಂಬ ಉತ್ಕಟ ಹಂಬಲುಂಟಾಗುವುದೋ ಹಾಗೆ....ನಿಮ್ಮ ಕೃತಿಗಳನ್ನು ಒಮ್ಮೆ ಓದಲು ತೊಡಗಿದರೆ ಮುಗಿಸುವವರೆಗೂ ನಿಲ್ಲಿಸಲಾಗುವುದಿಲ್ಲ. ನಾನೂ ಪ್ರಗತಿಶೀಲನೇ ಆದ್ದರಿಂದ ಕಜ್ಜಿಯಂತಹ ಜನಸಾಮಾನ್ಯದ ದಿನಸಾಮಾನ್ಯ ಉಪಮೆಯನ್ನು ಕೊಟ್ಟಿದ್ದೇನೆ. ನೀವು ಮೆಚ್ಚುತ್ತೀರೆಂದು ನನ್ನ ನಂಬಿಕೆ.

ನನ್ನ ಕತೆ, ಕವನ, ಲೇಖನಗಳ ಬಗ್ಗೆ ಏನು ಮಾಡಿದಿರಿ? ಪ್ರಕಟಿಸುವ ಕೃಪೆ ಮಾಡಬೇಕು.

ಇಂತು, ಎಂದೆಂದೂ ನಿಮ್ಮ ಬಂಧು

................

*　　　*

ಮೂರು ತಿಂಗಳ ನಂತರ

ಶ್ರೀ....ರವರಿಗೆ

ಜೈ ಹಿಂದ್!

................

ತಮ್ಮಂಥ ಕೆಚ್ಚೆದೆಯುವರಲ್ಲಿ ಪತ್ರಿಕೋದ್ಯೋಗವನ್ನು ಕಲಿಯಬೇಕೆಂದು ಹಗಲು ರಾತ್ರಿ ಹಂಬಲಿಸುತ್ತಿದ್ದೇನೆ. ನಿಮ್ಮ ಪತ್ರಿಕಾ ಕಛೇರಿಯಲ್ಲಿ ಯಾವುದಾದರೂ 'ಸಣ್ಣ ಕೆಲಸ'ವನ್ನು ನನಗೆ ಕೊಡುವಿರಾ? ನನಗೇನು ತಾವು ಸಂಬಳ ಕೊಡಬೇಕಾಗಿಲ್ಲ. ಹಿಂದೆ ನಮೂದಿಸಿರುವಂತೆ ಕನ್ನಡಮ್ಮನ ಸೇವೆಗೆ ನಿರಂತರ ಹೋರಾಡುತ್ತೇನೆ. ನಾನು ಯಾವಾಗ ಹೊರಟು ಬರಲಿ?

ನನ್ನ ಕೃತಿಗಳ ಬಗ್ಗೆ ಏನು ಕಾರ್ಯಕ್ರಮ ಕೈಕೊಂಡಿರಿ? ದಯವಿಟ್ಟು ಮರೆಯಬೇಡಿ.

ಇಂತು, ನಿಮ್ಮ ಸೋದರ

................

ಇದಾದ ನಲವತ್ತು ದಿನಗಳ ನಂತರ
ಶ್ರೀ....ಯವರಿಗೆ
ಜೈ ಹಿಂದ್!
........

ನಮ್ಮೂರಿನ ತರುಣರು ನಿಮ್ಮನ್ನು ಪ್ರತ್ಯಕ್ಷ ನೋಡಬೇಕೆಂದು ಕುತೂಹಲರಾಗಿದ್ದಾರೆ. ನಿಮಗೆ ಒಂದು ನಿಧಿಯನ್ನು ಅರ್ಪಿಸಬೇಕೆಂದು ನಾವೆಲ್ಲರೂ ಪ್ರಯತ್ನಿಸುತ್ತಿದ್ದೇವೆ. ಒಂದು ಪ್ರಶಸ್ತಿ ಗ್ರಂಥವನ್ನು ತರಬೇಕೆಂಬ ಆಲೋಚನೆಯಿದೆ. ಆ ಬಗ್ಗೆ ನಾವೆಲ್ಲ ಬಿರುಸಾಗಿ ಓಡಾಡುತ್ತಿದ್ದೇವೆ.

ನಮ್ಮೂರಿಗೆ ನೀವು ಬರಲೇಬೇಕು. ಬರುವ ಮುನ್ನ 'ಟೆಲಿಗ್ರಾಂ' ಕೊಡಿ.

ಕರ್ನಾಟಕಕ್ಕೆ ನೀವಿಲ್ಲದಿದ್ದರೆ ಆಗುವುದೇ ಇಲ್ಲ.

ಇಂತು, ಈ ಸಾರಿಯಾದರೂ ಉತ್ತರಿಸುವಿರೆಂದು
ನಂಬಿರುವ
.........

ಮ. ಮಾ.

ನಾನು ಕಳುಹಿಸಿರುವ ಸಾಹಿತ್ಯದ (ಪಾರ್ಸೆಲ್ಲಿನ)ಲ್ಲಿ ಚುಟುಕವೊಂದನ್ನು ನಿಮ್ಮ ಮನಸ್ಸಿಗೆ ಬಂದಂತೆ ತಿದ್ದಿ (ಆ ಅಧಿಕಾರವನ್ನು ನಾನು ಈ ಮೂಲಕ ಕೊಟ್ಟಿದ್ದೇನೆ.) ನಿಮ್ಮ ಅಮೋಘ ಪತ್ರಿಕೆಯಲ್ಲಿ ಹಾಕುವಿರಾ? ಅಚ್ಚಾದ ಲೇಖನಗಳಿಗೆ ಪ್ರತಿಫಲ ಕೊಡಲಾಗುವುದೆಂದು ಪ್ರಕಟಿಸಿದ್ದೀರಿ. ಆಗ ನನ್ನನ್ನು ಮರೆಯಬೇಡಿ.

*　　*

ಮೇಲಿನ ಪತ್ರಕ್ಕೂ ತಿಂಗಳುಗಳು ಉರುಳಿದರೂ ಉತ್ತರದಸುಳಿವೇ ಇರಲಿಲ್ಲ. ಈ ವೇಳೆಗಾಗಲೆ ನಾನು ಹಿರಿಯಲೇಖಕನಾಗಿದ್ದೆ.

ಈವರೆಗೆ ಲೋಯರ್ ಸೆಕೆಂಡರಿಯಲ್ಲಿ ನಾಲ್ಕು ಸುತ್ತು ಹೊಡೆದಿದ್ದರಿಂದ ನನ್ನ ಮನೆಯವರು ನನ್ನ ಕೈಯಿಂದಲೇ ಶಾಲೆಗೆ ಮಣ್ಣು ಹಾಕಿಸಿದರು. ನನ್ನ ಊಟದ ಖರ್ಚನ್ನು ನಾನೇ ಹುಟ್ಟಿಸಿಕೊಳ್ಳದ ಹೊರತು ಅನ್ಯ ಮಾರ್ಗವಿಲ್ಲವಾಯಿತು.

ಈ ಸಂದರ್ಭದಲ್ಲಿ ಸಂಪಾದಕರನ್ನು ಕುರಿತು ಒಂದು ಪತ್ರ ಬರೆದೆ.

ಶ್ರೀಯವರಿಗೆ....

ನಮಸ್ಕಾರಗಳು

—ನನ್ನ ಈಗಿನ ಪರಿಸ್ಥಿತಿಯನ್ನು ಶೂಲಂಕುಶವಾಗಿ ವಿವರಿಸಿದ ಬಳಿಕ—ನಾನು ಈವರೆಗೆ ಕಳುಹಿಸಿದ್ದ 'ಸಾಹಿತ್ಯ ಸೃಷ್ಟಿ'ಗೆ ಉಪಯೋಗಿಸಿದ ಕಾಗದದ ಬೆಲೆ, ತಮ್ಮ ಅವಗಾಹನೆಗಾಗಿ ಲಗತ್ತಿಸಿದ ಅಂಚೆಯ ಚೀಟಿ, ಸ್ವೀಕೃತಾಸ್ವೀಕೃತಗಳನ್ನು ತಿಳಿಯಲು ತರುಮಿದ 'ರಿಪ್ಲೈ' ಕಾರ್ಡುಗಳು....ಇವುಗಳ ಮೊತ್ತವನ್ನು ದಯವಿಟ್ಟು ಈ ಬಡವನಿಗೆ ಕಳುಹಿಸಿ ಉಪಕರಿಸಬೇಕು. ಈ ಹಣದಿಂದ ನಾನೊಂದು ಚಿಲ್ಲರೆಅಂಗಡಿಯನ್ನು ಇಟ್ಟುಕೊಂಡು ಹೊಟ್ಟೆಯ ಖರ್ಚನ್ನು ಎತ್ತಬೇಕೆಂದು ನಿರ್ಧರಿಸಿದ್ದೇನೆ. ಸಾಧ್ಯವಾದಷ್ಟು ಜಾಗ್ರತೆ ಈ ಮೊಬಲಗನ್ನು 'ಮನಿಯಾರ್ಡರ್' ಮಾಡಿ ಉದ್ಧರಿಸಬೇಕು.

ನನ್ನ ಸಾಹಿತ್ಯವನ್ನು ರದ್ದಿಕಾಗದದವನಿಗೆ ನನ್ನ ಪರವಾಗಿ ಮಾರಿ ಬಂದ ಹಣದಲ್ಲಿ ಬೀಡಿ ಕಟ್ಟುಗಳನ್ನು ಪೇರಿಸಲು ಅನುಕೂಲವಾಗುವಂಥ ಒಂದು ಜಾಕಾಯಿ 'ಶೆಲ್ಫ'ನ್ನು ಕೊಂಡು ಕಳುಹಿಸಿ. ಇದರಿಂದ ತುಂಬಾ ಉಪಕಾರವಾಗುವುದು.

ನೀವು ಉದಾಸೀನ ಮಾಡಿದರೆ ಮನೆಯಲ್ಲಿ ನನಗೆ ಊಟವನ್ನು ತಪ್ಪಿಸುತ್ತಾರೆ. ನಿಮಗೆ ತೊಂದರೆ ಕೊಟ್ಟಿದ್ದಕ್ಕಾಗಿ....

ಇತಿ,

ನಿಮ್ಮವನೇ ಆದ....

* *

ಈ ಪತ್ರಕ್ಕಾದರೂ ಉತ್ತರ ಬಂದೇ ಬರುವುದೆಂದು ಅಂಚೆ ಕಟ್ಟೆಗೆ ಪಾರಾ ತಿರುಗಿದೆ. ನನ್ನ ಮುಖ ಕಂಡೊಡನೆ ಅಂಚೆಯವನು ಬೆಂಕಿಯಾಗಿ ಕಾಗದ ಬಂದಿದ್ದವರಿಗೂ ಮೊದಲು ಇಲ್ಲವೆಂದು ಘುಡುಘುಡಿಸಿ ಆಮೇಲೆ ಕೊಡುತ್ತಿದ್ದ.

ಹಾಗೂ ಹೀಗೂ ಅರ್ಧ ಪ್ರಯಾಣಕ್ಕೆ ರೈಲು ಛಾರ್ಜು ಹೊಂಚಿಕೊಂಡು—'ಹೇಗಿದ್ದರೂ ನಮ್ಮೂರಿಗೆ ಹಿಂತಿರುಗುವಾಗ ದುಡ್ಡು ಸಿಗುತ್ತೆ' ಎಂದು—ಹೊರಟುಬಿಟ್ಟೆ.

* *

ಕಛೇರಿ ವಿಳಾಸವನ್ನು ಹೇಳುತ್ತ, ಕಂಡಕಂಡವರನ್ನೆಲ್ಲಾ ಕೇಳುತ್ತ ಬೀದಿ ಬೀದಿ ಸುತ್ತಿದೆ. ಇಲ್ಲೂ ಸಹ ಅಂಚೆಯವನಿಗೆ ದುಂಬಾಲ ಬೀಳಬೇಕಾಯಿತು. ಕೊನೆಗೆ ಅವನ ಕೃಪೆಯಿಂದ ಆಫೀಸಿದ್ದ ಜಾಗ ತಿಳಿಯಿತು.

ಅದೊಂದು ಗಲ್ಲಿಯಲ್ಲಿತ್ತು. ಇಪ್ಪತ್ತನಾಲ್ಕು ಗಂಟೆಗಳೂ ಬಾಗಿಲು ಹಾಕಿರುತ್ತಿತ್ತು. ಸಂಪಾದಕರು ಯಾವಾಗ ಬರುತ್ತಾರೊ? ಯಾವಾಗ ಹೋಗುತ್ತಾರೊ? ಎಂಬುದು ಸುತ್ತಮುತ್ತಲಿನಲ್ಲಿ ಯಾರಿಗೂ ಗೊತ್ತಿರಲಿಲ್ಲ.

ಎರಡು ದಿನ ಅಲ್ಲಿಯೇ ಕಾವಲಿದ್ದು ಆಫೀಸಿನ ಬಾಗಿಲು ತೆಗೆದವರನ್ನು ಅನುಸರಿಸಿದೆ. ಒಳಗಡೆ ಒಂದೇ ಒಂದು ಕುರ್ಚಿಯಿತ್ತು. ಪ್ರವೇಶಿಸಿದವರು ಅಲ್ಲಿಯೇ ನೆಲದ ಮೇಲಿದ್ದ ಕಾಗದದಲ್ಲಿ, ಅರ್ಧ ಬರೆದು ಮುಗಿಸಿದ್ದುದನ್ನು ಪೂರ್ತಗೊಳಿಸುವುದರಲ್ಲಿ ತೊಡಗಿದರು.

ಕದವನ್ನು ಕಿರ್ ಗುಟ್ಟಿಸಿ, ಚಿಲಕವನ್ನು ಅಲುಗಾಡಿಸಿ ಅವರ ದೃಷ್ಟಿಯನ್ನು ಸೆಳೆದೆ. ನಮಸ್ಕಾರ ಮಾಡಿ ಅದೇ ಭಂಗಿಯಲ್ಲೇ ಹೊಸಲು ದಾಟಿದೆ.

"ನಾನು....ಊರಿನವನು ತಮಗೆ....ಗಳನ್ನು ಕಳುಹಿಸುತ್ತಿದ್ದವನು" ಎಂದು ಕೈಗಳನ್ನು ಉಜ್ಜಾಡಿದೆ.

ಅವರು ನನ್ನನ್ನು ತೀಕ್ಷ್ಣವಾಗಿನೋಡಿ "ಸಂಪಾದಕರು ಇಲ್ಲಿ ಬರುವುದಿಲ್ಲ. ಇದು ಸ್ಟೋರ್‌ರೂಂ, ಆಫೀಸಲ್ಲ." ಎಂದು ಹೇಳಿದರು.

"ಅಂದರೆ?" ಮೈಯೆಲ್ಲ ನಡುಗುತ್ತಿತ್ತು.

"ಇಲ್ಲಿ ಹಳೆಯ ಪ್ರತಿಗಳು ಮತ್ತು ಹಸ್ತ ಪ್ರತಿಗಳು ಮೊದಲಾದ ಕೆಲಸಕ್ಕೆ ಬಾರದ...."

"ಪತ್ರಿಕೆಯಲ್ಲಿ ಲೇಖನ ಕಳುಹಿಸಲು ಇದೇ ವಿಳಾಸ ಕೊಟ್ಟಿದೆಯಲ್ಲಾ!"

"ಹೌದು! ಬರಬಹುದಾದ ಬರಹಗಳೆಲ್ಲ ಇಲ್ಲಿಗೇ ಬಂದು ಬಿಡಲಿ" ಎಂದು ಈ ವಿಳಾಸವನ್ನು ಕೊಡಲಾಗಿದೆ. ಮುಖ್ಯ ಬರಹಗಾರರಿಗೆ ಮಾತ್ರ ಬೇರೆ ವಿಳಾಸವು ಕೊಡಲ್ಪಟ್ಟಿದೆ.

—ಅಷ್ಟರೊಳಗೆ ಆತ ಬರೆಯುತ್ತಿದ್ದ ಹಾಳೆಯ ಕಡೆ ತಿರುಗಿ ನೋಡಿದೆ.

**—"ಇಲ್ಲಿ ರದ್ದಿ ಕಾಗದ ದೊರೆಯುತ್ತದೆ"**

* *

ಅಂತೂ ನನ್ನಾಸೆ ಫಲಿಸಲಿಲ್ಲ.

# ಇಂಥವರಿಗೆ!

ಅನಂತ ಪ್ರತಿದಿನವೂ ಏಳೂವರೆ ಗಂಟೆಗೆ ಪ್ರಾಣ ದೇವರ ಗುಡಿಗೆ ಹೋಗಿ ಬರುವ 'ಮಾಮೂಲು' ಇಟ್ಟುಕೊಂಡಿದ್ದಾನೆ. ದೇವರ ದರ್ಶನ ಮಾಡಿ, ಕೈ ಮುಗಿದು, ವಿನೀತನಾಗಿ ಗರ್ಭಗುಡಿಯನ್ನು ಕೆಲವು ಸುತ್ತು ಹಾಕಿ, ಕೆನ್ನೆ ಬಡಿದುಕೊಂಡು ಇಷ್ಟದೈವವನ್ನು ಇಷ್ಟಾನುಸಾರ ಧ್ಯಾನಿಸುತ್ತಾನೆ. ಆಗ್ಗಾಗ್ಗೆ ಹೊಸ್ತಿಲಿನ ಮೇಲೆ ಎಳ್ಳು ಬತ್ತಿ ಹತ್ತಿಸಿಟ್ಟು, ಅದರ ಕಾಡಿಗೆಯನ್ನು ಹುಬ್ಬಿನ ನಡುವೆ ಲೇಪಿಸಿಕೊಳ್ಳುತ್ತಾನೆ.

"ಈ ಸಾರಿ ಪಾಸಾದರೆ, 'ಸ್ಕಾಲರ್ ಷಿಪ್' ದೊರೆತರೆ, ಸಾಲ ಸಿಕ್ಕಿದರೆ, 'ಇಂಟ್ರವ್ಯೂ' ದೊರಕಿದರೆ, 'ಡಿಯರ್ ನೆಸ್ ಅಲೋಯನ್ಸ್' ಬಂದರೆ, ವರದಕ್ಷಿಣೆ ಗಿಟ್ಟಿದರೆ, 'ಪ್ರೊಬೇಷನರಿ' ಸಿಕ್ಕಿದರೆ...."— ಇತ್ಯಾದಿ ಸಂದರ್ಭೋಚಿತ ಬೇಡಿಕೆಯನ್ನು ಮಂಡಿಸಿ—"ಎನಗೆ ಬೆಳ್ಳಿಯ ತೊಟ್ಟಿಲು, ಚಿನ್ನದ ಬಳೆ ಕೊಡಿಸುತ್ತೇನೆ. ಉತ್ಸವ ಮಾಡಿಸುತ್ತೇನೆ.—" ಎಂದು ತನ್ನ ಯೋಗ್ಯತಾನುಸಾರ ಪ್ರತಿಫಲವನ್ನು ನಿರ್ಧರಿಸಿ ಹರಕೆ ಕೊಡುತ್ತಾನೆ. ತನ್ನ ಪೂಜಾ ಸಾಮಗ್ರಿಗಳನ್ನು ಅರ್ಚಕರ ಸುಬರ್ದಿಗೆ ಕೊಟ್ಟು, ಅವರು ವಿನಿಯೋಗಿಸುತ್ತಾರೋ ಇಲ್ಲವೊ ನಿರೀಕ್ಷಿಸುತ್ತಾನೆ. ಕಾರಣವಿಷ್ಟೆ. ಕರ್ಪೂರಾದಿ ಸಾಮಗ್ರಿಗಳು ಗರ್ಭಗುಡಿಯ ಮೂಲೆ

ಯಲ್ಲಿ ಗಿರಾಕಿಗಳನ್ನು ಕಾಯುತ್ತ ಕುಳಿತುಕೊಳ್ಳುತ್ತದೆ ಎಂದು ಪುಕಾರಿತ್ತು.

ಮಂಗಳಾರತಿಯ ತಟ್ಟೆಗೆ 'ಟಣ್' ಎನ್ನಿಸಿದ ಕೂಡಲೆ ಅರ್ಚಕನು ಮುತುವರ್ಜಿಯನ್ನು ಮುಮ್ಮಡಿಸಿ ಸೊಂಟ ಬಗ್ಗಿಸಿ ತೀರ್ಥವನ್ನು ನೀಡುತ್ತಾನೆ. ಮನೆಯವರ ಯೋಗಕ್ಷೇಮವನ್ನು ವಿಚಾರಿಸುತ್ತಾನೆ. ಹೊರಡುವಾಗ 'ದಯಮಾಡಸ್ತೀರಾ, ನಮಸ್ಕಾರ' ಎಂದು ಕೈ ಜೋಡಿಸುತ್ತಾನೆ. 'ಟಣ್' ಎನ್ನಿಸದಿದ್ದವರ ಪಾಡಂತು ಆಸ್ತಿಕರೆಲ್ಲರಿಗೂ ತಿಳಿದ ವಿಚಾರ. ತೀರ್ಥ ಸಿಕ್ಕಿದರೆ ಸಿಕ್ಕಿತು, ಇಲ್ಲದಿದ್ದರೆ ಇಲ್ಲ. ದಕ್ಕಿದರೂ ಒಂದು ಹೋಳು ಕಾಯಿ ಕಮೀಷನ್. ಕೊನೆಗೆ ಹೊರಡುವಾಗ ಗಂಟೆ ಬಾರಿಸಿದರೂ, ಅರ್ಚಕನು ರೇಗಿಬಿಡಬಹುದು 'ಎಷ್ಟು ಸಾರೀ ಬಾರಿಸೋದು?' ಎಂದು.

ಅನಂತ ಈ ರೀತಿಯ ಸತ್ ಸನ್ನಿವೇಶಗಳಿಗೆ ಎಡೆಗೊಡದೆ ದೇವಸ್ಥಾನದ ಹೊರಬಾಗಿಲನ್ನು ದಾಟುತ್ತಾನೆ. ಅಲ್ಲಿಂದ ಹತ್ತಾರು ಗಜಗಳವರೆಗೂ ಬಹಳ ಶ್ರಮವಹಿಸಿ ಹೊರಬರುತ್ತಾನೆ—ಆ ಶಬ್ದಸ್ತೋಮ ಅವನ ಕಿವಿಯನ್ನು ಕೊರೆಯುತ್ತದೆ.

'ಸಾಮಿ, ಎರಡು ಕಣ್ಣೂ ಇಲ್ಲ, ಬಗವಂತಾ! ನೀವೇ ತಂದೆ, ನೀವೇ ತಾಯಿ, ನೀವೇ ದೇವರು' ಎಂದು ಕುರುಡನೊಬ್ಬ ಅನಂತನ ಹೆಜ್ಜೆಯ ಸದ್ದನ್ನು ಆಲಿಸಿ ಅವನೆಡೆಗೆ ಕೈಯೊಡ್ಡುತ್ತಾನೆ. ತನ್ನ ಕುರುಡು ಕಣ್ಣುಗಳಿಂದಲೇ ನೋಡಲು ಪ್ರಯತ್ನಿಸುವುದರಿಂದಾಗಿ ಅವನ ಕಣ್ಣುಗಳಲ್ಲಿ ನೀರು ಸುರಿಯುತ್ತಿರುತ್ತದೆ.

ಬೂದು ಬೂದಾಗಿ ಕೊಳೆಯ ರೂಪವೆತ್ತಿ ನಿಂತ ತನ್ನ ಕರಿಯ ಮೈಯನ್ನು ಬಡಿದು ಪ್ರದರ್ಶಿಸುತ್ತ 'ಒಂದು ಕಾಸು ಕೊಡಿ ಸಾಮಿ, ಎರಡು ದಿನಗಳಿಂದ ಕವಳ ಇಲ್ಲ' ಎಂದು ಮತ್ತೊಬ್ಬ ಭಿಕಾರಿ ಅನಂತನನ್ನು ಎಡಬಿಡದೆ ಕಾಡುತ್ತಾನೆ.

'ಎದ್ದೇಳಿ ಆಲಿಲ್ಲ, ಮಗಾ ಸಾಯ್ತಾ ಇದೆ, ಏನಾರ ಸಹಾಯ ಮಾಡಿ ತಂದೆ!' ಎಂದು ಒಣಗಿಬತ್ತಿದ ರವಿಕೆರಹಿತ ಎದೆಯನ್ನು ಚಚ್ಚಿಕೊಳ್ಳುತ್ತ ಅಂಗಲಾಚುತ್ತಾಳೆ—ಆ ಅಸಹ್ಯ ರೂಪಿ ಮಗುವಿನ ತಾಯಿ.

ಚಪ್ಪಾಳೆ ತಟ್ಟಿಯೋ, ವಿಲಕ್ಷಣ ಸದ್ದು ಮಾಡಿಯೋ ಅವನ ಗಮನವನ್ನು ಸೆಳೆದು ತಮ್ಮ ಅಂಗಹೀನತೆಯನ್ನು ಪ್ರದರ್ಶಿಸಿ ಕಾಸು ಕೇಳುತ್ತಾರೆ ಮತ್ತೆ ಕೆಲವರು.

—ಸಾಲಾಗಿ ಕುಳಿತ ಈ ಹತ್ತಾರು ಜನರನ್ನು ಪ್ರತಿ ದಿನವೂ ಅನಂತನು ಹಾಯ್ದು ಬರಬೇಕಾಗಿದೆ. ತನ್ನನ್ನು ಮುತ್ತುವ ಭಿಕಾರಿಗಳ ತಂಡವನ್ನು ತಳ್ಳಿ, ನೂಕಿ, ಸಾಧ್ಯವಿದ್ದರೆ ಬುರುಡೆಗೊಂದು ಕುಕ್ಕಿ ಆತ ಹೊರ ಬಾಗಿಲನ್ನು ದಾಟುತ್ತಾನೆ.

"ಹೋಗ್ರೋ...ಹೋಗ್ರೋ ಕಾಸಂತೆ ಕಾಸು! ನಿಮ್ಮಪ್ಪ ಕೊಟ್ಟಿವನೇನೋ ಕಾಸು? ದಿನವೂ ಎಲ್ಲಿಂದ ತರೋಣ ಕಾಸು? ಎಷ್ಟು ಜನಕ್ಕೆ ಎಷ್ಟು ದಿನಾಂತ ಕೊಡೋದು....? ಹೂಂ, ನಡೀರಿ...."—ಎಂದು ಆ ದರಿದ್ರಾವೃತ ದೇವಸ್ಥಾನದಿಂದ ಹೊರಬೀಳುತ್ತಾನೆ.

* *

ತನ್ನ ಹಾಗೆಯೇ ಗುಡಿಗೆ ಬರುವ ಅಭ್ಯಾಸವುಳ್ಳ ಇನ್ನೊಬ್ಬನೂ ಆತನ ಗಮನಕ್ಕೆ ಬರುತ್ತಾನೆ. ಒಬ್ಬರನ್ನೊಬ್ಬರು ಪರಸ್ಪರ ನೋಡಿ ನಕ್ಕು ಗೆಳೆಯರಾಗುತ್ತಾರೆ. ಈ ಗೆಳೆಯನ ಹೆಸರು ದೇವಯ್ಯ.

"ನೋಡಿ. ನಮ್ಮ ಸಂಸ್ಥಾನದಲ್ಲಿ 'ಬೆಗ್ಗರೀ'ಗೆ ಬಹಳ ಪ್ರೋತ್ಸಾಹ ಸಿಕ್ಕಿಬಿಟ್ಟಿದೆ. ಮೈ ಕೈ ಗಟ್ಟಿಗಿರುವ ಧಾಂಡಿಗರೆಲ್ಲರೂ ಭಿಕ್ಷೆ ಬೇಡುವುದನ್ನೇ ಅಪೇಕ್ಷಿಸುತ್ತಾರೆ—ನಿರಾಯಾಸವಾಗಿ ಹೊಟ್ಟೆ ತುಂಬಿಸಿಕೊಳ್ಳಬಹುದೆಂದು. ಮೊನ್ನೆ ಒಬ್ಬ ಮುದುಕಿ ಸತ್ತಾಗ ಅವಳ ಹತ್ತಿರ ಒಂದು ಸಾವಿರದ ಇಪ್ಪತ್ತಮೂರು ರೂಪಾಯಿನಷ್ಟು ಮೂರು ಕಾಸಗಳಿದ್ದವಂತೆ. ಸಾವೇನೋ 'ಹೊಟ್ಟೆಗಿಲ್ಲ ಪಾಪ!' ಎಂದು ಕೊಡೋದು ಇವರು........"

ಅನಂತ ಇಷ್ಟಕ್ಕೇ ಬಿಡಲಿಲ್ಲ. ರಷ್ಯಾ, ಇಂಗ್ಲೆಂಡುಗಳಲ್ಲಿನ ಪದ್ಧತಿಗಳನ್ನು ಎತ್ತಿಕೊಂಡು, ರಾಜಕೀಯಕ್ಕೆ ಹಾರಿ, ವಿಶ್ವ ವಿಹಂಗಮ ವಿಹಾರ ಮಾಡಿದನು.' ಅಲ್ಲಿಗೂ ಇಲ್ಲಿಗೂ ಇರತಕ್ಕ ಸಾಮ್ಯ ವೈಷಮ್ಯ ಗಳನ್ನು ಉದಹರಿಸಿಕೊಂಡು ಸಣ್ಣ ಭಾಷಣವನ್ನೇ ಕೊಟ್ಟುಬಿಟ್ಟನು.

* *

ಬಸ್ಸಿಗೆ ಕಾಯುತ್ತ ನಿಂತಿದ್ದ ಅನಂತ. ಸಾಕಾಗಿ ಸಿಗರೇಟು ಹೊತ್ತಿಸಿದ.

"ನಮಸ್ಕಾರ."

ಹಿಂದಿನಿಂದ ಯಾರೋ ಕೂಗಿದರು. ಬೆಚ್ಚಿಬಿದ್ದು ಹಿಂತಿರುಗಿ ನೋಡಿದ. ಶುಭ್ರವಾದ ಇಸ್ತ್ರಿ ಹಾಕಿದ ಬಟ್ಟೆಯನ್ನು—ಸೂಟು, ಟೈ, ಇತ್ಯಾದಿ ಪರಿವಾರ ಸಮೇತವಾಗಿ—ಸುಂದರವಾಗಿ ಧರಿಸಿದ್ದ ವ್ಯಕ್ತಿ ಅನಂತನನ್ನು ಸಮೀಪಿಸಿದ. 'ಜಂಟಲ್ ಮನ್' ಎಂಬ ಭಾವನೆ ತಾನೇ ತಾನಾಗಿ ಮನಸ್ಸಿನಲ್ಲಿ ಉದಯಿಸುವಂತಹ ವ್ಯಕ್ತಿ ಅವನು.

"ಏನು?" ಅನಂತನೇ ಪ್ರಶ್ನೆ ಹಾಕಿದ.

"ತಮ್ಮಿಂದ ಸ್ವಲ್ಪ ಸಹಾಯವಾಗಬೇಕಾಗಿದೆ."

—ತನ್ನಿಂದ, ಇಂಥ ಸೂಟು ಬೂಟಿನ ಮನುಷ್ಯನಿಗೆ ಸಹಾಯವಾಗ ಬೇಕಾಗಿದೆ? ಅನಂತ ಉಬ್ಬಿಹೋದ. ಆ ಮನುಷ್ಯನಿಗೆ ಸಹಾಯವನ್ನು ನೀಡಲು ಉತ್ಸಾಹ ತೋರಿದ.

"ನನ್ನ ಊರು ಮದ್ರಾಸು ಸಾರ್........"

—ತನ್ನನ್ನು ಈ ಸಂಭಾವಿತರು 'ಸಾರ್' ಎಂದು ಸಂಭೋದಿಸುತ್ತಿದ್ದಾರೆ! ಅನಂತ ಹಿಗ್ಗಿಹೋದ.

"........ಬೆಂಗಳೂರಿಗೆ ಬಂದು ಮೂರು ದಿನಗಳಾಯಿತು. ಈಗ ಸ್ವಲ್ಪ ಹೊತ್ತಿಗೆ ಮುಂಚೆ ಮಾರ್ಕೆಟ್ಟಿನಲ್ಲಿ ನನ್ನ 'ಪರ್ಸ'ನ್ನು ಯಾರೋ 'ಪಿಕ್ ಪಾಕೆಟ್' ಮಾಡಿದರು........"

ಅಯ್ಯೋ ಪಾಪ! ಎಂಥವರಿಗೆ ಎಂಥ ತೊಂದರೆ!

"........ನಾನು ಮಧ್ಯಾಹ್ನ ಊರಿಗೆ ಹೋಗಬೇಕಾಗಿದೆ. ಟಿಕೆಟ್ ಕೊಳ್ಳಲು ದುಡ್ಡಿಲ್ಲ...."

ಸಹಜ! 'ಪರ್ಸ್' ಹೋದನಂತರ ದುಡ್ಡೆಲ್ಲಿ ಉಳಿಯುತ್ತದೆ?

"....ನೀವು ಏನಾದರೂ 'ಹೆಲ್ಪ್' ಮಾಡಬೇಕು ಸಾರ್." ಎಂದು ಹಲ್ಲು ಕಿರಿಯುತ್ತ ನಿಂತುಕೊಂಡ ಆ ಸಂಭಾವಿತ.

ಲುಂಗಿ ಸುತ್ತಿ, ಟೋಪಿ ಹಾಕಿರೋ ನನ್ನನ್ನು, ಸೂಟಿನ ಮನುಷ್ಯ ಕಾಸು ಕೇಳುವುದೆಂದರೇನು?—ಮನಸ್ಸಿನಲ್ಲಿಯೇ ಹೇಳಿಕೊಂಡ ಅನಂತ. ಅವನೆದೆಯಲ್ಲಿ ಏನೋ ಭಾವನೆ ತುಂಬಿ ಬಂದಿತು. ಜೇಬಿನಲ್ಲಿ ಕೈಯನ್ನು ಇಳಿಯಬಿಟ್ಟು ಎರಡು ಬೆರಳುಗಳಿಂದ ಒಂದು ಬಿಳಿಯನಾಣ್ಯವನ್ನು ಹೊರ ತೆಗೆದು ಅವನಿಗೆ ಕೊಟ್ಟನು.

ನಾಣ್ಯವು ಕೈಯಿಗೆ ಬೀಳುತ್ತಲೆ 'ಥ್ಯಾಕ್ಸ್' ಎಂದು ಉಸುರಿ, ಕೂಡಲೆ ಆತ ಮಿಂಚಿನಂತೆ ಮಾಯವಾದ.

ದೂರದಿಂದ ದೇವಯ್ಯ ಓಡಿ ಬಂದ. "ಅವನಿಗೇನಾದರೂ ದುಡ್ಡು ಕೊಟ್ರೇನ್ರಿ?" ಎಂದು ಅನಂತನನ್ನು ಪ್ರಶ್ನಿಸಿದ.

"ಹೂಂ....ಎಂಟಾಣೆ ಕೊಟ್ಟೆ. ಪಾಪ! 'ಪಾಕೆಟ್' ಕಳವಾಯಿತಂತೆ. ಮದ್ರಾಸಂತೆ ಆ ಪ್ರಾಣೀದು"

"ಹೋಗ್ರೀ, ಎಲ್ಲಾದರೂ. ನಿಮಗೂ ಅವನು ಟೋಪಿ ಹಾಕ್ದ. ಪ್ರತಿ ದಿನವೂ ಇದೇ ರೀತಿ 'ಪರ್ಸ್ ಕಳೆದುಹೋಯಿತು' ಎಂದು ಹೇಳಿ ತಿರುಗುತ್ತ ನಾಲ್ಕೈದು ರೂಪಾಯನ್ನು ಜೇಬಿಗೆ ತುಂಬಿಕೊಳ್ಳುತ್ತಾನೆ." ಎಂದ ದೇವಯ್ಯ.

ಇಷ್ಟರಲ್ಲಿ ಬಸ್ ಬಂದಿತು.

* *

ಕೆಲವು ಹಳೆಯ ಪುಸ್ತಕಗಳನ್ನು ಕಂಕುಳಲ್ಲಿ ಇರುಕಿಕೊಂಡು ಬಸ್ಸಿಗಾಗಿ ಕಾಯುತ್ತಿದ್ದ ಅನಂತ. ಬಸ್ ಬರುವುದು ನಿಧಾನವೆಂದು 'ಹಿಂದು'

ಪೇಪರನ್ನು ಬಿಚ್ಚಿ ಮುಖದ ಮುಂದೆ ಹಿಡಿದುಕೊಂಡು ಓದತೊಡಗಿದ.

ಇಷ್ಟರಲ್ಲಿ ಯಾರೋ ಸರಸರನೆ ಓಡಿ ಬಂದು ಅನಂತನ ಹತ್ತಿರಕ್ಕೆ ಬಂದರು. ಪೇಪರಿನೊಳಗೆ ಹುದುಗಿಕೊಂಡಿದ್ದ ಅನಂತನ ಮುಖವನ್ನು ನೋಡಿದೊಡನೆ ದಿಕ್ಕು ಬದಲಾಯಿಸಿ ಓಡಿಹೋದರು, ಗೋಡೆಗೆ ಹೊಡೆದರೆ ಹಿಂತಿರುಗುವ ರಬ್ಬರ್ ಚೆಂಡಿನಂತೆ.

"ಯಾರಿರಬಹುದು? ಎಲ್ಲಿಯೋ ನೋಡಿದ ಹಾಗಿದೆ!'' ಎನ್ನುತ್ತ 'ಹಿಂದೂ' ಪೇಪರಿನಿಂದ ದೃಷ್ಟಿಯನ್ನು ತೆಗೆದು ಸೂಕ್ಷ್ಮವಾಗಿ ಅವನ ಕಡೆಗೆ ನೋಡಿದ ಅನಂತ.

ದೂರದಲ್ಲಿ ಅವನು ಯಾರೊಡನೆಯೋ....ಏನೋ ಮಾತನಾಡಿದ. ಅವರು ಕೊಟ್ಟ ಬಿಳಿಯ ನಾಣ್ಯವೊಂದನ್ನು ತೆಗೆದುಕೊಂಡು ಅದೃಶ್ಯನಾದ.

'ದೇವಯ್ಯ ಹೇಳಿದ್ದು ನಿಜ.'—ಎಂದು ಅನಂತ ಉಸುರಿನ ಕೆಳಗೆ ಹೇಳಿಕೊಂಡ; ಕೋಪವೂ ಬಂದಿತು.

ಬಸ್ಸಿನಿಂದ ಮನೆಗೆ ಬರುವವರೆಗೂ ಒಂದೇಸಮನೆ ತಲೆಯಲ್ಲಿ ಗುಂಗೆಬ್ಬಿಸಿತು ಈ ವಿಚಾರ.

ಕಣ್ಣಿಲ್ಲದ ಪರದೇಶಿ....
ತಾಯಿಲ್ಲದ ಮಗು....
ಆಲಿಲ್ಲದ ತಾಯಿ....
ಕೂಳಿಲ್ಲದ ಭಿಕಾರಿ....

ಈ ಚಿತ್ರಗಳೆಲ್ಲವೂ ಅವನ ಮನಸ್ಸಿನ ತೆರೆಯಮೇಲೆ ಮಿಂಚಿದವು. ಅವರನ್ನು ಅನ್ಯಾಯವಾಗಿ ದೂಡಿಬಿಡುತ್ತೇವೆ. ಆದರೆ ಇಂಥವರಿಗೆ ಕೈಮೀರಿ ಸಹಾಯ ಮಾಡುತ್ತೇವೆ—ಎಂಬುದು ಅನಂತನಿಗೆ ಅರಿವಾಗಿ, ಮನಸ್ಸು ವ್ಯಥಿತವಾಯಿತು.

# ನೀರಾಗ್ರಹ !

ಟ್ರಣ್ ಟ್ರಣ್....ಟ್ರಣ್ ಟ್ರಣ್ !

ಮೂಲೆಯಲ್ಲಿನ ಮೇಜಿನ ಮೇಲಿದ್ದ ಫೋನು ಒಂದೇ ಸಮನೆ ಗಂಟೆ ಬಾರಿಸುತ್ತಿತ್ತು.

"ಇನ್ನೂ ಆಫೀಸಿನ ಫ್ಲೋರಗ್ಗಿಗೆ ಕಾಲು ತೀಡುವುದಕ್ಕಿಲ್ಲ. ಆಗಲೇ ಟ್ರಣ್ ಟ್ರಣ್‌ಗಳು! ಬೇಡಪ್ಪಾ ಈ ಮು....ಮಕ್ಕಳ ಕಾಟ! ಈ ಸಂಬಳಾನು ಸಾಕು, ಈ ಕೆಲಸಾನು ಸಾಕು. ಇಪ್ಪತ್ನಾಲಕ್ಕು ಗಂಟೇನೂ ಬೆಂಕಿ ಬೀಳ್ತಲೇ ಇರುತ್ತೆ. ಫೈರ್‌ಫೈಟರ್‌ಗೆ ಕಾಲಿಂಗು ಇದ್ದೇ ಇರುತ್ತೆ. ಜೊತೆಗೆ ಈ ಫೋನ್ ಬೇರೆ! ಇದನ್ನು ಕಂಡು ಹಿಡಿದವನ ವಂಶಾ........"

'ಹಲೋ....ಹಲೋಽಽ!'

"ಹೂಂ, ಹೌದು, ನಾನೇ ರಂಗಣ್ಣ. ಫೈರ್‌ಫೈಟರು ಡಿಪಾರ್ಟ್ಮೆಂಟೀನೇ, ಏನು ಹೇಳಿ?....ವಾರ್ಧಾ ಎಕ್ಸ್‌ಟೆನ್‌ಷನ್ನೇ? ನೇರವಾಗಿ ಹೋಗಿ ಮೊದಲು ಎಡಕ್ಕೂ ನಂತರ ಬಲಕ್ಕೂ ತಿರುಗಬೇಕೇ? ಎರಡನೆಯ ಗಲ್ಲಿ, ಮೊದಲನೆಯ ಮನೆ, ಮನೆಯ ಮುಂದೆ ನಲ್ಲಿ ಇದೆ—

ಅದೇಗುರುತೇ?...ಸರಿಸರಿ....ಹ್ಹ ಹ್ಹ...ಇಲ್ಲ....ಮರೆಯೋದಿಲ್ಲ....ತಡಾನೂ ಮಾಡೋದಿಲ್ಲ. ಈಗಲೆ, ನೀವು ಫೋನ್ ಕೆಳಗಿಡುವಷ್ಟರಲ್ಲೇ ಬರ್ತೇವೆ.'

"ಲೋ, ಹನ್ನೊಂದು ಗಂಟೇಲಿ ಎಂಥಾ ತೂಗಡಿಕೆನೋ ನಿನಗೆ. ಎದ್ದೇಳೋ, ಮಾತಾಡೋ. ನೀರಿನ ತೊಟ್ಟಿಯೊಳಗೆ ಮುಖ ಈಜಾಡಿಸಿ ಬಾ ಹೋಗು ಕತ್ತೆ!"

"Excuse me, ದಯವಿಟ್ಟು ಕ್ಷಮಿಸಿ. Please ತಮ್ಮನ್ನಲ್ಲ, ನಮ್ಮ ಆಫೀಸ್ ಜವಾನ ವೆಂಕಟನ್ನ! ಹ್ಹ ಹ್ಹ ಹ್ಹ! ಒಳ್ಳೇದು, ನಮಸ್ಕಾರ,....ಇಲ್ಲ....ಈಗಲೇ ಬಂದೆವು...."

—ಲಟ್ ಎಂದು 'ರಿಸೀವರ್' ಅನ್ನು ಎತ್ತಿ ಹಾಕಿದ ರಂಗಣ್ಣ.

ಕಾಕಿಯ ನಡು ಹಳೆಯ ಸೂಟಿನಲ್ಲಿ ತುರುಕಿದಂತೆ ಕಾಣುತ್ತಿತ್ತು, ರಂಗಣ್ಣನ ಹೊಟ್ಟೆ. ತಲೆಯಲ್ಲಿನ ಎಣ್ಣೆಯನ್ನೂ ಬೆವರನ್ನೂ ಕುಡಿದು ಅವನ ಕಾಕಿಯ 'ಹ್ಯಾಟು' ತೆಳುವಾಗಿ ಕೀಲೆಣ್ಣೆ ಸವರಿದಂತೆ ಕಾಣುತ್ತಿತ್ತು. ಅಶುದ್ಧ ತಾಮ್ರದಂತೆ ಹೊಳೆಯುವ ಕೂದಲಿಲ್ಲದ ಮುಂದಲೆಯನ್ನು ಯಾವಾಗಲೂ ಮುಚ್ಚಿಯೇ ಇರಬೇಕು ಆ ಹ್ಯಾಟು! ಹರಿದು ಹೋಗಿದ್ದ ಕಂದು ಬಣ್ಣದ ಅವನ 'ಬೂಟು'ಗಳಿಗೆ ಬಿಳಿಯ ದಾರದಿಂದ 'ಮೂಟೆ ಹೊಲಿಗೆ' ಹಾಕಿದೆ. ಮಣ್ಣು ಬಣ್ಣಕ್ಕೆ ತಿರುಗಿದ್ದ ಬಿಳಿಯ ಕರವಸ್ತ್ರ ಗಳಿಗೆಗೊಂದು ಬಾರಿ ಜೇಬಿನಿಂದ ಹೊರಗೆ ಇಣುಕಿ ಹಾಕಿ ರಂಗಣ್ಣನ ಮುಖದ ಮೇಲಿನ ಬೇಸಿಗೆ ಬೆವರನ್ನು 'ಶೇವ್' ಮಾಡುತ್ತಿತ್ತು.

"ಇನ್ನು ಫೈರ್‌ಫೈಟರ್ ತೆಗೆದು ಕೊಂಡು ಹೋಗಬೇಕಲ್ಲಪ್ಪಾ ವಾಥರ್ಾ ಎಕ್ಸ್‌ಟೆನ್‌ಷನ್‌ಗೆ?" ಎಂದು ಹಲ್ಲಿಲ್ಲದ– ಆದರೂ ಚಕ್ಕುಲಿಯನ್ನು ಅಗಿಯಬಲ್ಲ ರಂಗಣ್ಣನ ಬಾಯಿ ಗೊಣಗಿತು. ನಸ್ಯದ ಪಟ್ಟಿಯಿಂದ ಚಟಾಕಿನಷ್ಟು ನಸ್ಯ ತೆಗೆದು ಮೀಸೆಯಲ್ಲಿ ಎಲ್ಲಿಯೋ ಅಡಗಿ ಹೋಗಿದ್ದಂತಿದ್ದ 'ಬೋರ್ ಹೋಲ್' ಗಳೆರಡನ್ನೂ ತಡಕಿಕೊಂಡು, ಹುಡುಕಿಕೊಂಡು 'ಟ್ರ್ಯೋರ್, ಟ್ರ್ಯೋರ್' ಶಬ್ದದೊಂದಿಗೆ ನಸ್ಯದ ಸೇವನೆ

ಯಾಯಿತು. ಜಾಗ ಸಾಲದೆ ಈಚೆಯೋ ಉಳಿದ ನಸ್ಯವನ್ನು ಅಂಗೈ ಗುಡಿಸಿಹಾಕಿತು. ಮೇಲ್ಕಂಡ ವಸ್ತ್ರವೇ, ಮೂಗನ್ನು ಕೆಂಪಗೆ ಮಾಡಿತು.

ಕೂಡಲೆ "ಲೋ....ನಡೀರ್‍ರೊ....ಆಯ್ತೇನ್ರೊ ನೀರು ತುಂಬಿದ್ದು.... ಏನು ಮೈಗಳ್ಳರೋ...." ಎಂದು ಕೂಗಿದ ರಂಗಣ್ಣ.

* *

ಟಣ್....ಟಣ್....ಟಣ್!---ಫೈರ್‌ಫೈಟರಿನ ಗಂಟೆ ಗಲಾಟೆಯೆಬ್ಬಿಸುತ್ತಿತ್ತು.

"ಯಾಕಪ್ಪಾ, ಹನ್ನೆರಡು ಗಂಟೇಲಿ ಫೈರ್‌ಫೈಟರ್ ಹೋಗ್ತಾ ಇದೆ. ಎಲ್ಲಿಗೆ ಬಿದ್ದಿದೆಯಪ್ಪಾ ಬೆಂಕಿ! 'ಸಂಭವಾಮಿ ಪದೇ ಪದೆ' ಅಂತ ಬಂಬೂಬಜಾರಿಗೆ ಅಗ್ನಿ ಪುರುಷನ ಪುನರ್‌ದರ್ಶನವಾಯಿತೋ ಏನೋ!" ಎನ್ನುತ್ತಾ ಗೋಣೆತ್ತಿ ಸೋಡಾ ಗ್ಲಾಸಿನ ಕನ್ನಡಕದಲ್ಲಿ ದೃಷ್ಟಿಯನ್ನು ಕೇಂದ್ರೀಕರಿಸಿ ಒಬ್ಬ ಗೃಹಸ್ಥ ಮುಗಿಲಿನ ಕಡೆಗೆ ನೋಡಿದ, ಹೊಗೆ ಎಲ್ಲಿ ಮೇಲೇಳುತ್ತಿದೆ ಎಂದು.

ಟಣ್!

"ಪಕ್ಕಕ್ಕೆ ಹೋಗೋ....ಮಂಕು ಸಾಂಬ್ರಾಣಿ....ದಾರಿಯಲ್ಲಿ ದೆವ್ವದ ಹಾಗೆ ಏಕೆ ನಿಂತಿದ್ದೀ? ದಾರಿ ಬಿಡೋ....ದೂರ ಹೋಗೋ!---" ಬಿರುಸಿನ ಒರಟು ಧ್ವನಿ ಕೇಳಬಂದಿತು.

ಮರುಕ್ಷಣದಲ್ಲಿಯೆ "ಸ್-ಹಾ! ಹೋಯ್ತಪ್ಪಾ ಕೈ. ಹಾಳು ಡ್ರೈವರು ಬೋ....ಮಗ ಮೊಣಕೈನ ಹೊಡೆದುಕೊಂಡು ಹೋಗ್ತಾನಲ್ಲಾ. ತಿಂದು ಕೊಬ್ಬು ಬಂದೈತೇನೋ!" ಎಂದು ಏಟು ಬಿದ್ದ ಜಾಗವನ್ನು ಉಜ್ಜುತ್ತಾ 'ಥೂತ್! ಎಂಥ ಊರಿ!" ಎಂದು ಗೊಣಗಿಕೊಂಡ ಆ ಗೃಹಸ್ಥ.

ಟಣ್....ಟಣ್!

ಫೈರ್ ಫೈಟರು ಬಹಳ ಬಿರುಸಿನಿಂದ ಹೋಗುತ್ತಿತ್ತು.

* *

ಸುತ್ತಿದೆ! ಸುತ್ತಿದೆ!

'ಅಬ್ಬಾ! ಅವರು ಹೇಳಿದ ಬೀದೀನೆಲ್ಲಾ ಶೋಧಿಸಿದೆ. ಬೆಂಕಿಯ ಸುಳಿವೇ ಇಲ್ಲವಲ್ಲಾ! ತಡವಾದ್ರೆ ಪೂರ್ತಿ ಭಸ್ಮವಾಗುತ್ತೆ....ಆಮೇಲೆ ಡಿಪಾರ್ಟ್ಮೆಂಟಿಗೆ ಕಂಪ್ಲೇಂಟು! ಆ ಸಾಹೇಬ್ರೊ ನಮ್ಮಂಥ ಪುಡಿ ಗಣಂಗಳ ಮೇಲೇ ಜಬರ್‌ದಸ್ತು! ಬೆಂಕಿ ಹತ್ತಿರೋ ಜಾಗವೆಲ್ಲ ಹುಡುಕಿ ಹುಡುಕಿ ಬೆಂಕೀನೇ ಆಗಿದೆ ವೈ!....'

"ಹೋಲ್ಡಾನ್....ಹೋಲ್ಡಾನ್" ಎನ್ನುತ್ತಿದ್ದಾರೆ ಜನ.

"ಹಾಂ, ಇದೇನು ಸಿಟಿ ಬಸ್ಸು ಸರ್ವೀಸು ಕೆಟ್ಟು ಹೋಯಿತೆ. ಅಂಗೈ ತೋರಿಸಿದರೆ ನಿಲ್ಲೋಕೆ!" ಎಂದು ಕೋಪದಿಂದ ಕೂಗಿದ ರಂಗಣ್ಣ.

"..............."

"ಏ....ಏ....ಫೈರ್ ಫೈಟರನ್ನೂ ಅಡ್ಡ ಹಾಕಿ ನಿಲ್ಲಿಸಿದರಲ್ಲಯ್ಯಾ, ಇದನ್ನು ನಿಲ್ಲಿಸಬಾರ್ದು ಎಂದೂ ತಿಳಿಯೋಲ್ಲ ಈ ಜನರಿಗೆ!....ಏನು! ಎಕ್ಸ್‌ಟೆನ್‌ಷನ್ ಜನರೆಲ್ಲಾ ಇಲ್ಲೇ ತುಂಬಿರೋ ಹಾಗಿದೆ....ಇಲ್ಲೇನು ಕಾಂಗ್ರೆಸ್ ಮೀಟಿಂಗೇ? ಅದಕ್ಕೂ ಇಷ್ಟು ಜನ ಸೇರೋದಿಲ್ಲ....ಒಂದಾದರೂ ಗಾಂಧಿ ಟೋಪಿಯಿಲ್ಲ. ನಿಂತಿರೋರೆಲ್ಲಾ ಹಳೆಯ ಶರಟಿನ 'ಆಫ್ ಆರಂ'ನಲ್ಲಿರೋರು, ಸ್ಟಾಂಡರ್ಡ್ ದಟ್ಟಿ, ಬರೀ ತಲೇ, ಹೆಗಲು ಟವಲಿನಲ್ಲಿರೋರೆ!

ಮತ್ತೇತಕ್ಕೆ, ಇಲ್ಲಿ ಇಷ್ಟು ಜನ?

'ರಸ್ತೆಯಲ್ಲಿ ಸಾಲಾಗಿ ಮಿಲಿಟರಿ ಲಾರಿಗಳೇನಾದ್ರೂ ಹೋಗುತ್ತಿವೆಯೋ? ಇಲ್ಲ. ಪಕ್ಕದಲ್ಲಿ ಅಕ್ಕಿ ಸೌದೆ ವಗೈರೆ ಡಿಪೋ ಏನಾದರೂ ಇದೆಯೋ?---ಇಲ್ಲ. ಕೈಲಿ ಹಗ್ಗ ಬ್ಯಾಗುಗಳಿಲ್ಲ! ಮನೆ ಏನಾದ್ರೂ

ಖಾಲಿ ಇದೆಯೆ?---ಇಲ್ಲ. ಇದು ಬಸ್‌ಸ್ಟಾಂಡೇ? ಇಲ್ಲ. ಅವುಗಳಿಗಾಗಿದ್ರೆ ಹಂಡೆ, ತಪ್ಪಲೆ, ಕೊಳಗ ಇತ್ಯಾದಿಗಳೇಕೆ ಕೈಲಿವೆ? ಎಲ್ಲೊ ಬಿದ್ದಿರಬೇಕು ಬೆಂಕಿ, ನೀರೆರೆಚೋಕೆ ಮನೆಯ ನೀರಿನ ಪಾತ್ರೆಗಳನ್ನೊ ತಂದಿದ್ದಾರೆ........'

ಫೈರ್ ಫೈಟರು ನಿಲ್ಲುವುದೇ ತಡ, ಜನ ಸುಮ್ಮನೆ ಅದನ್ನು ಮುತ್ತಿ ನೀರು ತುಂಬಿದ್ದ ಕೆಂಪು ಪೀಪಾಯಿಯ ಕ್ಯಾನ್‌ವಾಸ್ ಸೊಂಡಿಲನ್ನು ತೆರೆದರು. ಹಂಡೆ, ಬಿಂದಿಗೆ, ಇತ್ಯಾದಿಗಳು ನೀರು ತುಂಬಿಕೊಂಡು ಸರ ಸರನೆ ಮನೆಗಳಿಗೋಡಿ ಖಾಲಿಯಾಗಿ ಮತ್ತೆ ಬಂದುವು.

''ಎಲ್ರೀ ಬೆಂಕಿ ಹತ್ತಿರೋ ಜಾಗ....ಎಕ್ಸಟೆನ್‌ಷನ್‌ನೆಲ್ಲಾ ಬಳಸಿಯಾಯ್ತಲ್ಲಾ!'' ಎಂದು ರಂಗಣ್ಣ ಹುಬ್ಬು ಗಂಟುಹಾಕಿದ.

ಜನರೆಲ್ಲಾ ಮಿಲಿಟರಿ ಸಿಪಾಯಿಗಳಂತೆ ಶಿಸ್ತಿನಿಂದ ಹೊಟ್ಟೆಯನ್ನು ತೋರಿಸಿ, ನಂತರ ಮೊದಲಿನಂತೆ ನೀರು ತುಂಬುವ ಆತುರದಲ್ಲಿಯೇ ತೊಡಗಿದರು.

''ಬೆಂಕಿ ಎಲ್ಲಿ ಎಂದರೆ ಹೊಟ್ಟೆಯನ್ನು ತೋರಿಸಿ ಉಪವ್ಯಾಖ್ಯಾನ ಮಾಡುತ್ತೀರಾ? ತಲೆ ಗಿಲೆ ಏನಾದ್ರೂ ತಿರುಗಿದೆಯೋ ನಿಮಗೆ! ಸುಮ್ಮ ಸುಮ್ಮನೆ ಫೈರ್‌ಫೈಟರ್‌ಗೆ ಫೋನು ಮಾಡಿ ಗೇಲಿ ಮಾಡ್ತಿದ್ದೀರಾ!'' ಎನ್ನುತ್ತಿದ್ದ ಹಾಗೆ ಒಂದು ಮಾಸಿದ ಪುಟ್ಟ ಪುಸ್ತಕ ಒಳಜೇಬಿನಿಂದ ಈಚೆಗೆ ಬಂದಿತು. ನೋಟು ಬುಕ್ಕಿನ ಮೇಲೆ ತುಂಡು ಪೆನ್‌ಸಿಲ್ ಬಿರುಸಾಗಿ ಕೋಳಿಯಂತೆ ಕುಣಿಯಿತು.

ನೀರು ತುಂಬುತ್ತಿದ್ದವರೆಲ್ಲಾ ಸಾಲಾಗಿ ನಿಂತರು. ಒಂದೇ ಕಂಠದಿಂದ ಹೇಳಿದರು.

''ನಿನ್ನೆ ಸಂಜೆಯಿಂದ ಒಂದೇ ಸಮನೆ 'ವಾಟರ್ ಸಪ್ಲೈ'ನವರಿಗೆ ನಲ್ಲಿಗಳಿಗೆ ನೀರು ಬಿಡಿ, ಮನೆಗಳಲ್ಲಿ ಕುಡಿಯುವುದಕ್ಕೆ ಒಂದು ತೊಟ್ಟು ನೀರಿಲ್ಲ ಅಂತ ಫೋನು ಮಾಡಿ ನೋಡಿದೆವು. ಕಾದು ಕಾದು

ಸಾಕಾಗುತ್ತಲೂ, ಫೋನ್‌ನ ಮಾತೂ ಸ್ಮಶಾನ ರೋಧನವಾಗುತ್ತಲೂ, ಮನೆಯ ಹೆಂಗಸರು 'ನೀವು ಗಂಡಸರಾಗಿ........' ಎಂದು ಸೋಟಿಯನ್ನು ಖಾರದ ಕೈಗಳಿಂದಲೇ ತಿವಿಯುತ್ತಲೂ ನನ್ನ ಹೊಟ್ಟೆಯಲ್ಲಿ ಬೆಂಕಿ ಬಿದ್ದಿತು. ಇದನ್ನು ಆರಿಸುವುದಕ್ಕೋಸ್ಕರ ಫೈರ್ ಫೈಟರು ಬಂದಿದೆ.''

ಎಡವುತ್ತ ವ್ಯಾಸಿನಲ್ಲಿ ಅಡಗಿ ಕುಳಿತ ರಂಗಣ್ಣ. ಹೆಚ್ಚು ಮಾತ ನಾಡಿದ್ರೆ ಪ್ರೆಸಿಡೆಂಟರ ಹತ್ತಿರ ಡೆಪ್ಯುಟೇಶನ್....

'ಸಪ್ಲೈ ಡಿಪಾರ್ಟ್ಮೆಂಟಿನವರಿಗೆ ಬಡಕೋತೀನಿ---ಬ್ಯಾಡ್ರೋ, ಜವಾನರನ್ನ ಬಿಡಬೇಡ್ರೋ ಫೋನ್ ಮಾತಿಗೆ. ಅವರಿಗೆ ಬುದ್ಧಿ ಇಲ್ಲ--- ಅಂತ. ಜವಾನರ ಮೇಲೆ ಆಫೀಸ್ ಬಿಟ್ಟು ಹಾಯಾಗಿ ನಿದ್ರೆ ಹೊಡೆ ಯೋದು---ಇಲ್ಲ ಒಂದು ವರಸೆ ಇಸ್ಪೇಟು ಕಲಸೋದು. ಆ ಜವಾನರಿಂ ದಾಗಿ ನಮಗೆಲ್ಲಾ ಇಂಥ ಪೀಕಲಾಟಕ್ಕಿಟ್ಟುಕೊಳ್ಳೋದು! ಸಾಕಪ್ಪಾ ಈ ಹಾಳು ಸಹವಾಸ!'

ಆಗ ತಾನೆ ಬರೆದಿದ್ದ ಹಾಳೆಯನ್ನು 'ಕಂಪ್ಲೇಂಟ್' ಪುಸ್ತಕದಿಂದ ಕಿತ್ತು ಚೂರು ಚೂರಾಗಿ ಹರಿದು ಗಾಳಿಗೆ ಹಾರಿಸಿದ ರಂಗಣ್ಣ.

ಫೈರ್ ಫೈಟರ್ ಹಿಂತಿರುಗಿತು---ಸದ್ದಿಲ್ಲದೆ!

# 'ಮಗು'ವಿನ ಡೈರಿ

"ಈಗ ತಾನೆ ತಂದಿಟ್ಟಿದ್ದೆ. ಆಗಲೇ ಮಂಗಳಮಾಯವಾಗಿದೆಯಲ್ಲ! ಇನ್ನು ನಾನೇನು ತಲೆ ಚಚ್ಚಿಕೊಳ್ಳಲೆ? ಎಲ್ಲಿಯಾದರೂ ದೇಶಾಂತರ ಹೊರಡೋದೇ ಸಲೀಸು" ಹುಚ್ಚು ಹಿಡಿದವನಂತೆ ಶಾಮಣ್ಣ ಕೂಗಾಡಿದ.

"ಯಾಕೆ ಹೀಗಾಡ್ತೀರಿ? ಕೊಂಚ ನಿಧಾನವಾಗಿ ಹುಡುಕಬಾರದೆ? ಎಲ್ಹೋಗುತ್ತೆ....."

"ನಿನ್ನ ತಲೆ. ಮನೆಯೆಲ್ಲ ಹುಡುಕಿದರೂ ಅದರ ಸುಳಿವೇ ಇಲ್ಲ. ಯಾವ ಸಂದುಗೊಂದುಗಳಲ್ಲೂ ಇಲ್ಲ. ಹಾಸಿಗೆ ಸುರುಳಿ, ಪಟದ ಹಿಂದೆ ಎಲ್ಲಾ ನೋಡಿದ್ದಾಯಿತು. 'ಡೈರಿ'ಯೇ ಪತ್ತೆಯಿಲ್ಲ. ನಾಳೆ ನಲವತ್ತೇಳನೆಯ ಇಸವಿ ಪ್ರಾರಂಭ...." ಎಂದು ಶಾಮಣ್ಣ ಬುಸುಗುಟ್ಟುತ್ತಿದ್ದ.

"ಹುಡುಗರೇನಾದರೂ ತೆಗೆದಿಟ್ಟಿರಬಹುದು ಕೇಳೋಣ ತಡೀರಿ." ಶಾರದೆಯ ಈ ಸಲಹೆಯನ್ನು ಮನ್ನಿಸಿ ಶಾಮಣ್ಣ ಹುಡುಗರನ್ನೆಲ್ಲಾ ಕಲೆ ಹಾಕಿದ—ಒಟ್ಟು ಆರು ಗಂಡು, ಎರಡು ಹೆಣ್ಣು. 'ಮಗು' ಉರುಫ್ ಶಿವರಾಂ, ವಿನಾ ಉಳಿದವರೆಲ್ಲರೂ ಸಿಕ್ಕಿದರು. 'ಅವನು ಯಾರನ್ನು

ಹೇಳಿ ಕೇಳಿ ಪೇಟೆಗೆ ಹೋದ?' ಎಂದು ರೇಗಾಡಿ ಅವರನ್ನೆಲ್ಲ ವಿಚಾರ ಮಾಡಿದ.

ಎಲ್ಲರೂ ಏಕಧ್ವನಿಯಲ್ಲಿ 'ನಂಗೊತ್ತಿಲ್ಲ' ಎಂದು ಇತಿಶ್ರೀ ಹಾಡಿದರು.

"ಯಾರೂ ತೆಗೆದುಕೊಳ್ಳದೆ ಎಲ್ಲಿ ಹೋಯಿತು? ಈ ಡೈರಿ ಮಾತ್ರ ಕದಿಯಲು ಕಳ್ಳರು ಬಂದಿದ್ದರೇ...."

"ಹೂಂ....'ಮಗೂ'ನು ಬರ್ಲಿ. ಅವನ್ನೊಂದು ಮಾತು ಕೇಳಿ ನಿಮಗೆಲ್ಲ ಮೆಣಸಿನ ಕಾಯಿ ಹೊಗೆ ಹಾಕಿ ಕುರ್ಚಿ ಕೂಡಿಸುತ್ತೀನೆ" ಎಂದು ಆರ್ಭಟಿಸಿದ.

ಈ ಆರ್ಭಟವನ್ನು ತಡೆಯಲಾರದೆ, ಶಾರಿ ಹೊರಗೆ ಬರ ಬೇಕಾಯಿತು.

"ಈ ರೀತಿ ಯದ್ವಾತದ್ವಾ ಆಡೋದು ಬಿಟ್ಟು ಇನ್ನೊಂದು ಡೈರಿ ತೆಗೆದುಕೊಂಡರಾಯಿತು. ಏನು ಮುಳುಗಿಹೋಗಿದ್ದು ಈಗ?"

ಶಾರಿ ಮುಖ ಸಿಂಡರಿಸಿದ್ದನ್ನು ಕಂಡು ಮುಂದಿನ ಪ್ರಮಾದಗಳಿಗೆ ಆಸ್ಪದ ಕೊಡದೆ ಶಾಮಣ್ಣ,

"ನೀನೊಬ್ಬಳು ಯಾವುದಕ್ಕೂ 'ನನ್ನದೆಲ್ಲಿಡಲಿ?' ಎಂದು ವಹಿಸಿ ಕೊಂಡು ಬಂದು ಬಿಡ್ತೀಯ." ಎಂದುಕೊಂಡು ಸುಮ್ಮನಾದ.

ಅಲ್ಲಿಗೆ ಆ 'ಡೈರಿ ಪ್ರಕರಣ' ಮುಕ್ತಾಯವಾಯಿತು. 'ಮಗು' ವನ್ನು ಕೇಳುವುದೂ ಸಹ ತಪ್ಪಿಹೋಯಿತು.

ಶಿವೂ ಡೈರಿ ಬರೆದದ್ದರ ಹಿನ್ನೆಲೆಯಿದು.

* *

'ಮಗು'ವಿನ ಡೈರಿ ಹಿರಿಯರಗಮನವನ್ನು ಸೆಳೆದದ್ದು ಶಾಮಣ್ಣನಿಗೆ, ತೀರ್ಥಹಳ್ಳಿಗೆ ವರ್ಗವಾದ ಮೂರು ತಿಂಗಳ ನಂತರ.

ಒಂದು ಪೀಪಿಗೋಸ್ಕರ ಆ ದಿನ ಶಿವೂನ ಪೆಟ್ಟಿಗೆ ಲೂಟಿಯಾಗುತ್ತಿತ್ತು. ಶಾಮಣ್ಣ ಎದ್ದು ಬಂದು ಲೂಟಿಯಲ್ಲಿ ನಿರತನಾಗಿದ್ದ ಪುಟ್ಟಿವಿಗೆ ಎರಡೇಟು ಬಿಗಿದು, ನೆಲದ ಮೇಲೆ ಹರಡಿದ್ದ ಸಾಮಾನುಗಳನ್ನ ಪೆಟ್ಟಿಗೆಯೊಳಕ್ಕೆ ತುಂಬುತ್ತಿದ್ದ.

ಜೂಲು ಜೂಲಾಗಿದ್ದ ಆ ನೋಟು ಬುಕ್ಕುಗಳು, ಸ್ವಯಂಕೃತ 'ಆಲ್ ಬಂ'—ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಚಿತ್ರಗಳು, ಬೆಂಕಿಯ ಪೆಟ್ಟಿ ಮೇಲಿನ ಬಣ್ಣದ ಲೇಬಲ್....ಇತ್ಯಾದಿಗಳಿಂದ ತಯಾರಿಸಲ್ಪಟ್ಟ 'ಆಲ್ ಬಂ' ಆದು—ಇವೆಲ್ಲವನ್ನು ಒಳಕ್ಕೆ ತುಂಬುವಾಗ, ತಾನು ಆರು ತಿಂಗಳ ಹಿಂದೆ ಕಳೆದುಕೊಂಡ ಡೈರಿ ಸಿಗಬೇಕೆ?

ಶಾಮಣ್ಣ ಡೈರಿಯನ್ನು ತೆಗೆದು ನೋಡಿದ. ಅದರಲ್ಲಿ 'ಬ್ರಹ್ಮ ಲಿಪಿ' ಕೆತ್ತಿತ್ತು. ಓದ ತೊಡಗಿದ.

* *

'....ಈ ದಿನ ಅಪ್ಪನ ಜೇಬಿನಿಂದ ಈ ಡೈರಿಯನ್ನು ಎಗರಿಸಿಬಿಟ್ಟೆ. ಇನ್ನು ಇದನ್ನು ಸಾಧ್ಯವಾದಷ್ಟು ಜೋಪಾನವಾಗಿಟ್ಟುಕೊಂಡು ಮನೆಯುವರ ದೃಷ್ಟಿಯಿಂದ ರಕ್ಷಿಸಬೇಕು.

ಇನ್ನೇನು ಮಾಡಲಿ? 'ಅಪ್ಪ, ನನಗೆ ಡೈರಿ ಕೊಡಿಸು!' ಎಂದು ಎಷ್ಟು ಕಾಡಿದರೂ ಕೊಡಿಸೋಲ್ಲ. ದೊಡ್ಡವರೆಲ್ಲ ಹೀಗೆ, ತಮಗೆ ಬೇಕಾದ ಸಾಮಾನು ಎಷ್ಟಾದರೂ ಬೆಲೆಯಾಗಲೀ, ತಂದುಬಿಡುತ್ತಾರೆ. ಹುಡುಗರಿಗೆ ಒಂದು ಡೈರಿ ಕೊಡಿಸೋಕೆ ಸತಾಯಿಸ್ತಾರೆ. "ಹೋಗೋ ಕತ್ತೇ, ಡೈರಿಯಂತೆ ಡೈರಿ....ಮಹಾ ಪ್ರೊಫೆಸರ್!" ಎಂದು ಕೋತಿಯಂತೆ ಮುಖ ಮಾಡಿಕೊಂಡು ಮೂತಿ ತಿವಿಯುತ್ತಾರೆ. ಈಗ ನೋಡಿ, ತನ್ನ ಡೈರಿ 'ಅಬೇಸ್' ಆದ ಕೂಡಲೇ ಅಪ್ಪ ಇನ್ನೊಂದು ತಂದುಬಿಟ್ಟ.

ನಮ್ಮ ಮೇಷ್ಟ್ರು ಹೇಳಿದರು: ಪಾಶ್ಚಿಮಾತ್ಯರಲ್ಲಿ ಚಿಕ್ಕಮಕ್ಕಳೆಲ್ಲಾ ಬಹಳ ಶ್ರದ್ಧೆಯಿಂದ ಡೈರಿ ಬರೆದಿಡುತ್ತಾರೆ, ಎಂದು. ಬೇರೆಯವರಿಗಿಂತ

ನಾವೇನು ಕಡಿಮೆ? ಎಂದುಕೊಂಡು, ನಾನೂ ಆರಂಭಿಸಿದ್ದೇನೆ ಡೈರಿ ಬರೆದಿಡುವುದಕ್ಕೆ.

* *

'ಅಪ್ಪ ಈ ದಿನ ಮಾಡಿದ ಕೆಲಸ ಸರಿಯೆನಿಸಲಿಲ್ಲ ನನಗೆ. ನನ್ನ ಹುಟ್ಟಿದ ತಾರೀಖನ್ನು ಒಂದು ವರ್ಷ ಮುಂದಕ್ಕೆ ಹಾಕಿ, ಎಲ್ಲರ ದೃಷ್ಟಿಯಲ್ಲೂ ನನ್ನನ್ನು ಒಂದು ವರ್ಷ ಚಿಕ್ಕವನನ್ನಾಗಿ ಮಾಡಿದ; ನನಗೆಷ್ಟು ಅವಮಾನ, ನೀವೇ ನೋಡಿ. ತಾನು ಕೊಟ್ಟಿರುವ ತಾರೀಖೇ ಸರಿಯೆಂದು ತೋರಿಸೋದಕ್ಕೆ 'ಕಳ್ಳ ಜಾತಕ' ಕೂಡ ಬರೆಸಿಕೊಂಡು ಬಂದು, ನಮ್ಮ ಸ್ಕೂಲಿನ ಹೆಡ್ ಮೇಸ್ಟ್ರಿಗೆ ತೋರಿಸಿ ಏನೇನೋ ಮಾಡಿದ.

ಸುಳ್ಯಾಕ್ರೀ ಹೇಳ್ಬೇಕು? ನ್ಯಾಯವಾಗಿ ನನಗೆ ಆರು ವರ್ಷ. ಐದೇ ವರ್ಷ ಅಂತ ಹೇಳಿಕೊಳ್ಳಲು ನನಗೆ ಖಂಡಿತ ನಾಚಿಕೆಯಾಗುತ್ತೆ.

* *

'ಈ ದಿನ ಸಂಜೆ ನಾನು ಸ್ಕೂಲಿನಿಂದ ಹಿಂತಿರುಗಿದಾಗ ನನ್ನ ಪೆಟ್ಟಿಗೆಯ ಮೇಲೆಯೇ ಅಪ್ಪ ಕೂತಿರಬೇಕೆ?

ಅದು ಹೋಗಲೀಂದ್ರೆ, ಅಮ್ಮನನ್ನು ತೊಡೆಯ ಮೇಲೆ ಕೂಡಿಸಿಕೊಂಡು ಮುತ್ತಿಡುತ್ತಿದ್ದ. ನನ್ನನ್ನು ನೋಡಿದ ಕೂಡಲೆ ಅಮ್ಮ ಗಾಬರಿಯಾಗಿ ಅಪ್ಪನಿಂದ ದೂರ ಸರಿದಳು. ಅವಳ ಬಿಳಿಯ ಕೆನ್ನೆಗಳು 'ಚೈನಾ ಮಿಠಾಯಿ'ಯಂತೆ ಕೆಂಪಾಗಿದ್ದುವು.

ನನಗೆ ಅರ್ಥವಾಗದಿದ್ದುದು ಎರಡೇ ಎರಡು ವಿಚಾರ. ನನ್ನನ್ನು ನೋಡಿ ಅಮ್ಮನಿಗೇಕೆ ಗಾಬರಿಯಾಯಿತು? ಅದಿರಲಿ, ಅಮ್ಮನ ಮುಖ ಹಾಗೇಕೆ ಕೆಂಪಾಯಿತು? ದಿನವೂ—ಅತ್ತಾಗ, ಮುನಿಸಿಕೊಂಡಾಗ, ಪೇಟೆಗೆ ಏನಾದರೂ ತರಲು ಕಳುಹಿಸಬೇಕಾದಾಗ—'ನನ್ನ ಚಿನ್ನ' ಎಂದು ನನಗೆ ಮುತ್ತಿಡುತ್ತಾಳೆ ಅಮ್ಮ. ಆಗ ಅವಳ ಕೆನ್ನೆಗಳು ಕೆಂಪಾಗುವುದೇ ಇಲ್ಲ!

* *

## ಮುಗುಳು ನಗೆ

'ಈ ದಿನ ನಾನು ರೂಢಿಯಿಲ್ಲದ ಕೆಲಸಕ್ಕೆ ಕೈಹಾಕಿ ಮುಖವೆಲ್ಲ, 'ಪ್ಲೆಸ್' 'ಮೈನಸ್' ಗುರ್ತುಗಳು ಬೀಳುವಂತೆ ಮಾಡಿಕೊಂಡೆ.

ನಮ್ಮಪ್ಪ ಮುಖಕ್ಷೌರ ಮಾಡಿಕೊಂಡು ಆ ಚೌರದ ಸಾಮಾನುಗಳನ್ನೆಲ್ಲಾ ಹಾಗೆಯೇ ಇಟ್ಟುಬಿಟ್ಟು ಸ್ನಾನಕ್ಕೆ ಹೋಗಿದ್ದ. ನನಗೂ ಮುಖಕ್ಷೌರ ಮಾಡಿಕೊಳ್ಳಬೇಕೆಂದು ಆಸೆಯಾಯಿತು.

ಮುಖಕ್ಕೆ ಸೋಪು ಹಚ್ಚತೊಡಗಿದೆ. ಸೋಪಿನ ನೊರೆಗಳು ಕಣ್ಣಿಗೆಲ್ಲಾ ಆವರಿಸಿ ಕಣ್ಣುಗಳೇ ಕಾಣದಂತಾಯಿತು. ಹಾಗೂ ಹೀಗೂ ಕಣ್ಣು ಬಿಡಿಸಿಕೊಂಡು ಕತ್ತಿಯನ್ನು ಕೈಯಲ್ಲಿ ತೆಗೆದುಕೊಂಡೆ. ಕೈಹೋದ ಕಡೆ ಕತ್ತಿಯನ್ನು ಎಳೆದೆ. ಹತ್ತಾರು ಸಾರಿ ಗಾಯವಾಗಿ ರಕ್ತ ಬರ ಹತ್ತಿತು. ಕ್ಷೌರವನ್ನು ನಿಲ್ಲಿಸಿಬಿಟ್ಟೆ.

ಸದ್ಯ ಯಾರ ಕಣ್ಣಿಗೂ ಬೀಳಲಿಲ್ಲ, ಈ ನನ್ನ ಮುಖಕ್ಷೌರ.

ಮುಖ ಇನ್ನೂ ಉರಿಯುತ್ತಿದೆ.

* *

ಈ ದಿನ ಶಾಲೆಗೆ ರಜಾ ಇತ್ತು. ನಾವೆಲ್ಲ ಮನೆಯಲ್ಲೇ ಆಡುತ್ತಿದ್ದಾಗ ಒಳಗಿನಿಂದ ಪುಟ್ಟಿ ಓಡಿಬಂದು "ಅಪ್ಪ ಅಮ್ಮನ ಎಂಜಲು ತಿಂದ!'' ಎಂಬು ಚಪ್ಪಾಳೆ ತಟ್ಟುತ್ತ ಕುಣಿದಳು. ''ಏನೇ ಅದು ?'' ಎಂದು ಕೇಳಿದೆವು ನಾವೆಲ್ಲ.

''ಅಮ್ಮ ಅಪ್ಪನಿಗೆ ನಾಲಿಗೆಯಿಂದ ತಾನು ಆಗಿದಿದ್ದ ಅಡಿಕೆಲೆ ಕೊಟ್ಟಳು.'' ಎಂದಳು.

''ಇಷ್ಟೆ ತಾನೆ, ನಾವು ಅಮ್ಮನೆಂಜಲು ತಿನ್ನೋದಿಲ್ಲವೆ ?" ಎಂದೆ, ನಾನು.

ನಿಮಗೇನನ್ನಿಸುತ್ತೆ ?

* *

'ನಮ್ಮಜ್ಜ ಹೇಳಿದ ಮಾತು ಕೇಳುವುದೇ ಇಲ್ಲ.

ದೇವರ ಪೂಜೆಯಂಥ ಪವಿತ್ರ ಕಾರ್ಯಕ್ಕೂ ಬೇರೆಯವರ ಮನೆಯ ಅಂಗಳದಲ್ಲಿ ಅರಳಿದ ಹೂಗಳನ್ನು ಕದ್ದು ಕೀಳಲು ಬೆಳಗಿನ ಹೊತ್ತು

ಹೋಗಿಬಿಡುತ್ತಾಳೆ. ಬೇಡ ಅಂತ ಅಪ್ಪ ಹೇಳಿದ್ದಾನೆ, ಅಮ್ಮ ಹೇಳಿದ್ದಾಳೆ, ನಾನೂ ಹೇಳಿದ್ದೀನಿ. ಆದರೂ ಅವಳು ಬಿಡಲೊಲ್ಲಳು ಈ ದುರಭ್ಯಾಸ.

ಈ ದಿನ ಅವಳು ಈ 'ಹೂಗಳ್ಳತನ'ಕ್ಕೆ ಹೋದಾಗ ಸಿಕ್ಕಿಬಿದ್ದು—ಬೇಡ, ಅವಳ ಪಜೀತಿ! ತಪ್ಪಿಸಿಕೊಂಡು ಬರುವ ಆತುರದಲ್ಲಿ ಗೋಡೆ ಹಾರೋಕೆ ಹೋಗಿ ಮಂಡಿ ಒಡೆದುಕೊಂಡು ಹಾಸಿಗೆಯಲ್ಲಿ ಮುದುರಿಕೊಂಡಿದ್ದಾಳೆ.

ಮುದುಕರೇ ಇಷ್ಟು! ತಮಗೆ ತಿಳಿಯೋಲ್ಲ. ಇನ್ನೊಬ್ಬರು ಹೇಳಿದರೆ ಕೇಳೋಲ್ಲ.

*　　*

'ಅಪ್ಪನಿಗೂ ಅಮ್ಮನಿಗೂ ಮೊನ್ನೆ ಜಗಳವಾಯಿತು.

ಜಗಳಕ್ಕೆ ಜಗಳವಾದರೂ, ಸ್ವಲ್ಪ ತಮಾಷೆಯಾಗಿತ್ತು. ನಮ್ಮ ಮನೆಯಲ್ಲಿ ಇದು ಮೊದಲನೆಯ ಜಗಳವಲ್ಲ. ಆದ್ದರಿಂದ ನಮಗೆ ಗಾಬರಿಯಾಗಲಿಲ್ಲ. ನಮ್ಮ ಅಪ್ಪನ ಸ್ವಭಾವ ಏನೂಂತ ತಿಳಿದಿದ್ದೀರಿ ನೀವು?—ಅಯ್ಯೊ! ನನ್ನ ಜೊತೆಗೂ ಜಗಳಕ್ಕೆ ಬರ್ತಾನೆ ಕಣ್ರೀ!

"ಹೂಂ. ನಾನೇ ಮತ್ತೆ? ಇನ್ನೇನು, ಬಿಟ್ಟ ಸಿಕ್ಕಿದ್ದೀನಿ ಗೋಳು ಹೊಯ್ಕೊಳ್ಳಿ."

"ಇಲ್ಲ—ನಾನು ಬಿಟ್ಟ ಸಿಕ್ಕಿದ್ದೇನೆ." ಎಂದ ನಮ್ಮಪ್ಪ.

"ಉಹುಂ—ನಾನು ಹಾಗೇ....ನನಗೆ ಇಷ್ಟವಿಲ್ಲ." ಇತ್ಯಾದಿ ಕೊಂಕುನುಡಿಗಳಿಂದ ಅಮ್ಮ ಸಾಕಾದಷ್ಟು ರೇಗಿಸಿದಳು. ನಮ್ಮಮ್ಮ ಏನು ಸಾಮಾನ್ಯ ಹೆಂಗಸು ಅಂತ ತಿಳಿಯಬೇಡಿ; ಆದರೆ ಜಗಳದಲ್ಲಿ ಅಪ್ಪನಿಗಿಂತ ಒಂದು ಕೈ ಕಡಿಮೆ, ಅಷ್ಟೆ.

ಕೊನೆಗೆ ಮಾತು ನಿಲ್ಲಿಸಿ, ಅಪ್ಪ ಹೆಗಲ ಮೇಲೆ ಟವಲ್ ಎಸೆದು

ಕೊಂಡು ಹೊರಗೆ ಹೋದ. ಊಟ—ತಿಂಡಿಯೆಲ್ಲಾ ಹೋಟೆಲಿನಲ್ಲಿ ಗಿಟ್ಟಿ ಸುತ್ತಿದ್ದ ಅಂತ ಕಾಣುತ್ತೆ; ಎರಡು ದಿನ ಮನೆಯಲ್ಲಿ ನೀರು ಕೂಡ ಕುಡಿಯಲಿಲ್ಲ.

ಆಗ ಅಮ್ಮ "ಅಯ್ಯೋ! ನಾನಿನ್ನೂ ಬದ್ಕಿದ್ದೀನಿ, ನಾನೇನಂದಿದ್ದು ಅಂತ ಹೀಗೆ ಮಾಡ್ತೀರಿ?" ಎಂದು ಕಣ್ಣಲ್ಲಿ ನೀರು ಹಾಕಿದಳು.

ಈಗ ತಾನೇ ರಾಜಿಯಾಯಿತು.

* *

'ಮಲೆನಾಡನ್ನು ಪ್ರಕೃತಿ ಸೌಂದರ್ಯದ ಬೀಡು....ಗೂಡು.... ತೌಡು ಎಂದು ಏನೇನೋ ಹೊಗಳುತ್ತಾರೆ ಅನೇಕರು. ಆದರೆ ನಾನು ಒಪ್ಪುವುದಿಲ್ಲ. ಅದು ಅಷ್ಟು ಒಳ್ಳೆಯ ಊರಾಗಿದ್ದರೆ, ಅಪ್ಪನನ್ನು ಅಲ್ಲಿಗೆ ವರ್ಗಾಯಿಸಿದಾಗ, ಏಕೆ ಅತ್ತು ಕರೆದು ಗೋಳಾಡಿದ? ಯಾರ ಯಾರ ಕಾಲುಗಳನ್ನೋ ಏಕೆ ಸೇವಿಸಬೇಕಾಗಿತ್ತು?

ಆದರೂ ವರ್ಗವಾಯಿತು. ಅಪ್ಪನಿಗೆ ಬೇಡವಾದಊರು ನನಗೂ....

* *

'ಈ ದಿನ ನಾವೆಲ್ಲ ತೀರ್ಥಹಳ್ಳಿಗೆ ಹೋಗುತ್ತೇವೆ. ಅಪ್ಪನಿಗೆ ಅಲ್ಲಿಗೆ ವರ್ಗವಾಗಿದೆ. ನನ್ನ ಕೆಲವು ಸ್ನೇಹಿತರನ್ನು ಬಿಟ್ಟುಹೋಗಲು ಮನಸ್ಸಿಗೆ ಹೇಗೋ ಆಗುತ್ತದೆ. ಆದರೇನು ಮಾಡೋದು? ಬೇರೆ ಊರಿಗೆ ಹೋಗುವುದರಿಂದ ನನ್ನ ಹಳೆಯ ಇತಿಹಾಸ—ಪಕ್ಕದ ಮನೆಯ ಪೇರಂಗಿ ಮರದಲ್ಲಿ ಹಣ್ಣು ಕೀಳುವಾಗ ಸಿಕ್ಕಿ ಬಿದ್ದದ್ದು—ಮತ್ತು ನನ್ನ ನಾಲ್ಕೈದು 'ಅಡ್ಡ ಹೆಸರು'ಗಳು ಪ್ರಚಾರದಲ್ಲಿರುವುದಿಲ್ಲ.

* *

'ವರ್ಗವಾದ ಊರನ್ನು ಮುಟ್ಟಿದೆವು.

ಕಾಲೆಲ್ಲ ಕೆಸರಾಗುವಂತಹ ಜೌಗು, ಹಾಳು—ಬೂಟ್ಸು ಚಪ್ಪಲಿ ಗಳೆಲ್ಲ ಹಾಳಾಗುತ್ತವೆ. ಬಟ್ಟೆಗಳೆಲ್ಲ ಬೇಗ ಬೇಗ ಮಾಸುತ್ತವೆ. ನಮ

ಗಂತೂ ಎರಡು ದಿನಗಳಲ್ಲಿಯೇ ಶೀತದಗಾಳಿಯಿಂದಾಗಿ ಮೂಗನ್ನು ನೆಗಡಿ ಲಗ್ಗೆ ಹತ್ತಿಬಿಟ್ಟು, ಅದು 'ವಾಷರ್' ಹೋದ ನಲ್ಲಿಯಂತಾಯಿತು.

ಇಲ್ಲಿಯ ರಸ್ತೆಗಳೆಲ್ಲ ಡೊಂಕು. ಟಾರಿನ ರಸ್ತೆಗಳು ಕಡಿಮೆ. ಇದರಿಂದಾಗಿ ನಾನು ಅರ್ಧ ಕಲಿತಿದ್ದ ಸೈಕಲ್ ಸವಾರಿಯನ್ನು ಸೈಕಲ್ಲಿನ ಹಿತ ದೃಷ್ಟಿಯಿಂದ ನಿಲ್ಲಿಸಬೇಕಾಯಿತು.

ದಟ್ಟವಾಗಿ ಬೆಳೆದ ಮರಗಿಡಗಳು ಮರಕೋತಿಯಾಟಕ್ಕೆ ಅನುಕೂಲವಾದರೂ, ಸೂರ್ಯನ ಬೆಳಕೇ ಕಡಿಮೆ. ಇಲ್ಲಿಯ ನದಿಗಳೂ ಅಷ್ಟೆ. ಈಜು ಕಲಿಯಲು ಅನುಕೂಲವಿಲ್ಲ. ಥೂ ! ನೋಡಿದರೆ ದಿಗಿಲಾಗುವಷ್ಟು ನೀರು........

* *

'ಅಮ್ಮ ಈ ದಿನ ನನಗೆ ತಲೆ ತಗ್ಗಾಗುವಂತೆ ಕುಕ್ಕಿ, 'ಕತ್ತೆ' ಎಂದು ಬೈಯ್ದಳು. ಆಗ ತಾನೆ ಮದುವೆ ಮನೆಯ ಎಣ್ಣೆಯ ತಿಂಡಿ, ಬಾಳೆಹಣ್ಣು ಇನ್ನು ಏನೇನೋ ತಿಂದು, ಮುಸುರೆ ಕೈಗಳಿಂದಲೇ ಅವಳ ಧರ್ಮಾವರದ ಸೀರೆಯ ನೆರಿಗೆಯನ್ನು ತಬ್ಬಿಕೊಂಡದ್ದಕ್ಕಾಗಿ ಈ ಏಟು. ನಾವೇನು ಬೇಕಾಗಿ ಈ ರೀತಿ ಮಾಡಲಿಲ್ಲ.

ಆ ಸೀರೆಯನ್ನು ಅಮ್ಮ ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಭಾವಿಸುತ್ತಾಳೆ. ಅದು ಅವಳ ಮದುವೆಯಲ್ಲಿ ಧಾರೆಗಾಗಿ ತಂದ ಸೀರೆಯಂತೆ. ಇದನ್ನು ಬೇರೆಯವರ ಮದುವೆಗಳಿಗೆ ಹೋಗುವಾಗ ಮಾತ್ರ ಒಂದೆರಡು ಗಂಟೆಗಳಕಾಲ ಉಟ್ಟುಕೊಂಡಿದ್ದು, ಹಾಗೇಯೇ ಬಿಚ್ಚಿ ಬ್ರಷ್ ಹೊಡೆದು, ಅಂಚಿನ ಸುಕ್ಕನ್ನು ತೀಡಿ ಮಡಿಚಿಡುತ್ತಾಳೆ. ಈ ಸೀರೆಯೇನಾದರೂ ಕೊಳೆಯಾದರೆ ಅಮ್ಮನಿಗೆ ಎಲ್ಲಿಲ್ಲದ ಕೋಪ ಬರೋದು ಖಂಡಿತ.

ಈಚೀಚೆಗೆ ಯಾರಾದರೂ ಕತ್ತೆ ಎಂದು ಬೈಯ್ದರೆ, ಕತ್ತೆಯ ಅಪ್ಪ ಕತ್ತೆ ಎಂದುಕೊಂಡು ನಾನೇ ಸಮಾಧಾನಪಟ್ಟುಕೊಳ್ಳುತ್ತೇನೆ.

'ಇಂದು ದೀಪಾವಳಿ.

ಈ ಸಾರಿ ಭಾವನನ್ನು ಮುಂದಿಟ್ಟುಕೊಂಡು ತನ್ನ ಸಹಜ ವೈಯ್ಯಾರದಿಂದ ಅಕ್ಕ ಬರಲೇ ಇಲ್ಲ. ನಾವೀಗ ಮಲೆನಾಡಿನಲ್ಲಿರುವುದರಿಂದ ಭಾವನ ವ್ಯೆ ಬೆದರಿ ಹೋಗಿ 'ನಾನು ಬರಲಾಗುವುದಿಲ್ಲ. ವಿಪರೀತ ಕೆಲಸ' ಎಂದು ನೆಪವ ಪತ್ರ ಬರೆದಿದ್ದಾನೆ. ಅಂದ ಮೇಲೆ ಅಕ್ಕ ಎಲ್ಲಿಂದ ಬಂದಾಳು !

ಇಲ್ಲಿ ಪಟಾಕಿಗೆ ತುಂಬಾ ಬೆಲೆ; ಅಲ್ಲದೆ ಆನೆ ಪಟಾಕಿ, ಬೆಳ್ಳುಳ್ಳಿ ಪಟಾಕಿ ಸಿಕ್ಕುವುದೇ ಇಲ್ಲ. ಮತಾಪಿನಲ್ಲಿ ಒಂದೇ ವಿಧ ಇದೆ. ಸುರ್ ಸುರ್‌ಬತ್ತಿ ಎಂದರೆ ಅಂಗಡಿಯುವನಿಗೆ ಗೊತ್ತೇಇಲ್ಲ. 'ಹೇಗಿರುತ್ತೆ ?' ಅಂತ ನನ್ನೇ ಕೇಳ್ತಾನೆ ಆ ಮಂಕ.

ಹೆಚ್ಚಿಗೆ ಬೆಲೆ ಕೊಟ್ಟು ತಂದದ್ದರಲ್ಲಿಯೂ ಬಹಳ ಹುಸಿ........

* *

'ಇಲ್ಲಿಯ ಸಾಹೇಬರು ನಮ್ಮ ತಂದೆಯುವರನ್ನು ಬಹಳ ಚೆನ್ನಾಗಿ ಕಾಣುತ್ತಾರಂತೆ. ಇದು ನಮ್ಮ ಆಫೀಸ್ ಜವಾನನ ಬಾತ್ಮಿ. ಯಾವುದಕ್ಕೂ ನಮ್ಮ ತಂದೆಯನ್ನು ಕೇಳಿಯೇ ಮುಂದಿನ ಕೆಲಸ. ಪಾಪ! ಸಾಹೇಬರು ಹೊಸಬರು, 'ರಿಕಾರ್ಡಿ'ನ ಅನುಭವವಿಲ್ಲ ಎಂದು ಜವಾನನಿಗೇ ಗೊತ್ತಾಗಿ ಹೋಗಿದೆ. ಆಫೀಸಿನಲ್ಲಿ ನಮ್ಮ ತಂದೆಯ ರೀತಿಯನ್ನು ಆಗಾಗ ವರ್ಣಿಸುತ್ತಾನೆ.

ನಮ್ಮ ತಂದೆ ಕೊಟ್ಟ ರಿಕಾರ್ಡುಗಳಿಗೆ 'ರುಜುವಿನಾಟ'ವಾಡುತ್ತ ಸಾಹೇಬರು ಮಗ್ನರಾಗಿರುತ್ತಾರಂತೆ. ಸೊಂಟವನ್ನು ಹದೆಯೇರಿಸಿದ ಬಿಲ್ಲಿನಂತೆ ಮಾಡಿಕೊಂಡು, ತಲೆಯ ಮೇಲಿನ ಸಿಂಬೆಯನ್ನು ಕಟ್ಟಿಕೊಳ್ಳುತ್ತಲೋ, ಕನ್ನಡಕವನ್ನು ಕೆದರಿಸುತ್ತಲೋ ನಮ್ಮಪ್ಪ ನಿಲ್ಲುತ್ತಾನಂತೆ.

* *

'ನಮ್ಮ ಅಪ್ಪನ ಕನ್ನಡಕವೂ ಒಂದು ವಿಚಿತ್ರ ವಸ್ತು!

ಅದು ಓಬೀರಾಯನಿಗೆ ಚಾಲೀಶ ಬಂದಾಗ ಉಪಯೋಗಿಸಿದ್ದಿರಬೇಕು, ಎಂದು ನನಗೆ ಯಾರೋ ಹೇಳಿದರು. ಎರಡು ನಿಕ್ಕಲ್ ಕಟ್ಟಿನಲ್ಲಿ ಸೋಡಾಗ್ಲಾಸಿನ ತಳದ ಬಿಲ್ಲೆಗಳನ್ನು ಬೆಸೆದಂತಿದೆ. ಅದರ ಒಂದೊಂದು ಕೊನೆಗೂ ಮೂರು ಮೊಳದ ದಾರವಿದೆ. ಈ ಸುಲೋಚನವನ್ನು ಮೂಗಿನ ಮೇಲೆ ಕೂರಿಸಿ, ದಾರದ ಕೈಯನ್ನು ಕಿವಿಯೊಂದಕ್ಕೆ ಹತ್ತು ಹನ್ನೆರಡು ಬಾರಿ ಪ್ರದಕ್ಷಿಣೆ ಮಾಡಿಸಿದರೆ, ಅದು ಬೀಳದಂತೆ ಕೂಡುವುದು.

ಕನ್ನಡಕ ಹಾಕಿದ ನಮ್ಮಪ್ಪನ ನೋಟ ಮೂರು ವಿಧ. ರಿಕಾರ್ಡು ಓದುವುದು, ಕನ್ನಡಕದ ಗಾಜುಗಳ ಮೂಲಕ. ಸಾಹೇಬರ ಮುಖ ದಿಟ್ಟಿಸುವಾಗ ಕನ್ನಡಕದ ಕೆಳಭಾಗವು ಮೂಗಿನ ನೇರಕ್ಕಿರುತ್ತದೆ. ಜವಾನರನ್ನು ಮಾತಾಡಿಸುವಾಗ ಮೇಲ್ಭಾಗ ಹುಬ್ಬಿನ ನೇರಕ್ಕಿರುತ್ತದೆ.

* *

'ಈ ದಿನ ಅಪ್ಪನಿಗೆ ಸಾಹೇಬರು ನಶ್ಯ ಏರಿಸಬಾರದು, ಅದರಿಂದ ನೇತ್ರರೋಗ ಬರುತ್ತೆ ಎಂದು ಉಪನ್ಯಾಸ ಕೊಟ್ಟರಂತೆ. ಸಾಹೇಬರ ಮುಂದೆ ನಮ್ಮ ತಂದೆ ಎಂದೂ ನಶ್ಯ ಹಾಕಿಲ್ಲ. ಆದರೆ ಅವನ 'ನಶ್ಯದ ವಸ್ತ್ರ' ಈ ಗುಟ್ಟನ್ನು ಸಾಹೇಬರಿಗೆ ಒದರಿತು.

ಜೇಬಿನ ಮೂಲೆಯಲ್ಲಿ ಅಡಗಿದ್ದ ಸೀಸದ ಕಡ್ಡಿಯನ್ನು ಹೊರಗೆಳೆಯುವಾಗ ಗಡಿಬಿಡಿಯಲ್ಲಿ ನಾಲ್ಕಾರು ಬಾರಿ ಈ 'ನಶ್ಯದ ಕಲರ್' ವಸ್ತ್ರ ಇಣಿಕು ಹಾಕಿತು. ಅದು ಹೋಗಲಿ, ಇಣುಕಿ ನೋಡಿ ಸುಮ್ಮನಾಗಬಾರದಿತ್ತೆ? ಪ್ರತಿ ಸಾರಿಯೂ ಒಂದೆರಡು ಚಿಟಿಕೆಯಷ್ಟು ವಾಸನೆಯಿಲ್ಲದ 'ಸೆಕೆಂಡ್ ಹ್ಯಾಂಡ್' ಪುಡಿಯನ್ನು ಜೇಬಿನಿಂದ ಹೊರಕ್ಕೆ ತಳ್ಳಿ ಸ್ವಸ್ಥಾನದಲ್ಲಿ ಮುದುರಿಕೊಳ್ಳುತ್ತಿತ್ತು.

ಇಷ್ಟು ದಿವಸ ಅಪ್ಪ ಮತ್ತು ಸಾಹೇಬರು ಒಂದೇ ಮೇಜಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಅಪ್ಪನ ಮೂಗನ್ನೇ ಅವರು ನೋಡಿರಲಿಲ್ಲ

ವಂತೆ. ಅದನ್ನು ಅವರೇ ಒಪ್ಪಿಕೊಂಡರಂತೆ. ಕಾರಣವಿಷ್ಟೆ; ಅಪ್ಪ ಯಾವಾಗಲೂ ತಲೆತಗ್ಗಿಸಿಕೊಂಡೇ ಮಾತನಾಡುವುದು ರೂಢಿ. ಇದರಿಂದ ಸಾಹೇಬರಿಗೆ ಎಂದೂ ಮೂಗುಕೊಟ್ಟು ಮಾತನಾಡಿರಲಿಲ್ಲ.

ಅಪ್ಪನ ಗೌರವರ್ಣದ ಕುಂಬಳಕಾಯಿ ಮುಖಕ್ಕೆ ಈ ಮೂಗು ಹಣ್ಣಾದ ಟೊಮಾಟೊವನ್ನು ತಗುಲಿಸಿದಂತಿದೆ.

ಅಪ್ಪನಿಗೆ 'ನಶ್ಯ ಬಿಡಿ' ಎಂದು ಹೇಳಿದವರು ಎಷ್ಟೋ ಜನ.

ಆದರೂ ಅಪ್ಪ 'ಜಪ್ಪಯ್ಯ' ಎನ್ನಲಿಲ್ಲ.

* *

'ಇಲ್ಲಿ ಬೇಟೆಗೆ ಹೋಗುವುದು ರೂಢಿಯಲ್ಲಿದೆ. ನಮ್ಮ ಅಪ್ಪನ ಸಾಹೇಬರೂ ಸಹ ಮಲೆನಾಡಿನವರಂತೆ ಬೇಟೆ ಪ್ರಿಯರಂತೆ.

''ಬನ್ನಿರೀ ಶಾಮಣ್ಣ, ನಾಳೆ ಬೇಟೆಗೆ ಹೋಗೋಣ.'' ಎಂದು ಸಾಹೇಬರು ಅಪ್ಪಣೆ ಕೊಡಿಸಿದಾಗ, ರೂಢಿಯ ಉತ್ತರದಂತೆ ನಮ್ಮ ಅಪ್ಪ,

''ಹೂಂ—ಆಗಲಿ'' ಎಂದು ಬಿಟ್ಟನಂತೆ.

ಆಮೇಲೆ ಅದರ ಅರ್ಥ ತಿಳಿದು ನಡುಗಿದನಂತೆ. ಹೋಗುವಂತಿಲ್ಲ, ಬಿಡುವಂತಿಲ್ಲ ಆಫೀಸರುಗಳ ಸಹವಾಸ. ಹುಟ್ಟಿದಂದಿನಿಂದಲೂ ಕೋವಿಯನ್ನೇ ಮುಟ್ಟದಿದ್ದವನನ್ನು ಬೇಟೆಗೆ ಕರೆದರೆ....!

ಸಾಹೇಬರು ಜವಾನನೊಂದಿಗೆ ನಾಳೆ ಸಂಜೆ ಆರು ಗಂಟೆಗೆ ಬರಬೇಕೆಂದು ಅಪ್ಪನಿಗಾಗಿ ಒಂದು ಕೋವಿಯನ್ನು ಕಳುಹಿಸಿದರು. ಅದನ್ನು ನೋಡಿ ಅಪ್ಪ ಏಳು ಸಾರಿ ನಿಟ್ಟುಸಿರು ಬಿಟ್ಟ. ಅಂಗೈ ಅಂಗಾಲುಗಳಲ್ಲಿ ಬೆವರು 'ಕೋಡಿ' ಬಿದ್ದುದನ್ನು ನಾನೇ ಕಣ್ಣಾರೆ ನೋಡಿದೆ.

'ಈ ದಿನ ಅಪ್ಪ ಬೇಟೆಗೆ ಹೋಗಬೇಕಾಗಿದೆ. ಹೊತ್ತು ಹೋದಂತೆಲ್ಲಾ ನಡುಕ ಹೆಚ್ಚಾಗುತ್ತಿತ್ತು. ನಮ್ಮಪ್ಪನಿಗೆ ಊಟಕ್ಕೆ ಎಲ್ಲರನ್ನೂ

ಜೊತೆಗೆ ಕೂಡಿಸಿಕೊಂಡು, 'ಬದುಕಿ ಬಂದರೆ ಪುನಃ ಊಟ' ಎಂದು ಕಣ್ಣೀರುದುರಿಸಿದ. ಅಮ್ಮನೂ ಕೂಡ ಎಷ್ಟೋ ಸಮಾಧಾನ ಹೇಳಿದಳು. ಊಟದ ಶಾಸ್ತ್ರ ಮುಗಿಸಿದ.

ಸಂಜೆ ಐದು ಗಂಟೆಗೆ ಒಲ್ಲದ ಮನಸ್ಸಿನಲ್ಲಿ ಕಾಫಿ ಕುಡಿದು ಕೋವಿಯನ್ನು ಎರಡು ಕೈಗಳಲ್ಲಿಯೂ ಮಗುವನ್ನೆತ್ತಿಕೊಳ್ಳುವಂತೆ—ಪಾಪ! ರೂಢಿ—ಎತ್ತಿಕೊಂಡ. ನಡುಗುವ ತೊಡೆ, ಅದುರುವ ಕೋವಿಯೊಂದಿಗೆ ಸಾಹೇಬರ ಮನೆಯ ಕಡೆಗೆ ನಡೆಯತೊಡಗಿದ.

* *

'ಬೇಟೆಯಿಂದ ಹಿಂತಿರುಗಿ ಬಂದಾಗ ಅಪ್ಪನ ಮುಖದಲ್ಲಿ ಗೆಲುವಿನ ಹೆಮ್ಮೆಯಿಲ್ಲದಿದ್ದರೂ, ಬಿಡುಗಡೆಯ ಕಳೆಯಿತ್ತು. ಬೇಟೆಯ ಬಗ್ಗೆ ಮನೆಯಲ್ಲಿ ಯಾರೂ ತುಟಿಪಿಟ್ಟೆನ್ನಲಿಲ್ಲ. ಆಫೀಸಿನ ಜವಾನ ಮಾತ್ರ ನನ್ನೊಂದಿಗೆ ಗುಪ್ತವಾಗಿ, ರಾಯರನ್ನು ಎಲ್ಲರೂ "ಏಳು ತಿಂಗಳಿಗೆ ಹುಟ್ಟಿದವ" ಎಂದು ಹಾಸ್ಯ ಮಾಡಿದ್ದನ್ನು ತಿಳಿಸಿದ.

ಸಾಹೇಬರು ಅಪ್ಪನ 'ಪುಕ್ಕಲುತನ'ವನ್ನು ಅರಿತು, ಈ ಬಡ ಗುಮಾಸ್ತನ ಮೇಲೆ ದಯೆ ತೋರಿ ಮತ್ತೆ ಈತನಿಗೆ 'ಬೇಟೆಯ ಗಾಬರಿ'ಯನ್ನು ಹುಟ್ಟಿಸಲಿಲ್ಲ.

* *

ತನ್ನ ಪುಕ್ಕಲುತನವನ್ನು ಚಿತ್ರಿಸಿದ್ದ ಆಡೈರಿಯನ್ನು ರಪ್ಪನೆ ಬಿಸಾಡಿದ ಶಾಮಣ್ಣ.

# ಮನೋರೋಗ

ಇದ್ದಕ್ಕಿದ್ದಂತೆ ನನಗೆ ಉಚ್ಚರಿಸಲಾಗದಂಥ ಕಾಯಿಲೆ ಬಂದೊದಗಿತು. ಮೈಕಟ್ಟು ಬಡಕಲಾಯಿತು. ಕೈಕಟ್ಟು ಸಣಕಲಾಯಿತು. ಕಣ್ಣುಗಳು ದಿನೇ ದಿನೇ ತಮ್ಮ ಗುಂಡಿಗಳನ್ನು ಸೇರಿಕೊಳ್ಳತೊಡಗಿದವು. ಕೆನ್ನೆಯ ಮೂಳೆಗಳು ಮುಖವನ್ನು ಪ್ರಸ್ಥಭೂಮಿಯಂತೆ ಹಳ್ಳತಿಟ್ಟು ಮಾಡತೊಡಗಿದವು. ಹನ್ನೆರಡು ಜೊತೆ ಪಕ್ಕೆಲಬುಗಳನ್ನೂ ಸ್ಪಷ್ಟವಾಗಿ ಬಿಡಿಬಿಡಿಯಾಗಿ ಮುಟ್ಟಿ ಎಣಿಸುವಂಥ ಬಡಕಾಯನಾದೆ. ಒಟ್ಟಿನಲ್ಲಿ ಹೇಳುವುದಾದರೆ ನಾನೊಂದು ಚರ್ಮ ಹೊಡೆಯಲು ಮರೆತ ಅಸ್ಥಿ ಪಂಜರವಾದೆ.

ಆದರೆ ಜೀರ್ಣಶಕ್ತಿ ಮಾತ್ರ ಕಡಿಮೆಯಾಗಲಿಲ್ಲ. ಏಕೋ? ಏನೋ? ಹೇಗೋ? ಇನ್ನೂ ನಾಲ್ಕು ಪಟ್ಟು ಹೆಚ್ಚಿತೆಂದೇ ಹೇಳಬಹುದು. ಈಗಿನ 'ಪಡಿತರ'ದ 'ಸ್ಟ್ಯಾಂಡರ್ಡ್' ಊಟ ನನಗೆ ಯಾವ ಮೂಲೆಗೂ ಸಾಲದಾಯಿತು. ನಮ್ಮ ಮನೆಯಲ್ಲಿ ಅಕ್ಕಿ ಸ್ಟಾಕ್ ಇದ್ದುದರಿಂದ ಯಾವ ಗಲಾಟೆಗೂ ಆಸ್ಪದವಾಗದೆ ಹೇಗೋ ತಳ್ಳಿಕೊಂಡು ಹೋಯಿತು.

ನನ್ನ ಗುಡಾಣದ ಹೊಟ್ಟೆಯ ಫೋಟೋ ಜಾಹಿರಾತಿನ ಜಗತ್ತಿನಲ್ಲಿ ಅಮೂಲ್ಯವಾಯಿತು. 'ಲಿವರ್ ಕ್ಯೂರ್' 'ಕ್ರುಷನ್ ಸಾಲ್ಟ್' ಇತ್ಯಾದಿ

ಕಂಪೆನಿಯವರು ದಮ್ಮಯ್ಯ ಎಂದು ನನ್ನ ಗಜೋದರದ ಫೋಟೋವನ್ನು ಪ್ರತಿಫಲ ಮೊದಲು ಕೊಟ್ಟು ತೆಗೆದುಕೊಳ್ಳುತ್ತಿದ್ದರು. 'ಈತನ ಹೊಟ್ಟೆ ನೋಡಿ....ಇದು ಮಾಯವಾಗಬೇಕಾದರೆ ನಮ್ಮ ಈ....ಸಿದ್ಧೌಷಧ. ಅನೇಕ ಭಾರಿ ಶ್ರೀಮಂತರ ಭಾರಿ ಹೊಟ್ಟೆಗಳು ಕರಗಿ ಮಾಯವಾಗಿವೆ' ಎಂದು ತಮ್ಮ ತಮ್ಮ ಔಷಧಿಗಳ ಮಾರಾಟಕ್ಕೆ ನನ್ನ ಗಜೋದರದ ಚಿತ್ರವನ್ನು ಉಪಯೋಗಿಸಿಕೊಳ್ಳುತ್ತಿದ್ದರು.

ೊ ೊ

ಮೊದಲು ಪ್ರಾರಂಭವಾದದ್ದು ನಮ್ಮಜ್ಜಿಯ ಚಿಕಿತ್ಸೆ. ಬೇಸರದ, ಅವಿವೇಕದ ಚಿಕಿತ್ಸೆಗಳಾದರೂ ಸುಮ್ಮನೆ ಬಾಯಿಮುಚ್ಚಿಕೊಂಡು ಮಾಡಿಸಿಕೊಳ್ಳಬೇಕಾಗಿತ್ತು.

'ತಡಿಯೋ....ಎಲ್ಲೋ ಹೆದರಿಕೊಂಡಿದ್ದೀಯೆ' ಎಂದು ಹೆದರಿಸಿದರು. 'ಏನಜ್ಜಿ, ಇಪ್ಪತ್ನಾಲ್ಕು ವರ್ಷ....ಮದುವೆಯಾಗಿದೆ.—ಹೆದರಿಕೊಂಡಿದ್ದಿನಿ ಅಂತ ಹೇಳುತ್ತೀ ಎಂದೆ.

'ನಿನಗೇನು ತಿಳಿಯುತ್ತೆ ಮಂಕೇ!' ಎಂದು ನನ್ನ ಮುಖ ಮುರಿದು ಬಾಯಿ ಮುಚ್ಚಿಸಿದರು. ತಮ್ಮ ಚಿಕಿತ್ಸೆಗಳಾದ 'ಬಿದ್ದ ಬೀಳು,' ನಿಂತ ನಿಲುವು' ಹಾಕಿದರು. ಮೆಣಸಿನ ಕಾಯಿ ನಿವಾಳಿಸಿ ಒಲೆಗೆ ಎಸೆದರು. ಪೊರಕೆ ಕಡ್ಡಿಯನ್ನು ನಿವಾಳಿಸಿ ಮೂಲೆಯಲ್ಲಿ ಹಚ್ಚಿಟ್ಟು ಚಟಪಟಗುಟ್ಟಿಸಿದರು. ಮೂರು ದಾರಿ ಕೂಡಿದ ಜಾಗದಲ್ಲಿ ಮೂರು ಹಿಡಿ ಮಣ್ಣು ನಿವಾಳಿಸಿ ಹೊಟ್ಟೆಗೆ ಸವರಿದರು. ಇಂಥ ಹತ್ತಾರು ಪ್ರಯೋಗಗಳಾಯಿತು. ನನಗೆ ನೆನಪಿಗೆ ಬಂದದ್ದು ಇವಿಷ್ಟೆ. ಮಿಕ್ಕವು ಮರೆತುಹೋಗಿದೆ; ಕೆಲವನ್ನು ಹೇಳಲು ನಾಚಿಕೆಯಾಗುತ್ತೆ.

ಅಜ್ಜಿಯ ಎಲ್ಲಾ ಪ್ರಯೋಗಗಳಿಗೂ ಜಗ್ಗಲಿಲ್ಲ ನನ್ನ ಕಾಯಿಲೆ. ನಮ್ಮ ತಾತನ ಸಮಕಾಲೀನರಾದ (ನಮ್ಮ ತಾತ ಉಪಯೋಗಿಸುತ್ತಿದ್ದ ಕೈ ಕೋಲನ್ನು ಅವರ ತಿಥಿಯ ದಿನ ಇವರಿಗೆ ಕೊಟ್ಟು ನಮಸ್ಕರಿಸಿದೆ.) ಬಿಡುವಿಲ್ಲದ ಭೀಮರಾಯರೂ ನನ್ನ ಖಾಯಿಲೆಯ ಬಗ್ಗೆ ಮುತುವರ್ಜಿ

ವಹಿಸಿದರು. ಅವರು ನಮ್ಮ ಮನೆಯುವರಿಗೆ ಹಿರಿಯ ಸ್ನೇಹಿತರೆಂದು ನಟಿಸುತ್ತಾರೆ.

ನನಗೆ ರೋಗ ಹಿಡಿದ ಸುದ್ದಿ ತಿಳಿದ ಕೂಡಲ್ಲೆ ನಮ್ಮ ಮನೆಗೆ ಹಾಜರಾದರು. ನನ್ನ ನಾಡಿ ಹಿಡಿದು, ನೆಲಬಡಿದು ನಶ್ಯ ಏರಿಸಿಕೊಂಡು, ಚಂಡಿಕೆಯನ್ನು ಬಿಚ್ಚಿ ಟಿಪ್ ಟಿಪ್ ಎಂದು ಎಲ್ಲರಿಗೂ ಬೇಸರವಾಗುವಷ್ಟು ಸಾರಿ ಕೊದಲು ಜಾಡಿಸಿಕೊಂಡು ಪುನಃ ಚಂಡಿಕೆಯನ್ನು ಕಟ್ಟಿಕೊಂಡರು. ತಾಂಬೂಲದ ರಂಗಿನಿಂದ ಮತ್ತವಾದ ತುಟಿಗಳನ್ನು ಬಿರುಕಿಸಿ ಒಂದು ಬಾರಿ ಆಕಳಿಸಿ, ಬಾಯಿನ ವಿಶ್ವರೂಪವನ್ನು ತೋರಿಸಿದರು. 'ಆ' ಎಂದು ಒಮ್ಮೆ ಆರ್ಭಟಿಸಿ 'ನಾನು ಹೇಳೋದು ಕೇಳಿ' ಎಂದು ಮಾತಿಗೆ ಮೊದಲಿಟ್ಟರು.

ಅದೇ ವೇಳೆಗೆ ತಲಾಂತರದಿಂದಲೂ ನಮ್ಮ ಮನೆಯ ಮಡದಿ ಮಕ್ಕಳಿಗೆ ಮದ್ದು ನುಂಗಿಸಿ ದುಡ್ಡು ನುಂಗುವ ಡಾಕ್ಟರು ಹಾಜರಾದರು.

'ಓಹೋ' ಎಂದು ನಮ್ಮ ತಂದೆಯುವರೂ ಡಾಕ್ಟರೂ ಏಕ ಕಾಲದಲ್ಲಿ ರಾಗವೆಳೆದರು. ನಮ್ಮ ತಂದೆಯುವರು ಬರಿಗೈನಿಂದಲೂ, ಡಾಕ್ಟರು 'ಸ್ಟೇಟಾಸ್ಕೋಪ್'ನಿಂದಲೂ ನಮಸ್ಕರಿಸಿದರು.

ವಿವರಗಳನ್ನು ನಮ್ಮ ತಂದೆಯುವರು ಕೊಡುತ್ತಿದ್ದಂತೆಯೆ, ನಮ್ಮ ತಾಯಿಯೂ, ಅಜ್ಜಿಯೂ, ರೋಗದ ವರ್ಣನೆಗೆ ನೆರವಾದರು.

ಎಲ್ಲಾ ವಿವರಗಳೂ ತಿಳಿದಮೇಲೆ ನಮ್ಮ ವೈದ್ಯರು 'ಹಾಗೋ! ಎಂದು ಹೇಳಿ ತಮ್ಮ ಚರ್ಮದ ಚೀಲವನ್ನು ಬಿ. ಭೀಮರಾಯರ ಕಡೆಗೆ ನೀಡಿದರು. ಅವರಂತು ವಿದ್ಯುತ್ ಶಾಖ ಹೊಡೆದವರಂತೆ ಎಗರಿ, ಒಂದು ಮೊಳ ಹಿಂದಕ್ಕೆ ಸಿಡಿದರು. ಇದನ್ನು ನೋಡಿ ನಮ್ಮ 'ವಂಶ ವೈದ್ಯ'ರು ಆ ಚರ್ಮದ ಚೀಲವನ್ನು ಮೇಜಿನ ಮೇಲಿಟ್ಟು 'ಸ್ಟೇಟಾಸ್ಕೋಪ್' ವರಸೆಯಾಡುತ್ತ (ಕತ್ತಿಯ ವರಸೆಯೋಪಾಧಿಯಲ್ಲಿ) ಬಂದರು.

ನನ್ನದು ಯಾರೇನುಮಾಡಿದರೂ ಸುಮ್ಮನಿರುವ ಪ್ರಕೃತಿಯೆಂದು

ಡಾಕ್ಟರಿಗೆ ಯಾರು ಹೇಳಿದರೋ ತಿಳಿಯದು. ಅಂತು ನನ್ನ ಮೈಮೇಲೆ ಕೈ ಮಾಡಿಯೇ ಬಿಟ್ಟರು.

ನನ್ನ ನಾಲಿಗೆ ಎಳೆದು, ಎದೆ ಬಡಿದು, ಬೆನ್ನು ಗುದ್ದಿ, ಸೊಂಟವ ಲ್ಲಾಡಿಸಿ ಕಣ್ಣು ಹಿಂಜಿ ನೋಡಿದರು. 'ಸ್ಟೆಟಾ ಸ್ಕೋಪಿ'ನಿಂದ ಬೆನ್ನು, ಎದೆಗಳನ್ನೆಲ್ಲಾ ತಿವಿದು, 'ಉಷ್ಣಮಾಪಕ'ವನ್ನು ಬಾಯಿಗೆ ತುರುಕಿ, 'ಹಾಗೇ ಇಟ್ಟುಕೋ ಬೀಳಿಸಬೇಡ' ಎಂದು ಹೆದರಿಸಿ ಪಜೀತಿ ಏಬ್ಬಿಸಿ ದರು. ಗದ್ದವನ್ನು ಹಿಡಿದು ಸಿಕ್ಕಾಪಟ್ಟೆ ಮುಖವನ್ನು ತಿರುಗಿಸಿದರು. ಕೈಲಿದ್ದ 'ಟಾರ್ಚ್'ನ್ನು ಹಚ್ಚಿ, ಕಣ್ಣು, ಕಿವಿ-ಮೂಗುಗಳಿಗೆಲ್ಲಾ ಬೆಳಕು ಬಿಟ್ಟರು.

ಕೊನೆಗೆ ತಮ್ಮ ಇಭ್ಭಾಗವಾಗಿದ್ದ ಫ್ರೆಂಚ್ ಕಟ್ ಬೆಳ್ಳಿಯ ಮೀಸೆ ಯನ್ನು ಕುಣಿದಾಡಿಸುತ್ತ ನಕ್ಕರು.

'ಏನು ಡಾಕ್ಟರೇ !' ಎಂದು ಭಯ ಕುತೂಹಲಗಳ ಬೆರಕೆ ಧ್ವನಿ ಯಲ್ಲಿ ನಮ್ಮ ತಂದೆ, ತಾಯಿ, ಅಜ್ಜಿ ಎಲ್ಲರೂ ಏಕಕಾಲದಲ್ಲಿ ಕೇಳಿ, ಉತ್ತರಕ್ಕಾಗಿ ಹಾತೊರೆದರು.

ನಮ್ಮ ತಂದೆಯವರನ್ನು ಮಾತ್ರ ನಮ್ಮ ವೈದ್ಯರು 'ಇಲ್ಲಿ ಬನ್ನಿ ಕೊಂಚ' ಎಂದು ಹೊರಗೆ ಕರೆದುಕೊಂಡುಹೋಗಿ 'ಹುಡುಗನಿಗೆ ಯಾವ ಕಾಯಿಲೆಯ ಲಕ್ಷಣವೂ ಇಲ್ಲ. ಏನೋ ಕೊಂಚ ಮನೋರೋಗವಿದೆ ಎಂದು ಕಾಣುತ್ತೆ. ಅದು ಯಾವುದು ಎಂದು ಪತ್ತೆ ಹಚ್ಚಿ, ಚಿಕಿತ್ಸೆಗಾ ರಂಭಿಸಬೇಕು' ಎಂದರು.

ಅವರ ಹಿಂದೆಯೇ ಹೋಗಿದ್ದ ಬಿ. ಭೀಮರಾಯರು ಅವರು ಮಾತು ನಿಲ್ಲಿಸುವ ಮೊದಲೇ 'ಮನೋರೋಗಕ್ಕೆ ಮದ್ದಿಲ್ಲ. ಚಿಂತೆಯೇ ಚಿಂತೆಗೆ ಹಾದಿ !' ಎಂದು ಒಂದೆರಡು ಸಮಯೋಕ್ತಿಗಳನ್ನು ನಮ್ಮ ತಂದೆಯವರ ಕಿವಿಗೆ ಹಾಕಿ, ತಮಗೆ ತೋರಿದ ಒಂದೆರಡು 'ಇಲಾಜು'ಗಳನ್ನು ಹೇಳಿ ದರು. 'ಅವನ್ನು ಮಾಡಿಸಲೇ ಬೇಕು' ಎಂದು ಹಟ ಹಿಡಿಯುವ ರೀತಿ

ಯಲ್ಲೇ ಹೇಳಿದರು. ಯಾವುದಕ್ಕೂ ತಾವು ಸಂಜೆ ಬರುವುದಾಗಿಯೂ, ಪಟ್ಟಿಮಾಡಿಸಿಕೊಟ್ಟು ಒಂದೇ ದಿನದಲ್ಲಿ ಎಲ್ಲವನ್ನೂ ಮುಗಿಸಿಬಿಡುವುದಾಗಿ ಭಯಹಿಡಿಸಿ ಅದೃಶ್ಯರಾದರು.

* *

ಕೂಡಲೆ ನಮ್ಮ ಗೃಹವೈದ್ಯರು ನನ್ನ ಸಹಘರ್ಜನಿ (ಸಹಧರ್ಮಿಣಿಯೋಪಾದಿಯಲ್ಲಿ)ಯಾದ ಶಾರದೆಯನ್ನು 'ಬನ್ನಿ ಅಮ್ಮಾ ಇಲ್ಲಿ! ಎಂದು ಕೂಗಿದರು. ತಾವು ಈ ಮನೆಗೆ ಹಳಬರೆಂದೂ, ಅವರಲ್ಲಿ ನನ್ನಾಕೆಯು ಸಂಕೋಚಪಡಬೇಕಾಗಿಲ್ಲವೆಂದೂ ಹುರಿದುಂಬಿಸಿ.'

'ನಿಮ್ಮ ಯಜಮಾನರ ಕಾಯಿಲೆಯ ವಿಚಾರ ನಿಮಗೇನಾದರೂ ಗೊತ್ತಿದೆಯೆ?' ಎಂದು ಪ್ರಶ್ನಿಸಿದರು.

'ಗೊತ್ತಿಲ್ಲದೆ ಏನು! ತೀರ ಸಣ್ಣಗಾದರು! ನಿಶ್ಯಕ್ತಿ! ಯಾವುದಕ್ಕೂ ಉತ್ಸಾಹವಿಲ್ಲ....' ಎಂದು ಗೃಹಪುರಾಣವನ್ನು ಒದರಿದಳು.

'ಇದೆಲ್ಲಾ ನನಗೆ ಗೊತ್ತು. ಅವರಿಗೆ ಯಾವುದೋ ಮಾನಸಿಕ ಯೋಚನೆ ಗಂಟುಬಿದ್ದಿದೆ. ಆ ವಿಚಾರವೇನಾದರೂ ನಿಮಗೆ ಗೊತ್ತೇನು?'

'ಇಲ್ಲವೆಲ್ಲಾ, ಡಾಕ್ಟರೇ....ಹಾಗೇನಾದರೂ ಇದ್ದರೆ ಖಂಡಿತ ನನ್ನೊಡಿಗೆ ಹೇಳುತ್ತಿದ್ದರು.'

'ಅವರು ನಿದ್ದೆಯಲ್ಲೇನಾದರೂ ಕನವರಿಸಿಕೊಳ್ತಾರೇನು?'

'ಅಂಥಾದ್ದೇನೂ ಇಲ್ಲ.' ಎಂದು ಹೇಳಿದರೂ ಅವಳ ಮನಸ್ಸಿಗೆ ಅನುಮಾನ ತಾಕಿತ್ತು.

ಡಾಕ್ಟರ ಮುಖ ಈ ಉತ್ತರದಿಂದ ಕೊಂಚ ನಿರಾಶೆಯ ಕಳೆ ತಾಳಿತು. ಈ ಮನೋರೋಗ ಮನೆಯಾಕೆಗೂ ಚಕ್ಕರ್ ಕೊಟ್ಟಿದೆಯಲ್ಲಾ, ಎಂದು ಅವರಿಗೆ ಆಶ್ಚರ್ಯವೂ ಆಯಿತು.

ಈ ಬೇನೆ ಯಾವುದೆಂಬುದನ್ನು ಪತ್ತೆ ಹಚ್ಚಲು ವಿಧಾನವನ್ನು ಯೋಚಿಸುತ್ತ, ಹಣೆಯನ್ನು ಕೆರೆದುಕೊಂಡರು. 'ಸ್ಟೆತಸ್ಕೋಪಿ'ನಿಂದ

ಮೂಗನ್ನು ತಟ್ಟಿಕೊಂಡರು. ಆದರೂ ಬಗೆಹರಿಯಲಿಲ್ಲ. 'ಇರಲಿ ನೋಡೋಣ' ಎಂದು ಹೊರಡಲನುವಾದರು.

ಆಗ ಶಾರದೆ ಮತ್ತೆ ಹಜಾರಕ್ಕೆ ಬಂದು,

'ನೋಡಿದಿರಾ ಡಾಕ್ಟ್ರೇ, ಈಗ ಜ್ಞಾಪಕಕ್ಕೆ ಬಂತು' ಎಂದು ಡಾಕ್ಟರ ಕುತೂಹಲವನ್ನು ಕೆರಳಿಸಿದಳು.

'ಏನು' ಎಂದು ಅವಳ ಕಡೆಗೆ ಓಡಿಬಂದು, ಸೊಂಟ ಬಗ್ಗಿಸಿ ಕಿವಿ ಕೊಟ್ಟರು.

'ಎಲ್ಲಾ ಜ್ಞಾಪಕವಿಲ್ಲ. ಕೊಂಚ ಕೊಂಚ....' ಎಂದು ಆಕೆ ಸೆರಗನ್ನು ಸರಿಪಡಿಸಿಕೊಂಡು, ನೆರಿಗೆಯನ್ನು ನೇವರಿಸಿ, ಮುಂಗುರುಳುಗಳನ್ನು ನಾಲ್ಕಾರು ಬಾರಿ ತಿದ್ದಿ, ಹೇಳಲು ಸಿದ್ಧಳಾದಳು.

'ಸದ್ಯ ಏನು ಗೊತ್ತಿದೆಯೋ ಅದನ್ನೇ ಹೇಳಮ್ಮಾ, ಪರವಾಯಿಲ್ಲ' ಕಾಲೋಚಿತಕ್ಕೈದಿದಾತೃಣವೇ ಪರ್ವತವಲ್ಲವೆ? ಎಂಬುದು ಅವರ ದೃಷ್ಟಿ.

'ಮಲಗಿ ನಿದ್ರಿಸುತ್ತಿದ್ದವರು ಒಮ್ಮೆಲೆ, "ನಮಸ್ಕಾರ....ನಾನು ಅನೇಕ ಕವಿತೆಗಳನ್ನು ಬರೆದಿದ್ದೇನೆ. ಇದನ್ನು ತಮ್ಮಂಥ ಪ್ರೌಢ ವರ್ಗದ ಮಾಸ ಪತ್ರಿಕೆಯಲ್ಲಿ ಪ್ರಕಟಿಸಬೇಕು.....ಈ ತರುಣ ಕವಿಗೆ ಪ್ರೋತ್ಸಾಹ ಕೊಡಬೇಕು!" ಅಂತ ಏನೇನೋ ನಗು ನಗುತ್ತಾ ಹೇಳಿ ಕೊಂಚ ಹೊತ್ತು ಸುಮ್ಮನೆ 'ಹೂ'ಗುಟ್ಟುತ್ತಿರುತ್ತಾರೆ....

'ನಂತರ....''ಹಾಂ. ಆಗುವುದಿಲ್ಲವೆ? ನಾನು ಪ್ರಸಿದ್ಧ ಲೇಖಕ ನಾಗದ ಹೊರತು ಸಾಧ್ಯವಿಲ್ಲವೆ? ನನಗೆ ನಲವತ್ತು ವರ್ಷ ತುಂಬದ ಹೊರತು ಪ್ರಕಟಿಸಲಾಗುವುದಿಲ್ಲವೆ? ಕೆಲಸದಿಂದ ನಿವೃತ್ತರಾದವರಿಗೆ ಮಾತ್ರ ಮಾಸಲೇ?...." ಇನ್ನೂ ಏನೇನೋ ಬಾಯಿಗೆ ಬಂದಂತೆ ಹೇಳಿ, ನಿಟ್ಟುಸಿರು ಬಿಟ್ಟು ನಿರುತ್ಸಾಹರಾಗಿ ಮಲಗಿಬಿಡುತ್ತಾರೆ.'

'ಅಷ್ಟೆ ಡಾಕ್ಟ್ರೇ. ಇದೇ ಅವರು ಆಗಾಗ ನಾನು! ಕಂಡ ಹಾಗೆ, ಕನವರಿಸಿಕೊಳ್ಳೋದು. ಇದರಲ್ಲಿ ವಿಶೇಷವೇನೂ ಇಲ್ಲ. ಬೆಳಗಿನ ಹೊತ್ತು

ಧ್ಯೂವಾಗಲೂ ಕವಿತೆ ಬರೆಯುವುದೂ, ಓದುವುದರಲ್ಲೇ ಕಾಲ ಕಳೆಯು ತ್ತಾರಾದ್ದರಿಂದ ರಾತ್ರಿ ಅದನ್ನೇ ಹಂಬಲಿಸುತ್ತಾರೆ. ಒಂದಿಪ್ಪತ್ತು ಕವಿತೆ ಗಳನ್ನು ಬರೆದಿದ್ದಾರೆ. ನನಗೂ ಓದಿ ಹೇಳಿದ್ದಾರೆ. ಚೆನ್ನಾಗಿವೆ.' ಎಂದು ತನ್ನ ಸಹಜ ಬೆಡಗಿನಿಂದ ಹೇಳಿದಳು.

'ನೀವೇನೂ ಭಯಪಡಬೇಕಾಗಿಲ್ಲ.' ಎಂದು ಅಭಯ ಹಸ್ತವನ್ನು ನೀಡಿ ಡಾಕ್ಟರು ಹೊರಟರು.

* *

ದಾರಿಯುದ್ದಕ್ಕೂ ಡಾಕ್ಟರ ಎದೆ ತೊಳಸುತ್ತಿತ್ತು. ಅವರು ಅನೇಕ ಮನೋರೋಗಗಳನ್ನು ನೋಡಿದ್ದರು. ಅವುಗಳಿಗೆ ಚಿಕಿತ್ಸೆಯನ್ನೂ ಮಾಡಿ ದ್ದರು. ಆದರೆ....ಈ ಮನೋರೋಗಕ್ಕೆ ಚಿಕಿತ್ಸೆ ಏನೆಂಬುದು ಅವರಿಗೆ ಏನು ಮಾಡಿದರೂ ಹೊಳೆಯಲೇ ಇಲ್ಲ.

ಆಲೋಚನಾಮಗ್ನರಾಗಿ ಮುಂದುವರೆದರು.

* *

'ರೀಃ....ರೀ.'

ಕಿವಿಯಲ್ಲಿ ಜೋರಾಗಿ ಕೂಗಿ ಶಾರಿ ಕಣ್ಣು ಬಿಡಿಸಿದಳು. ಎಂದೂ ಮಧ್ಯಾಹ್ನದ ಹೊತ್ತು ನಿದ್ದೆ ಮಾಡದವನು ಆ ದಿನ ಗೊರಕೆ ಹೊಡೆ ಯುತ್ತಿದ್ದುದು ನನಗೇ ಆಶ್ಚರ್ಯ.

'ನಿಮಗೊಂದು ಕಾಗದ ಬಂದಿದೆ.' ಕಾಗದವನ್ನು ಕೈಯಲ್ಲಿ ಕುಣಿ ಸುತ್ತ, ಕತ್ತನ್ನು ವೈಯ್ಯಾರದಿಂದ ತೂಗಾಡಿದಳು.

ಕಾಗದ ತೆಗೆದುಕೊಂಡು ಅದನ್ನು ಬರೆದವರ ವಿಳಾಸ ನೋಡಿದೆ. 'ಕಿನ್ನರಿ'—ಕನ್ನಡದ ಲೋಕಮಾತ್ರ ಪ್ರಸಿದ್ಧ ಮಾಸಿಕ. ವಾ. ಚಂ. ೩—೦—೦. ಅಂಚೆ ವೆಚ್ಚ....ಇತ್ಯಾದಿ ವಿವರಗಳನ್ನು ಗಾಬರಿಯಿಂದ ದಾಟಿದೆ. ಆಮೇಲೆ,

ಮಾ|| ರಾ||.......ರಾಯರಿಗೆ.

ವಂದನೆಗಳು.

ಉಭಯ ಕುಶಲೋಪರಿ ಪ್ರಶ್ನೋತ್ತರಗಳಾದ ಬಳಿಕ,

"ನೀವು ಎಲೆಯಮರೆಯ ಕನ್ನಡಿಗರೆಂದು ಈಗ; ತಾನೆ ನಿಮ್ಮ ಮಿತ್ರೋಕ್ತಿಯಿಂದ ತಿಳಿಯಿತು. ನೀವು ಇಷ್ಟು ದಿನಗಳವರೆಗೂ ಗುಪ್ತವಾಗಿದ್ದುದು ಕನ್ನಡದೇವಿಗೆ ಅಮೋಘ ನಷ್ಟವೇ ಸರಿ! ಕನ್ನಡ ನಾಡಿಗೆ ನಿಜಕ್ಕೂ ನಿಮ್ಮಂಥವರ ಬರ ಬಂದಿದೆ...." ಹಾಗೆ, ಹೀಗೆ.

"ನಿಮ್ಮ ಕವಿತೆಗಳನ್ನೆಲ್ಲ ಈ 'ಕಿನ್ನರಿ'ಯನ್ನು ನಿಮ್ಮದೆಂದೇ ಭಾವಿಸಿ ಕಳುಹಿಸಿಕೊಡಿ. ಮುಂದಿನ ತಿಂಗಳು ನಿಮ್ಮದೊಂದು 'ಶಬ್ದ ಸಂಗ್ರಹ' ಬಂದೇ ತೀರಬೇಕು. ನೀವು ರಗಳೆಯನ್ನು ಜೋಡಿಸುವುದರಲ್ಲಿ ನಿಷ್ಣಾತರೆಂದು ಕೇಳಿ ಬಲ್ಲೆ. ನೀವು ನಮಗಾಗಿ ರಗಳೆಯೊಂದನ್ನು ಏಕೆ ನೇಯಬಾರದು? ಸಾಧ್ಯವಾದಷ್ಟು ಚಿಕ್ಕದಾಗಿರಲಿ. ಕೇವಲ ನಾಲ್ಕುಪುಟಗಳನ್ನು ಮೀರದಿದ್ದರೆ ತುಂಬಾ ಒಳ್ಳೆಯದು....

ಇಂತು,

ಸಂ---'ಕಿನ್ನರಿ'

ನನ್ನ ಮುಖವರಳಿತು. ಶಾರಿಯನ್ನು ಕೂಗಿದೆ. ಅವಳೆಲ್ಲೋ ಹೋಗಿದ್ದಳು. ಕೂಡಲೆ 'ಅವಳಿಲ್ಲ' ಎಂಬ ಕವನವನ್ನು ಜೋಡಿಸಿದೆ.

*  *

ಈಗ ನನ್ನ ಕವಿತೆಗಳು ಪುಂಖಾನುಪುಂಖವಾಗಿ 'ಕಿನ್ನರಿ'ಯಲ್ಲಿ ಪ್ರಕಟವಾಗುತ್ತಿವೆ. ಈ ಸಂತತ ಪ್ರಕಟನೆಯನ್ನು ನೋಡಿ ಮಿಕ್ಕ ಪತ್ರಿಕೆಗಳ ಸಂಪಾದಕರುಗಳೂ ತಲಾ ಒಂದೆರಡು ರಗಳೆಗಳನ್ನು ಕೇಳಿಕೊಂಡಿದ್ದಾರೆ. ನಾನೀಗ ಸಿದ್ಧಪ್ರಸಿದ್ಧ 'ರಗಳೇಲೇಖಕ'ನಾಗಿದ್ದೇನೆ.

ಈ ವೇಳೆಗೆ ನನ್ನ ಕಾಯಿಲೆಯೂ ಹೇಳಹೆಸರಿಲ್ಲವಾಗಿದೆ. ಮತ್ತೆ ದುಂಡು ದುಂಡಗೆ ಬೂದುಗುಂಬಳವಾಗಿ. ಹರಡಿಕೊಂಡಿದ್ದೇನೆ. ಚೆನ್ನಾಗಿ ರಕ್ತ ವೃದ್ಧಿಯಾಗಿದೆ. ನಿದ್ರೆಯಲ್ಲಿ ಕನವರಿಸುವುದೂ ನಿಂತಿತು.

ಬಿ. ಭೀಮರಾಯರು 'ನನ್ನ ತಾಯತದ ಮಹಾತ್ಮೆ, ಮೂಲಿಕೆಯ ಚುರುಕು' ಎಂದು ಎದೆತಟ್ಟಿಕೊಂಡರು. 'ಪ್ರಾಣ ದೇವರ' ದಯ ಎಂದು

ಅಜ್ಜಿ ಹರಕೆ ಸಲ್ಲಿಸಿದರು. ನಾನಂತು ನನ್ನ ರೋಗವನ್ನು ಗುಣಪಡಿಸಿದ ನಮ್ಮ 'ಗೃಹವೈದ್ಯ'ರ ಸಾಮರ್ಥ್ಯವನ್ನು ಕಂಡು ಬೆರಗಾದೆ.

*    *

ಬಹಳ ದಿನಗಳವರೆಗೂ ಅವರು ನಡೆಸಿದ ಚಿಕಿತ್ಸೆಯಾವುದೆಂಬುದು ನನಗೆ ಗೊತ್ತಾಗಲಿಲ್ಲ. ಕಡೆಗೆ ನನಗೆ ತಿಳಿದದ್ದು ಇಷ್ಟು ಮಾತ್ರ, 'ಕಿನ್ನರಿ'ಯ ಸಂಪಾದಕರು ನಮ್ಮ ಡಾಕ್ಟರ ತಮ್ಮನಂತೆ.

# ಆದರೂ ಪರವಾಯಿಲ್ಲ....

ನಾನು ಪೇಟೆಗೆ ಹೊರಟಾಗಲೆಲ್ಲಾ....

'ಕೈಯಲ್ಲಿ ದೊಡ್ಡ ಚೀಲವನ್ನೊ, ಪಂಚೆಯನ್ನೊ, ತೆಗೆದುಕೊಂಡು ಹೋಗಬಾರದೆ?' ಎಂದು ಮೃದುವಾಗಿ ಹೇಳುತ್ತದೆ ನನ್ನ ಎದೆ.

ಕಾರಣವಿಷ್ಟೆ! ನನ್ನ ಸೈಕಲ್ಲಿನ ರೀತಿ, 'ಹ್ಯಾಂಡಲಿ'ನ ಹಾರಾಟ, 'ವೀಲಿನ' ತಿರುಗಾಟ, ಚೈನಿನ ಚೆಲ್ಲಾಟ; ಫ್ರೇ ಮತ್ತು ಗೇರ್ ವೀಲುಗಳ ಚೀರಾಟ, ಪೆಡಲಿನ ಪೇಚಾಟ, ಬ್ರೇಕಿನ ಸಹಜ ಮುಷ್ಕರ--- ಇವನ್ನು ಕಂಡರೆ ನನ್ನ ಎದೆಗೆ ಗಾಬರಿ!

ಅಕಸ್ಮಾತ್ ಒಂದು ಅಪಘಾತವಾದರೆ, ನನ್ನ ಸೈಕಲ್ಲಿನ ಪರಿಣಾಮವೇನು? ಆ ಹಳೆಯ ಫ್ರೇಮು ಕನಿಷ್ಟವೆಂದರೂ, ಐದು ತುಂಡಾದರೂ ಆಗದಿರುತ್ತದೆಯೆ! 'ಹ್ಯಾಂಡಲ್' ಹರಿದು ಹೋಗುವುದಂತೂ ಖಂಡಿತ! ಉಳಿದ ಭಾಗಗಳಂತೂ ಪುಡಿ ಪುಡಿಯಾಗುವುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ.

'ಈರೀತಿ ಪುಡಿಯಾದ ಸೈಕಲನ್ನು ತರುವುದಾದರೂ ಹೇಗೆ? ಒಂದು ಕೈ ಚೀಲವಾಗಲಿ, ಪಂಚೆಯಾಗಲಿ ಇದ್ದರೆ ತರಲು ಅನುಕೂಲ ಅಲ್ಲವೆ?' ಎಂದು ನನ್ನ ಎದೆ ಹೇಳಿದಾಗ....

ನಾನು 'ಪರವಾಯಿಲ್ಲ' ಎಂದು ಉತ್ತರಿಸಿ ಏನನ್ನೂ ತೆಗೆದುಕೊಳ್ಳದೆ ಹೊರಟುಬಿಡುತ್ತೇನೆ.

'ಘರ್ಜನರ* ಸಂಗ ತ್ಯಜಿಸು....ಅದರ ತಂಟೆ ಬೇಡ....' ಎಂದು ಆಗಾಗ ಹೆದರಿಸುತ್ತದೆ ನನ್ನ ಎದೆ.

ಆದರೂ ನಾನು ಚಂಡಿ ಹಿಡಿದು 'ಅದರೊಂದಿಗೆ ಹೋಗೋದೆ!' ಎಂದು ವಕ್ರಮೂರ್ತಿಯನ್ನು ರೂಪಿಸಿಕೊಂಡು ಉತ್ತರಿಸುತ್ತಾ ಬೈಸ್ಕಲ್ಲಿನ ಮೇಲೆ ಕೈ ಹಾಕುತ್ತಲೇ ಇದ್ದೇನೆ.

ಬೆಳಗಾದರೆ ಅದರೊಂದಿಗೆ ಹೊರಡುತ್ತೇನೆ. ಸಂಜೆ ಅದರೊಂದಿಗೆ ಮನೆಗೆ ಬರುತ್ತೇನೆ. ಅದನ್ನು ಅಗಲಬೇಕಾದ ಸಂದರ್ಭಗಳಲ್ಲಿ ಜ್ಞಾಪಕದಿಂದ ಅದನ್ನು ಸರಪಳಿಯಿಂದ ಸುತ್ತಿ ಬೀಗದಿಂದ ಬಿಗಿಯುತ್ತೇನೆ.

ಅದರಿಂದ ನನಗಾದ ತೊಂದರೆಗಳು ವಿಪರೀತ. ಅದರ ಸ್ನೇಹ ಬೆಳಸಿ ನಾನು-'ನಿತ್ಯಕಾಯಿಲೆ' ಹೆಂಡತಿಯನ್ನು ಹೊಂದಿದ ಪ್ರಾಥಮಿಕ ಶಾಲಾ ಮಾಸ್ತರನಂತೆ....

....ಬೆಳಗಾದರೆ ನೀರೊಲೆಗೆ ಉರಿಹಾಕಿ, ಕೈತೊಳೆದು, ಖಾಯಿಲೆ ಯಾಕೆಯನ್ನು ಎಬ್ಬಿಸಿ, ಕೆಲವುಬಾರಿ ಎತ್ತಿ, ಮುಖ ತೊಳಸಿ, ಕಾಫಿ ಮಾಡಿ, ಕುಡಿಸಿ, ಕುಡಿದು; ಔಷಧಿಯ ಸೀಸೆಯನ್ನು ಜೇಬಿಗೆ ಇಳಿಸಿ 'ಹೂಂ, ಡಾಕ್ಟರಿಗೆ ಏನು ಹೇಳಲಿ (ಹೊಸದಾಗಿ)?'; ಎಂದು ಕೇಳಿ, ಆಲಿಸಿ ಪೇಟೆಗೆ ಹೊರಡುತ್ತಾನೆ.

....ದಾರಿಯಲ್ಲೆಲ್ಲಾ-'ನನ್ನಾಕೆಗೆ-ಹೂಂನಪ್ಪಾ ಅಂದರೆ; ಏನ್ಮಾಡಲಿ, ನನ್ನ ಪ್ರಾರಾಬ್ಧ- ಅವಳ ಕರ್ಮ. ಈಗ ಕೊಂಚ ಪರವಾಯಿಲ್ಲ. ಇನ್ನೂ ಹಾಗೇ ಇದೆ. ಏನು ವಾಸೀನೋ ಏನೋ ಒಂದೂ ತೋಚುವುದಿಲ್ಲ'.... ಇತ್ಯಾದಿ ಸತಿಕಥೆ ಮಾಡುತ್ತಾ ಹೋಗುತ್ತಾನೆ.

ಅದೇರೀತಿ ನನ್ನ ಕತೆಯೂ ಸಹ.

* *

---

*ಗಲಾಟೆಯವರು

ಮೊನ್ನೆ ನನ್ನ ಸ್ನೇಹಿತರೊಬ್ಬರು ಈ ಸೈಕಲ್ ಯಾವ 'ಮೇಕ್' ಎಂದು ಅಪಹಾಸ್ಯ ಮಾಡುವ ರೀತಿಯಲ್ಲಿ ಪ್ರಶ್ನಿಸಿದನು.

ನಾನು ಹೇಳಿದೆ: ನನ್ನ ಸೈಕಲ್ -ಮೇಕ್'ಗಳ ಸಂಗಮ-ಹೇಗೆ ನಾಟಕವು ಕಲೆಗಳ ಸಂಗಮವೊ ಹಾಗೆ! 'ಹರ್ಕ್ಯುಲಸ್' ಫ್ರೇಮ್, 'ಫಿಲಿಪ್' ಪೆಡಲು, 'ರ್ಯಾಲಿ'ಯ ರಿಮ್ಸ್, 'ಬ್ರಾಹ್ಮ್‌ಟನ್' ಹಬ್ಬು, ಬಿ. ಎಸ್. ಎ. ಮಡ್‌ಗಾರ್ಡ್.... ಇತ್ಯಾದಿ ಜಗತ್ತಿನ ಎಲ್ಲಾ ಪ್ರಮುಖ ಸೈಕಲ್ಲುಗಳ ಒಂದೊಂದು 'ಸೆಕೆಂಡ್‌ಹ್ಯಾಂಡ್' ಭಾಗಗಳ ಸಂಗ್ರಹವೇ ನನ್ನ ಸೈಕಲ್.

ನನ್ನ ಈ ವಾಹನಕ್ಕೆ ಬೆಲ್ಲೀನೋ ಇದೆ. ಆದರೆ ಬಹಳ ದಿನಗಳಿಂದ ಅದರ ನಾಲಿಗೆ ಸಿಕ್ಕಿಹಾಕಿಕೊಂಡಿದೆ. ಸೈಕಲ್ಲಿನ ದೃಷ್ಟಿಯಲ್ಲಿ ಅದು ರಿಟೈರ್ ಆದ ಹಾಗೆಯೇ. ಈ ಸುದ್ದಿಯನ್ನು ಹೇಗೋ ತಿಳಿದುಕೊಂಡ ಮಡ್‌ಗಾರ್ಡುಗಳು ಮತ್ತು ಗೇರ್‌ಕೇಸ್ ಸಹ ಬೆಲ್ಲಿನ ಕರ್ತವ್ಯವನ್ನು ಅಮೋಘವಾಗಿ ಮಾಡತೊಡಗಿವೆ! ನಾನು ಕೂಡ 'ಹೋಗಲಿ ಪಾಪ!' ಎಂದು ಸುಮ್ಮನಾಗಿದ್ದೇನೆ. ಮಿಲಿಟರಿ ಲಾರಿಯಷ್ಟೇ ಜೋರಾಗಿ ಜನರನ್ನು ಎಚ್ಚರಿಸುತ್ತವೆ. ಆಗಾಗ ಅಭ್ಯಂಜನವಿಲ್ಲದಿದ್ದರಂತು ಸಂತತವಾಗಿ ಆರ್ತನಾದಗಳನ್ನು ಆಲಿಸುತ್ತ ಹೋಗಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ ವಾಹನಾರೂಢನಾದ ಎಂಥ 'ಮುಂದಕೋಪಿ'ಗೂ ಸಿಟ್ಟು ಬಾರದಿರದು.

ಕೆಲವು ದಿನಗಳ ಹಿಂದೆ ಹಳ್ಳವೊಂದನ್ನು ನೆಗೆದು ಹುಲ್ಲು ಮುರಿದುಕೊಂಡ 'ಫ್ರೀವೀಲ'ನ್ನು ಬೇರೆ ಹಾಕಿಸಿದೆ. ನನ್ನ ದವಡೆಯ ಹಲ್ಲು ಸಹ ಅಲುಗಾಡತೊಡಗಿದೆ.

* *

ಆ ದಿನ ಇಳಿಜಾರು ರಸ್ತೆಯೊಂದರಲ್ಲಿ ಬರುತ್ತಿದ್ದಾಗ, ನನ್ನ ವಾಹನದ 'ಬ್ರೇಕ್' ಕತ್ತರಿಸಿ ಹೋಗಬೇಕೆ? ನಾನಂತು ಅನೇಕಬಾರಿ ಬುಗುರಿಯಂತಾಡಿ, ಬೆದರಿದ ಎತ್ತಿನಂತೆ ಸೈಕಲ್ಲಾಡಿಸಿ, ಹಲವರ ಮೊಣಕೈ, ಪಕ್ಕೆಗಳಿಗೆ 'ಹ್ಯಾಂಡಲ್'ನಿಂದ ಬಾರಿಸಿ, ಕೂಡಲೆ ಅವರ ಮುಖಕ್ಕೆ 'ಸಾರಿ'ಗಳನ್ನು ಒಗೆದು, ಸೈಕಲ್ ಹೋದಕಡೆ ಹೋದೆ.

ಕೊನೆಗೆ ಒಂದು ಲಾಂದ್ರದ ಕಂಬ, ಒಂದು ಅಂಗಡಿಯ ಜಗುಲಿ, ಒಬ್ಬ ಮಹನೀಯರ ಭುಜ, ಇವಿಷ್ಟನ್ನೂ ಏಕಕಾಲದಲ್ಲಿ ಆಶ್ರಯಿಸಿದ್ದರಿಂದ ಸೈಕಲ್ ನನಗೆ ಮಣಿದು ನಿಂತಿತು.

ಮತ್ತೊಂದು ದಿನ ನನ್ನ ಅಪ್ಪಣೆಯಿಲ್ಲದೆ ('ಹ್ಯಾಂಡಲಿ'ನ) ತಲೆಯ ಸ್ಕ್ರೂ ಸಡಿಲವಾಗಿತ್ತು. ಚೌಕದ 'ಪೋಲೀಸ್ ಪ್ರದಕ್ಷಿಣೆ'ಯ ಸಂದರ್ಭ ದಲ್ಲಿ ಈ ವಿಚಾರ ನನಗೆ ತಿಳಿಯಿತು. ನಾನೆಷ್ಟು ತಿರುಗಿಸಿದರೂ, ಸೈಕಲ್ ಮಾತ್ರ ದಿಕ್ಕು ಬದಲಾಯಿಸದೆ ಮುಂದೆ ಸಾಗಿತು. 'ಹ್ಯಾಂಡಲ್' ಮಾತ್ರ ನನ್ನ ಕೈಕೆಳಗೆ ಓಡಾಡಿತು.

ಆದಿನ ನನ್ನ ಜೀವ ಏಕೆ ಹಾರಿಹೋಗಲಿಲ್ಲವೆಂಬುದು ಇಂದಿಗೂ ನನಗೆ ಬಿಡಿಸಲಾರದ ಸಮಸ್ಯೆಯಾಗಿದೆ.

* *

ಅಂದು ಶನಿವಾರ. ಆ ದಿನ ನನ್ನಷ್ಟು ಸಂತೋಷದಿಂದ ರಸ್ತೆಯಲ್ಲಿ ತಲೆ ಎತ್ತಿಕೊಂಡು ಮತ್ಯಾರೂ ಹೋಗುತ್ತಿರಲಿಲ್ಲ. ಆ ದಿನವೇ 'ನಾಳೆ ಮನಿಯಾರ್ಡರು ಮುಟ್ಟುತ್ತೆ' ಎಂದು ಊರಿನಿಂದ ಕಾಗದ ಬಂದಿತ್ತು. ಮರುದಿವಸ ಭಾನುವಾರವೆಂಬುದೂ ಸಹ ಆ ಸಂತೋಷದ ಉಬ್ಬಿನಲ್ಲಿ ಮರೆತುಹೋಯಿತು. ಕ್ರಾಪಿನ ಬೈತಲೆಯನ್ನು ಬೆರಳಿನಿಂದ ನೇವರಿಸು ವುದು, ಗಳಿಗೆಗೊಂದು ಬಾರಿ ಕರವಸ್ತ್ರದಿಂದ ಬಾಯಿಯನ್ನು ಒರೆಸಿ, ಕೆನ್ನೆ ಸವರಿಕೊಳ್ಳುವುದು, ಕತ್ತನ್ನು ಹೆಗಲಮೇಲೆ ಸೆಟೆದು ನಿಲ್ಲಿಸುವುದು-ಇತ್ಯಾದಿ ಗಳನ್ನು ಪ್ರದರ್ಶಿಸುತ್ತ ಸೈಕಲ್ಲಿನ ಮೇಲೆ ಹೊರಟದ್ದೆ.

ಅಷ್ಟರಲ್ಲಿ ಯಾರೋ ಆನೆ ಪಟಾಕಿ ಹೊಡೆದಂತೆ ಸದ್ದಾಯಿತು. ಇನ್ನೂ ದೀಪಾವಳಿ ಬಹಳ ದಿನಗಳಿವೆ. ಆದರೂ ಈಗಲೇ ಪಟಾಕಿ ಪೇಟೆಗೆ ಬಂದಿದೆಯೆ? ಎಂದುಕೊಂಡು ಹಿಂತಿರುಗಿ ನೋಡಿದೆ.

ಕೆಲವು ಹುಡುಗರೆಲ್ಲ ನನ್ನ ಕಡೆಗೆ ನೋಡಿ ನಗುತ್ತಿದ್ದರು. ಹಲವರು ನಾಗರಿಕರು ನಕ್ಕಾದ ನಂತರ ನನ್ನ ಬಗ್ಗೆ 'ಪಾಪ' ಎಂದು ಉಸುರಿನ ಮರುಕ ತೋರಿದರು. ಕೆಲವರಂತು ನನ್ನನ್ನು ಕುರಿತು 'ನಿಮ್ಮದೇಕಣ್ರೀ....' ಎಂದು ನನ್ನ ಕಾಲಿನ ಕಡೆಗೆ ಕೈಚಾಚಿ, ಕಣ್ಣಗಲಿಸಿ ಕಿರಿಚಿದರು.

ಆ ಹುಡುಗಿ! ದಿನವೂ ಕಾಲೇಜಿಗೆ ಹೋಗುವಾಗ ನೋಡುತ್ತೇನೆ. ನನ್ನ ಕಡೆಗೆ ತಿರುಗಿ ನೋಡಲಿ, ಎಂದು ಬೆಲ್ಲು ಬಾರಿಸಿ, ಕೆಮ್ಮಿ, ಕೇಕರಿಸಿ, ಎತ್ತ ಕಡೆಗೋ ತಿರುಗಿ 'ಹಲ್ಲೋಃ' ಎಂದರೂ, ನನ್ನ ಕಡೆ ನೋಡುವುದಿಲ್ಲ. ನನ್ನದೇನು ಹೆಚ್ಚಲ್ಲ, ಆಕೆ ಯಾರಕಡೆಗೂ ನೋಡುವುದಿಲ್ಲ. ತಾನಾಯಿತು, ಟಾರಿನ ನೆಲವಾಯಿತು, ಮೂಗಿನ ತುದಿಯಾಯಿತು.

ಅಂಥವಳು ನನ್ನ ಕಡೆ ತಲೆ ಎತ್ತಿನೋಡಿ, ಪಕ್ಕದ ಹುಡುಗಿಗೆ ಮೊಣ ಕೈಯಿಂದ ತಿವಿದು 'ಅಲ್ಲಿ ನೋಡೇ' ಎಂದು ಮೆತ್ತಗೆ ಕೂಗಿ ತೆಳ್ಳನೆ ನಕ್ಕಳು. ಅಷ್ಟೇ ಅಲ್ಲ; ಬಾಯಿಗೆ ಕೈ ಮುಚ್ಚಿಕೊಂಡು ಕಿಸಿಕಿಸಿ ನಗಬೇಕೆ ?

ನನಗೂ ಕುತೂಹಲ ಕೆರಳಿತು. ಸುತ್ತಲಿನ ವಾತಾವರಣವೇ ನಗುತ್ತಿದೆ. ನನಗೂ ನಗು ಉಕ್ಕಿ ಹರಿದು, ಉರುಳಾಡಿ, ತುಳುಕಿ ಹೊರ ಬಿದ್ದು, ತುಟಿಗಳನ್ನು ಅಗಲಿಸಿಬಿಟ್ಟಿತು. ಓಹೋ, ಎಂದು ಕೇಕೆ ಹಾಕಿಬಿಟ್ಟೆ.

ಇಷ್ಟೆಲ್ಲಾ ನಡೆದದ್ದು ಚಿಟಕೆ ಹೊಡೆಯುವಷ್ಟರಲ್ಲಿ.

ಮರುಕ್ಷಣದಲ್ಲಿಯೇ ಕುರುಕ್ಷೇತ್ರದಲ್ಲಿ ಕರ್ಣನ ರಥ ಭೂಮಿಯಲ್ಲಿ ಹೂತುಹೋದಂತೆ, ನನ್ನ ಸೈಕಲ್ಲಿನ ಚಕ್ರ ಅರ್ಧಂಗುಲ ಕೆಳಕ್ಕಿಳಿಯಿತು. ಇದುವರೆಗೂ ಉಬ್ಬಿಕೊಂಡಿದ್ದ ವಾತಚಕ್ರ ಮುದುಕರ ಕೆನ್ನೆಗಳಂತೆ ಒಳ ಹೊಕ್ಕು ಮುದುಡಿಕೊಂಡವು. ಇಡೀ 'ರಿಮ್ಮೇ' ನೆಲಕ್ಕೆ ಮಲಗಿತು.

ಕೂಡಲೆ ನಾನು ಎಡ 'ಪೆಡಲಿ'ನ ಮೇಲೆ ನೆಗೆದು, ನೆಲಕ್ಕೆ ಧುಮುಕಿದೆ.

* *

ಈರೀತಿ ನನ್ನ ದ್ವಿಚಕ್ರ ವಾಹನವು ತೊಂದರೆ ಕೊಡುತ್ತಿದ್ದರೂ, ಅವನ್ನು ಆಪ್ತ ಮಿತ್ರನಂತೆ ಭಾವಿಸಿದ್ದೇನೆ. ಅದೂ ಕೂಡ ವೈಮನಸ್ಯ ತಂದುಕೊಳ್ಳದೆ ಮೊದಲಿನಂತೆ ನಡೆದುಕೊಳ್ಳುತ್ತಿರುವುದು ಮಹಾ ವಿಶೇಷ.

ಯಾರು ಏನೇ ಹೇಳಲಿ? ನಾನು ಮಾತ್ರ ಅವನೇ ನನ್ನ ನಿಜವಾದ ಮಿತ್ರ, ನಂಬಿಕೆಗೆ ಅರ್ಹ ಎಂದು ಭಾವಿಸಿದ್ದೇನೆ. ಅವನಿಂದಾಗಿ ಅನೇಕ

**ತೊಂದರೆಗಳೇನೋ ನಿಜ. 'ಆದರೂ ಪರವಾಯಿಲ್ಲ'** ಎಂದು ಪ್ರತಿ ಬಾರಿಯೂ ಅವನನ್ನು ಮನ್ನಿಸುತ್ತಲೇ ಇದ್ದೇನೆ.

* *

ಕಡೆಯದಾಗಿ ಮತ್ತೊಂದು ಸಂಗತಿ. ನಾನು ನನ್ನ ಸೈಕಲ್ಲನ್ನು ಕೊಂಡದ್ದು ಇಪ್ಪತ್ತ ಮೂರು ರೂಪಾಯಿಗೆ; ವಾಸ್ತವವಾಗಿ ಕೊಟ್ಟಿರುವುದು ಇಪ್ಪತ್ತೇ ರೂಪಾಯಿ. ಇದುವರೆಗೂ ಅದಕ್ಕಾಗಿರುವ ಖರ್ಚು ಒಟ್ಟು ಎಪ್ಪತ್ತ ಎರಡು ರೂಪಾಯಿ, ಮೂರು ಆಣೆ ಮಾತ್ರ.

ಈ ತಿಂಗಳು ನನ್ನ ಸೈಕಲ್ ರಿಪೇರಿ ಬಗ್ಗೆ 'ಬಿಲ್' ಎಷ್ಟಾಗು ವುದೋ ನೋಡಬೇಕು!

# ನಮ್ಮ ಮನೆ

ನಮ್ಮ ಮನೆ ನಮಗೊಂದು ಖಂಡಾಂತರವಾಗಿದೆ. ವರ್ಷಂಪ್ರತಿ ಬೆಳೆಯುತ್ತಿರುವ ನಮ್ಮ ಕುಟುಂಬ ಪರಿವಾರಕ್ಕೆ ಈ ಕಿಷ್ಕಿಂದೆ ಯಾವ ಕಾಲಿಗೆ? ಒಂದು ಪಡಸಾಲೆ, ಅಡಿಗೆ ಮನೆ, ಇದರೊಂದಿಗೇ ಸೇರಿಹೋಗಿರುವ ಬಚ್ಚಲುಮನೆ, ಇವಿಷ್ಟೂ ನಮ್ಮ ಮನೆಯ ಭಾಗಗಳು. ನಾವು ಬಂದಾಗ ಇದ್ದ ಎರಡು ದೀಪಗಳಲ್ಲಿ, ಒಂದಕ್ಕೆ 'ಸ್ವಿಚ್' ಕೆಟ್ಟುಹೋಗಿತ್ತು, ಮತ್ತೊಂದಕ್ಕೆ ಬಲ್ಬಿರಲಿಲ್ಲ. ನಲ್ಲಿಯೇನೋ ಇದೆ.

ಒಂಭತ್ತುವರೆ ಅಡಿ ಚದುರವಿರುವ ದೊಡ್ಡ ಪಡಸಾಲೆಯದು. ಈ 'ಹಾಲಿ'ನ ಅಲಂಕಾರ-ತಾವು ಒಮ್ಮೆ ನೋಡಬೇಕು, ಎಂದೆಂದಿಗೂ ಮರೆಯೋಲ್ಲ. ಆ ಅಡಿಗೆ ಮನೆಯಲ್ಲಿ ಒಬ್ಬರು ಮಲಗಬಹುದು. ಅವರೇ ಹುಳುವಿನಾಕಾರದಲ್ಲಿ ಮಲಗುವುದಾದರೆ ಮತ್ತೊಬ್ಬರು ಅದೇ ಸ್ಥಳದಲ್ಲಿ ಹಿಡಿಸಬಹುದು. ಪಡಸಾಲೆಯ ಅರ್ಧಭಾಗವನ್ನು ಪೆಟ್ಟಿಗೆ ಪತ್ತಾಸುಗಳು ಆಕ್ರಮಿಸಿವೆ. ಇವುಗಳಲ್ಲಿ ನಮ್ಮ ಶಾರಿಯದೇ ದೊಡ್ಡ ಹಿಸ್ಸೆ. ಗಂಡನ ಮನೆ ಪೆಟ್ಟಿಗೆ! ಅವರಣ್ಣ ಮದ್ರಾಸಿಗೆ ಹೋಗಿದ್ದಾಗ ತಂದುಕೊಟ್ಟ 'ಸೂಟ್‌ಕೇಸ್'! ತೌರುಮನೆಯಿಂದ ತಂದ 'ಟ್ರಂಕು'! ಅವರಕ್ಕ 'ನನಗೆ ಚಿಕ್ಕದು' ಎಂದು ಬಿಸಾಡಿದ್ದ ಪೆಟ್ಟಿಗೆ ಇತ್ಯಾದಿ.... ಇತ್ಯಾದಿ.... ಚಿಲ್ಲರೆ ಅಂಗ

ಡಿಯಲ್ಲಿ ಬೀಡಿ ಕಟ್ಟುಗಳನ್ನು ಪೇರಿಸಿರುವ ಹಾಗೆ ಪೆಟ್ಟಿಗೆಗಳ ರಾಶಿಯನ್ನು ಹೇರಿದ್ದಾಳೆ.

ಒಂದು ಮೂಲೆಯಲ್ಲಿ ಕುರ್ಜಿಯೊಂದಿದೆ. ಇದರಮೇಲೆ ಕುಳಿತಾಗಲೆಲ್ಲಾ ಅದು ಕೂಗಾಡುತ್ತದೆ. ಈ ಕುರ್ಚಿಯ ಮುಂದೆ, ಒರಗಿದರೆ ಓಲಾಡುವ ಮೇಜಿದೆ. ಈ ಮೇಜನ್ನು ನಾನು ನನ್ನ ಅಭ್ಯಾಸಕ್ಕಾಗಿ ಎಂದು ತಂದಿರುವುದೇನೋ ನಿಜ. ಆದರೆ ತಂದ ದಿನವೇ ಮನೆಯಾಕೆಯ ಆಕ್ರಮಣಕ್ಕೆ ಅದು ಸಿಕ್ಕಿಹೋಗಿದೆ. ಕುಂಕುಮ, ಕನ್ನಡಿ, ಬಾಚಣಿಗೆ, ಮಂಜು, ಕೆನೆ, ಮುಖಚೂರ್ಣಗಳ ಡಬ್ಬಗಳು, ಚೌಲಿಕಾಲು, ಹೇರ್‌ಪಿನ್ ....ಮೊದಲಾದುವುಗಳನ್ನು ಸಾಲಾಗಿರಿಸಿ, ನನ್ನ ವಸ್ತುಗಳಿಗೆ 'ನೋ ರೂಂ' ಮಾಡಿಬಿಟ್ಟಿದ್ದಳು. ಈಗ ನನ್ನ ಸಾಮಾನುಗಳು ಮಂಚದ ಬುಡದಲ್ಲೇ ಬಿದ್ದುಕೊಂಡಿವೆ.

ಇವಲ್ಲದೆ ಹಳೆಯ ಜೋಡುಗಳ ಸಾಲು ಮತ್ತು ಇಲಿಬೋನು ಒಂದು ಮೂಲೆಯನ್ನೂ, ಬೀಸುವಕಲ್ಲು, ಒನಕೆ, ಜರಡಿ ಇತ್ಯಾದಿ ಬಾಣಸ ಯಂತ್ರಗಳು ಮತ್ತೊಂದು ಮೂಲೆಯನ್ನೂ ಆಕ್ರಮಿಸಿವೆ. ಇವೆಲ್ಲ ವಸ್ತುಗಳ ಮಧ್ಯದಲ್ಲೇ ಕಿಟ್ಟುವಿನ ಬಸವಣ್ಣ ಮತ್ತು ತಳ್ಳುವಗಾಡಿ ಸಹ ನಿಂತಿವೆ. ಎಳೆಯ ಮಗುವಿನ ತೊಟ್ಟಿಲು ಕೂಡ ಈ 'ಹಾಲಿ'ನಲ್ಲೇ ತೂಗಾಡಬೇಕು. ಶಾರಿಯ ಚೊಚ್ಚಿಲು ಹೆರಿಗೆಯ ವಿನಾ, ಉಳಿದೆಲ್ಲ ಹೆರಿಗೆ, ಬಾಣಂತಿ ತನವೆಲ್ಲಾ ಈ ಪಡಸಾಲೆಯಲ್ಲೇ ನಡೆದಿವೆ !

ಆ ನೆಲವಾದರೂ ಖಾಲಿ ಇರುತ್ತದೆಯೆ? ಎಂದರೆ....ಉಹುಂ.... ಅದೂ ಸಾಧ್ಯವಿಲ್ಲ. ಎಳೆಯ ಮಗುವಿನ ಆಟದ ಸಾಮಾನಾದ ಗಿಲಿಕೆ, ಹಾಲುಹಾಕುವ 'ಒಳ್ಳೆ' ಉಣ್ಣೆಯ ಕುಲಾವಿ, ಹುಡುಗರ ಟೋಪಿ, ನಿಕ್ಕರು ಇತ್ಯಾದಿ ಶಿಶು ಸಾಮಾನುಗಳು ಕಿಕ್ಕಿರಿದು ಕುಳಿತಿರುತ್ತವೆ.

* *

ಆಕಸ್ಮಾತ್ತಾಗಿ ಯಾರಾದರೂ ಬಂದರೆ ತೀರಿತು. ಈ ಸಾಮಾನುಗಳನ್ನು ಗಡಿಬಿಡಿಯಲ್ಲಿ ಮೂಲೆಗೆ ಗುಂಪುಮಾಡಿ, ಮಂದಲಿಕೆಗೆ ಜಾಗ

ಮಾಡಿ ಅವರನ್ನು ಸ್ವಾಗತಿಸಬೇಕು. ಆತುರದಲ್ಲಿ ಮಂದಲಿಕೆಯಡಿಯಲ್ಲಿ ಸಿಕ್ಕಿಬಿದ್ದ ಮರದ ಬಸವಣ್ಣ, ಗಿಲ್ಕಿ ಇತ್ಯಾದಿಗಳು, ಮಂದಲಿಕೆಯ ಮೇಲೆ ಕುಳಿತವರನ್ನು ಗುದ್ದಿದಾಗ, ಅವರ ಮುಖ ಇಂಗು ನುಂಗಿದ ಮಂಗನಂತಾಗುವುದನ್ನು ನಾವು ನೋಡಲಾರೆವು, ಅವರು ತೋರಿಸಲಾರರು.

ಒಮ್ಮೆ ನನ್ನ ಮಗು ನಂ. ೫ ಆಟವಾಡುವುದಕ್ಕೆ ತೆಗೆದುಕೊಂಡಿದ್ದ 'ರತ್ನೂಡಿ'ಯನ್ನು ಪಡಸಾಲೆಯ ಬಾಗಿಲಿನ ಬುಡದಲ್ಲಿ ಬಿಸಾಡಿದ್ದ. ಆಗ ತಾನೆ ಆಗಮಿಸಿದ್ದ ನಮ್ಮ ನೆಂಟರೊಬ್ಬರು ಕಾಲುಗಳನ್ನು 'ರತ್ನೂಡಿ'ಯ ಮೇಲಿಟ್ಟ ಕೂಡಲೆ ಮಿಂಚಿನಂತೆ ಮುಂದೋಡಿ, ಹಿಂಭಾರ ಹುಟ್ಟಿ ಹಿಂಗಣ್ಣು ಹಾಕಿದರು. ಕೂಡಲೆ ಕೆಳಗುರುಳಿ, ಅವರ ತಲೆ ಒಂದು ಪಾರ್ಶ್ವದಲ್ಲಿ ಫೂರಿ ಊದಿದಂತೆ ಉಬ್ಬಿದ್ದರಿಂದ ನಾಲ್ಕು ದಿನಗಳ ವರೆಗೆ ಅವರು ಟೋಪಿಯನ್ನು ಧರಿಸಲು ಸಾಧ್ಯವೇ ಆಗಲಿಲ್ಲ.

ಮಳೆಗಾಲದಲ್ಲಿ ಮಾತ್ರ ನಮ್ಮ ಪೇಚಾಟವು 'ಪೇಳಲಸದಳ'. ಪಡಸಾಲೆಯಲ್ಲಿ ನಾನು ಹೊಸದಾಗಿ ಹರಾಜಿನಲ್ಲಿ ಕೊಂಡಿರುವ 'ರೇನ್ ಕೋಟ್' ಮತ್ತು ನೆನೆದ ಕೊಡೆ ಗರಿಗೆದರಿ ನಿಂತುಬಿಡುತ್ತವೆ. ಉಳಿದ ಅಲ್ಪಸ್ವಲ್ಪ ಜಾಗಕ್ಕೆ ಶಾರಿ ನೆನಸಿಕೊಂಡ ಸಿಲ್ಕುಸೀರೆ ಜೋತುಬಿದ್ದಿರುತ್ತದೆ. ಮಳೆಯ ನೀರಿಗೆ ಓಡಿ ಓಡಿ ಕೈಚಾಚುತ್ತ ಮೈ ಒಡ್ಡಲು ಅಪೇಕ್ಷಿಸುವ ಮಕ್ಕಳನ್ನು ಕತ್ತುಹಿಡಿದು ಹಿಂದಕ್ಕೆಳೆದು ಹಾಲಿಗೆ ಕೂಡಿದಮೇಲೆ ನಮಗೆ ಬಾಗಿಲ ತುದಿಯಲ್ಲದೆ ಮತ್ತೇನು ಗತಿ! ಅಡಿಗೆ ಮನೆಯಲ್ಲಾದರೂ ನಿಂತು ಉಸಿರು ಹಾಕೋಣವೆಂದರೆ ಅಲ್ಲಿಯೂ ಸಹ ಹೆಂಚುಗಳು ತೂತುಗಳಿಂದ ಕೂಡಿವೆ. ಕಿಟಕಿಗೆ ಗಾಜಿಲ್ಲ. ವಾತಾಯನವೋ, ರಂಧ್ರಮಯ. ಇದರಿಂದಾಗಿ ಅಡಿಗೆ ಮನೆಯಲ್ಲಿ ಮಳೆ ಬಂದಾಗ ನಿಂತರೆ 'ಷವರ್‌ಬಾತ್' ಖಂಡಿತ. ಈ ಬಗ್ಗೆ ನಮ್ಮ ಮನೆಯ ಮಾಲೀಕನಿಗೆ ಮೂವತ್ತುಸಾರಿ ಮೊರೆಯಿಟ್ಟು, ಕೊನೆಗೆ ಮೂರಾಮೂರಿಗೆ ನಿಂತರೂ ಸಹ ಆತ ಈಗಲೂ ಮೋರೆ ತಿರಿಪಿಕೊಂಡೇ ತಿರುಗುತ್ತಾನೆ.

ಈ ಫಜೀತಿಯಿಂದಾಗಿ ನಾವು ಯಾರಿಗೂ ಮನೆಯ ವಿಳಾಸವನ್ನು ತಿಳಿಸುವುದೇ ಇಲ್ಲ. ಆದರೆ ಯಾವ ನಕ್ಷತ್ರದಲ್ಲಿ ನಮ್ಮ ಮನೆಯನ್ನು

ಕಟ್ಟಲು ಅಸ್ತಿಭಾರ ಹಾಕಿದರೋ, ನಾನು ಬೇರೆ ಕಾಣೆ; ಇಷ್ಟಮಿತ್ರ ರಂತು-ಕೆಲವುವೇಳೆ ಅನಿಷ್ಟಮಿತ್ರರೂ ಸಹ-ನಮ್ಮ ಮನೆಗೆ ಬರುತ್ತಲೆ ಇರುತ್ತಾರೆ.

ಮನೆಗೆ ಬರುವವರು ಗಂಡಸರಾದರೆ ಹೇಗೋ ಅನುಸರಿಸಬಹುದು. ಮಂದಲಿಕೆ ಹಿಡಿಸುವತನಕ - ಚಿಂತೆಯಿಲ್ಲ. ಶಾರಿಗೆ ಮಾತ್ರ ಅಡಿಗೆ ಮನೆಗೆ ಗಡೀಪಾರು. ಅವಳು ಜೊತೆಯಲ್ಲಿ ತರುಬಿಕೊಂಡು ಹೋಗಿದ್ದ ನಮ್ಮ 'ಚಿಳ್ಳೆಪಿಳ್ಳೆ'ಗಳೆಲ್ಲ ಅತಿಥಿಗಳು ಬಂದು ಕುಳಿತ ಒಂದೆ ರಡು ನಿಮಿಷಗಳಲ್ಲಿಯೇ, ಒಬ್ಬೊಬ್ಬರಾಗಿ ಹಾಲಿಗೆ ತೂರುತ್ತಾರೆ. 'ಇವೆಲ್ಲಾ ನಿಮ್ಮವೋ ?....' ಎಂಬ ಅವರ ಪ್ರಶ್ನೆಗೆ 'ಹೂಂ' ಎಂದು ನಾನು ಉತ್ತರಿಸುವಾಗ ಅಡಿಗೆ ಮನೆಯ ಬಾಗಿಲಹಿಂದೆ ನಿಂತು ನಮ್ಮ ಸಂಭಾಷಣೆ ಯನ್ನು ಆಲಿಸುವ ಶಾರಿಯ ಮುಖದಮೇಲೆ ನಾಚಿಕೆಯ ಮಿನುಗು, ಅಭಿ ಮಾನದ ಕಳೆ ಮೂಡುತ್ತದೆ.

ಕೂಡಲೆ ಮನೆಗೆ ಬಂದ ಆ ಇಷ್ಟಮಿತ್ರರು ನನ್ನ ಹುಡುಗರನ್ನೂ ಕರೆದು, ಕೆನ್ನೆ ಸವರಿ, ಮೂಗು ಹಿಂಡಿ, ಕೆಲವುವೇಳೆ ಮುತ್ತಿಟ್ಟು, ಮಾತ ನಾಡಿಸುತ್ತಾರೆ. ನನ್ನ ಶಿಶುವೃಂದವೂ ಸಹ ಲಜ್ಜೆಯನ್ನು ತ್ಯಜಿಸಿ, ಅವರ ಬಳಿ ಸುಳಿದಾಡುತ್ತವೆ. ಅವರ ತೊಡೆಯಮೇಲೇರಿ ಅಂಗಿಯ ಗುಂಡಿ ಯನ್ನು ತಿರುಗಿಸುತ್ತ ಅವರ ಮುಂಗೈಮೇಲಿನ ಕೂದಲು ಕೀಳಲು ಪ್ರಯ ತ್ನಿಸುತ್ತವೆ. ಜೇಬಿಗೆ ಸಹ ಕೈ ಹಾಕುತ್ತವೆ.

ಒಂದುವೇಳೆ ಹೆಂಗಸರು ನಮ್ಮ ಮನೆಗೆ ಬಂದಲ್ಲಿ ನನ್ನವಸ್ಥೆ ತೀರಿತು. ಬರುವವರು ನನ್ನನ್ನು 'ಎದ್ದುಹೋಗಿ' ಎಂದು ಆಜ್ಞಾಪಿಸುವ ದೃಷ್ಟಿಯಲ್ಲಿ ಹೊರಬಾಗಿಲಿನ ಹೊಸ್ತಿಲಮೇಲೆ ಹೆಜ್ಜೆಟ್ಟು ಮುಸೆಯುತ್ತ ನಿಲ್ಲುತ್ತಾರೆ. ಶಾರಿಯ ಹುಬ್ಬಿನ ಸನ್ನೆಯ ಮೇರೆಗೆ ನಾನು ಹೆಗಲಮೇಲೆ ಟವಲ್ ಏರಿಸಿ ಕೊಂಡು ಹೊಸಲು ದಾಟಿ, ಆ ಹೆಣ್ಣುಗಳ ಬಳಗಕ್ಕೆ ಅವ್ಯಕ್ತ ಸ್ವಾಗತವನ್ನು ನೀಡುತ್ತೇನೆ. ಶಾರಿಯ ಈ ಸ್ನೇಹಿತೆಯರು ಹೊರಡುವವರೆಗೂ ನಾನು ಸಾಲುಮರಗಳ ಕೆಳಗೋ, ಕಲ್ಲುಬೆಂಚಿನ ಮೇಲೋ ಕಾಲ ಕಳೆಯುತ್ತಿರ ಬೇಕಾಗುತ್ತದೆ.

ಮೊನ್ನೆ ಭಾನುವಾರ ಆ ಘಟನೆ ನಡೆದಾಗಿನಿಂದ ನನ್ನ ಮನಸು ತುಂಬಾ ಹೇಸಿಹೋಗಿ ಈ ಮನೆಯ ಸಹವಾಸ ಸಾಕಪ್ಪಾ!' ಎನ್ನುವಂತಾಗಿದೆ.

ನಾನು ಮತ್ತು ಶಾರಿ ಆದಿನ ಸಿನಿಮಾ ನೋಡಲು ಹೋಗಬೇಕೆಂದು ತೀರ್ಮಾನಿಸಿದ್ದೆವು. ಬಹು ಸಂಭ್ರಮದಿಂದ ಶಾರಿ ಸಂಜೆಯ ಅಡಿಗೆಯನ್ನು ಮೂರು ಗಂಟೆಯೊಳಗಾಗಿ ಮುಗಿಸಿ, ಅಲಂಕಾರಕ್ಕೆ ಆರಂಭಿಸಿದ್ದಳು. ಕೊಂಚ ಖುಷಿಯಮೇಲಿದ್ದ ಆಕೆಯನ್ನು ಕರೆದು ಹತ್ತಿರ ಕೂಡಿಸಿಕೊಂಡೆ.

ನಾಲ್ಕು ಗಂಟೆಗೆ ಸರಿಯಾಗಿ ನಾಲ್ಕೈದು ಮಂದಿ ನೆಂಟರು ನಮ ಮನೆಗೆ ಕಾಲಿಡಬೇಕೆ? ಜಡಿಮಳೆ ಹಿಡಿದಿದ್ದರೂ, ನೆಂಟರು ಬಂದ್ಬಿಡಬೇಕೆ? ಎಂದು ಶಾರಿಗೆ ಮೆಲ್ಲನೆ ಹೇಳಿದೆ. ಅವರೆಲ್ಲರು ನಮ್ಮಾಕೆಯ ತೌರುಮನೆಯ ಕಡೆಯವರಾದ್ದರಿಂದ ನಾನು ಹೆಚ್ಚಾಗಿ ಟೀಕೆ ಮಾಡುವಂತಿರಲಿಲ್ಲ.

ಆದರೆ ಶಾರಿಗೂ ಸ್ವಲ್ಪ ಕೋಪ ಬಂದಿತ್ತು. ಎಷ್ಟೋ ದಿನಗಳಾದ ಮೇಲೆ 'ಸಿನಿಮಾ' ನೋಡಲು ಹೊರಟಿದ್ದೆವು. ಸಿನಿಮಾ ಯೋಚನೆ ತಲೆ ಕೆಳಕಾಯಿತು. ಅಲ್ಲದೆ, ಪುನಃ ಅಡಿಗೆ ಅಟ್ಟಬೇಕಾಯಿತು. ಪಾಪ!

ಬಂದಿದ್ದ ನೆಂಟರಲ್ಲಿ ಹೆಚ್ಚುಮಂದಿ ಹೆಂಗಸರು, ಒಂದಿಬ್ಬರು ಹುಡುಗರಿದ್ದರು. ನಾನಿನ್ನು ಹೊರಡಲು ಸಿದ್ಧನಾದೆ. ಅಷ್ಟರಲ್ಲಿ ಪಂಚೆಯನ್ನಾದರೂ ಒಗೆದುಹಾಕೋಣವೆನ್ನಿಸಿತು. ಬಕೆಟ್ಟನೊಡನೆ ನಲ್ಲಿಯ ಬಳಿಗೆ ಹೊರಟೆ. ಬಟ್ಟೆ ಒಗೆದು ಹಿಂಡಿದಾಗ, ನೀಲಿ ಮುಗಿದುಹೋಗಿರುವುದು ನೆನಪಾಯಿತು. ನೆನಪಾದಬಳಿಕ ಅದನ್ನು ತರದಿರುವುದು ಸಾಧ್ಯವೆ? ಸರಿ-ಅಂಗಡಿ ಬೀದಿಯ ಕಡೆಗೆ ಹೊರಟೆ, ನೀಲಿಯನ್ನು ಕೊಳ್ಳಲು.

ನೀಲಿಯನ್ನು ಕೊಂಡು ತರುವಷ್ಟರಲ್ಲಿ ನನ್ನ ಬಕೆಟ್ಟಿಗೆ ಯಾರೋ ನೀಲಿಯನ್ನು ಹಾಕಿದ್ದರು. 'ಶಾರಿಯೇ ಹಾಕಿರಬೇಕು. ಹಿಂದಿನಸಾರಿ ತಂದಿದ್ದರಲ್ಲಿ ಅಲ್ಪಸ್ವಲ್ಪ ನೀಲಿ ಉಳಿದಿರಬೇಕು' ಎಂದುಕೊಂಡು, ನನ್ನ ಹಿಂಡಿದ ಪಂಚೆಯನ್ನು ಅದರಲ್ಲಿ ಅದ್ದಿ ಜಾಲಾಡಿ ಹಿಂಡಿದೆ.

ಪಂಚೆಯನ್ನು ಹೊರತೆಗೆದಾಗ ನನಗೆ ತುಂಬಾ ಆಶ್ಚರ್ಯವಾಯಿತು. ಬಿಳಿಯ ಫಿನ್ಲೆ ಪಂಚೆ ಎಳೆಯ ನೀಲಿ ಬಣ್ಣವನ್ನು ಧರಿಸಿತ್ತು. ಪಂಚೆಯ ಬಣ್ಣವನ್ನು ನೋಡಿ, ನನಗೆ ರೇಗಿಹೋಯಿತು. ನೆಂಟರು ಬಂದಿದ್ದರಾದ್ದರಿಂದ 'ಲೇ....ಲೇ' ಎಂದು ಲಘುವಾಗಿ ಕೂಗಿದೆ. ಸದ್ಯ ಬೇಗನೆ ಎದ್ದು ಬಂದಳು.

"ನೋಡು, ಪಂಚೆ ಹೇಗಾಗಿದೆ, ಸೀರೆಯಹಾಗೆ....ಎಂಥ ನೀಲಿ ಹಾಕಿದ್ಯೋ, ದೇವರಿಗೇ ಪ್ರೀತಿ"

"ಅದು ನೀಲಿ ಅಲ್ರೀ. ಈಗತಾನೆ ಬಂದ ನೀಲಮ್ಮನವರು ನೀಲಿ ಸೀರೆ ಮಳೆಯಲ್ಲಿ ವಿಪರೀತ ನೆಂದಿದ್ದರಿಂದ, ಅದನ್ನು ಹಿಂಡಿ ಒಣಗಿ ಹಾಕ್ತೀನಿಂತ ಅಂತಿದ್ರು. ಸ್ವಲ್ಪ ತಾಳಿ" ಎಂದು ಒಳನುಗ್ಗಿ, ಎರಡು ನಿಮಿಷದಲ್ಲಿ ಮತ್ತೆ ಬಂದು,

ಹೌದ್ರೀ, ನೀಲಿ ತರೋಕೆ ಹೋದಾಗ, ಅವರು ಸೀರೆಯನ್ನು ಹಿಂಡಿ ಒಣಗಿಹಾಕಿದ್ದಾರೆ. ಆ ಸೀರೆ ಬಣ್ಣ ಬಿಟ್ಟುಕೊಂಡ ನೀರಿನಲ್ಲೇ, ನೀವೂ ಪಂಚೆ ಅದ್ದಿಬಿಡಬೇಕೆ? ಇದು ಏನು ಅಂತ ಕೇಳಬಾರ್ದೆ ? ಪಂಚೆ ಸಿಕ್ಕದ ಕಾಲದಲ್ಲಿ, ಈ ಫಿನ್ಲೆ ಪಂಚೆ ಹಾಳುಮಾಡಬೇಕೆ? ಚೆನ್ನಾಯಿ!" ಎಂದು ಗೊಣಗಿದಳು.

ಅಂದಿನಿಂದ ನನಗೆ ನಮ್ಮ ಮನೆಯಬಗ್ಗೆ ಮನಸ್ಸು ರೋಸಿ ಹೋಗಿದೆ.

## ನಮ್ಮ ಇತರ ಪ್ರಕಟನೆಗಳು

ಇಂದಿನ ಭೀಕರ ದಾರಿದ್ರ್ಯ, ದೈನ್ಯತೆಗಳ ಸತ್ಯಚಿತ್ರಣ

# ಕಾ ರ ವಾ ನ್

ಕತೆಗಾರರು : **ಶ್ರೀ. ಬಸವರಾಜ ಕಟ್ಟೀಮನಿ**

೧೨೦ ಪುಟಗಳು — ಬೆಲೆ : ೧ ರೂ.

◆

"ಕತೆಗಳಲ್ಲಿ ವಸ್ತುವೈವಿಧ್ಯತೆಯಿದೆ, ಶೈಲಿಯಲ್ಲಿ ಮನಸೆಳೆಯುವ ಮುನ್ನೋಟವಿದೆ, ಪಾತ್ರಗಳಲ್ಲಿ ಕಲಾವಿದನ ಅಮರಚಿತ್ರಗಳಂತಹ ವಿವೆ....ಕಾವಿರುವಷ್ಟೆ ಕಾಂತಿಯುತವಾಗಿರುವ ಸ್ಫೂರ್ತಿಯುತ ಸಾಹಿತ್ಯವಿದು...."

—**'ಕಥಾವಳಿ'**

---

ಭಾರತದ ರಾಜಕೀಯ ಹೋರಾಟವನ್ನು ಹಿನ್ನೆಲೆಯಾಗಿಟ್ಟು ಕೊಂಡು ರಚಿಸಲ್ಪಟ್ಟ ಮೊದಲನೆಯ ಕನ್ನಡ ಕೃತಿ.

# ಸ್ವಾತಂತ್ರ್ಯದೆಡೆಗೆ

ಕಾದಂಬರಿಕಾರರು : **ಶ್ರೀ. ಬಸವರಾಜ ಕಟ್ಟೀಮನಿ**

೨೩೦ ಪುಟಗಳು — ಬೆಲೆ : ೨ ರೂ.

◆

"....ಈ ಪುಟ್ಟ ವಿಮರ್ಶೆಯಿಂದ ಲೇಖಕರಿಗಾಗಲಿ, ಅವರ 'ಸ್ವಾತಂತ್ರ್ಯದೆಡೆಗೆ' ಆಗಲಿ, ನಾವು ಉಚಿತ ಮರ್ಯಾದೆ ಕೊಟ್ಟಂತಾಗಲಿಲ್ಲ. **ಕನ್ನಡಿಗರೆಲ್ಲರೂ ಅತ್ಯವಶ್ಯವಾಗಿ ಓದಬೇಕಾದ ಗಂಡುಬರಹವಿದು"**

—**'ಪ್ರಜಾಮತ'**

ವಾಚಕ, ವಿಮರ್ಶಕರೆಲ್ಲರ ಮೆಚ್ಚುಗೆ ಪಡೆದ
ಆಕರ್ಷಕ ಸಂಕಲನ

ಇಬ್ಬರು ಕತೆಗಾರರ ಎಂಟು ಕತೆಗಳ ಸಂಗ್ರಹ

## ಜೀವನಕಲೆ

ಲೇಖಕರು : ಶ್ರೀ. ಬಸವರಾಜ ಕಟ್ಟೀಮನಿ
ಮತ್ತು ಶ್ರೀ. ಜಿ. ಬಿ. ರಾಜ್

೧೦೦ ಪುಟಗಳು ಬೆಲೆ ೧ ರೂ.

'ಶಕ್ತಿಪೂರ್ಣ ಶೈಲಿಯಿಂದ ಕೂಡಿದ ಗೆಳೆಯ ಬಸವರಾಜರ ಕತೆಗಳನ್ನು ಓದುವುದೆಂದರೆ ಅದೊಂದು ಆನಂದವೇ....ಸಫಲ ಕಥಾ ಸಂಕಲನ ಇದೆಂದು ಧಾರಾಳವಾಗಿ ಹೇಳಬಹುದು.'

—ದೇಶಬಂಧು

ಆಗಸ್ಟ್ ಕ್ರಾಂತಿಯ ಹಿನ್ನೆಲೆಯಲ್ಲಿ ಚಿತ್ರಿಸಲ್ಪಟ್ಟ
ಭಾರತವೀರರ ಸತ್ಯಕತೆಗಳು !

ಶ್ರೀ. ಕಟ್ಟೀಮನಿಯವರ ಇತ್ತೀಚಿನ ಕಥಾಸಂಗ್ರಹ

## ಆಗಸ್ಟ್ ಒಂಭತ್ತು

೧೨೦ ಪುಟಗಳು ಬೆಲೆ ೧-೮-

: ಪ್ರತಿಗಳಿಗೆ:

**ಶಾರದಾ ಪ್ರಕಟನಾಲಯ**

೨೩೯-ಬಿ, ಅರಳೇಪೇಟೆ ಬೆಂಗಳೂರು ನಗರ.